ಯಾದಗಿರಿ ಪರಿಸರದ ಮೊಹರಂ ಪದಗಳ ಅನನ್ಯತೆ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ
ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಸಂಪ್ರಬಂಧ)

ಸಂಶೋಧಕರು

ರವಿ ಗೋಮ್ಯಾ

ಮಾರ್ಗದರ್ಶಕರು

ಡಾ. ರಹಮತ್ ತರೀಕೆರೆ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೮

ಯಾದಗಿರಿ ಪರಿಸರದ ಮೊಹರಂ ಪದಗಳ ಅನನ್ಯತೆ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ
ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಸಂಪ್ರಬಂಧ)

ಸಂಶೋಧಕರು
ರವಿ ಗೋಮ್ಯಾ

ಮಾರ್ಗದರ್ಶಕರು
ಡಾ. ರಹಮತ್ ತರೀಕೆರೆ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೦೮

ಪ್ರಮಾಣ ಪತ್ರ

"ಯಾದಗಿರಿ ಪರಿಸರದ ಮೊಹರಂ ಪದಗಳ ಅನನ್ಯತೆ" ಎಂಬ ಸಂಪ್ರಬಂಧವನ್ನು **ಡಾ. ರಹಮತ್ ತರೀಕೆರೆ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತೇನೆ. ಎಂ.ಫಿಲ್. ಪದವಿಗಾಗಿ ಭಾಷಾ ನಿಕಾಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ
ದಿನಾಂಕ: 24/10/08

ರವಿ ಗೋಮ್ಯಾ
ಸಂಶೋಧಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ದೃಢೀಕರಣ ಪತ್ರ

"ಯಾದಗಿರಿ ಪರಿಸರದ ಮೊಹರಂ ಪದಗಳ ಅನನ್ಯತೆ" ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ರವಿ ಗೋಮ್ಯ ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: 22/10/08

(ಡಾ. ರಹಮತ್ ತರೀಕೆರೆ)

ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

ಕೃತಜ್ಞತೆಗಳು

"ಯಾದಗಿರಿ ಪರಿಸರದ ಮೊಹರಂ ಪದಗಳ ಅನನ್ಯತೆ" ಎಂಬ ಸಂಶೋಧನ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಒಪ್ಪಿಸಲು ಅವಕಾಶ ಮಾಡಿಕೊಟ್ಟ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎ.ಮುರಿಗೆಪ್ಪ ಹಾಗೂ ಕುಲಸಚಿವರಾದ ಡಾ. ಹಿ.ಚಿ.ಬೋರಲಿಂಗಯ್ಯರವರಿಗೆ ವಂದನೆಗಳು.

ಅಧ್ಯಯನ ಕೈಗೊಳ್ಳಲು ಆಡಳಿತಾತ್ಮಕ ಅನುಮತಿ ನೀಡಿ ಸಲಹೆಗಳನ್ನು ಸಹಕಾರ ನೀಡಿದ ಅಧ್ಯಯನಾಂಗದ ನಿರ್ದೇಶಕರಾದ ಡಾ.ಡಿ.ಪಾಂಡುರಂಗಬಾಬು ಹಾಗೂ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ.ಬಿ.ಎಂ.ಪುಟ್ಟಯ್ಯ ಅವರುಗಳಿಗೆ ಅನಂತ ಧನ್ಯವಾದಗಳನ್ನು ಸಲ್ಲಿಸುವುದು ಆದ್ಯ ಕರ್ತವ್ಯವೆಂದು ಭಾವಿಸುತ್ತೇನೆ.

ಅಧ್ಯಯನ ಕೈಗೊಳ್ಳಲು ನನಗೆ ನಿಬಂಧದ ವಿಷಯ ಸೂಚಿಸಿ, ಅಧ್ಯಯನದುದ್ದಕ್ಕೂ ತಪ್ಪುಗಳನ್ನು ತಿದ್ದುತ್ತಾ ತಿಳಿಹೇಳಿ ತಾಳ್ಮೆಯ ಮಾರ್ಗದರ್ಶನ ನೀಡಿದ ಮಾರ್ಗದರ್ಶಕರಾದ ಡಾ. ರಹಮತ್ ತರೀಕೆರೆ ಅವರಿಗೆ ನನ್ನ ವಂದನೆಗಳು.

ನನ್ನ ಅಧ್ಯಯನಕ್ಕೆ ಸ್ಫೂರ್ತಿ ಮತ್ತು ಸಲಹೆ ನೀಡಿದ ಹಾಗೂ ನನ್ನನ್ನು ಪ್ರೀತಿಯಿಂದ ಕಂಡು ವಿಚಾರಿಸಿ ಅಧ್ಯಯನದ ತಾತ್ವಿಕ ಬೋಧನೆಯನ್ನು ನೀಡಿದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಪ್ರವಾಚಕರುಗಳಾದ ಡಾ.ಎನ್.ಅಮರೇಶ್, ಡಾ.ಆರ್.ವೆಂಕಟೇಶನ್, ಡಾ.ಮಲ್ಲಿಕಾರ್ಜುನಗೌಡ ಅವರುಗಳಿಗೆ ಹೃದಯ ಪೂರ್ವಕ ವಂದನೆಗಳು ಹಾಗೂ ವಿಭಾಗದ ಸಿಬ್ಬಂದಿ ವರ್ಗದವರಾದ ಶ್ರೀ ಶಿವಪ್ಪ ಕೊಳ್ಳೂರು ಹಾಗೂ ಹನುಮಂತಪ್ಪ ಅವರಿಗೂ ನನ್ನ ವಂದನೆಗಳು. ಹಲವಾರು ಕಷ್ಟಗಳ ನಡುವೆಯಲ್ಲಿ ಹಗಲು–ಇರುಳು ಮಗನ ಓದನ್ನು ಮತ್ತು ಏಳ್ಗೆಯನ್ನು ಸದಾ ಬಯಸುತ್ತಿರುವ ತಂದೆ–ತಾಯಿ ಇವರುಗಳಿಗೆ ಹಾಗೂ ಅಣ್ಣ–ತಮ್ಮಂದಿರುಗಳಿಗೂ ನನ್ನ ನಮನಗಳು.

ಅಧ್ಯಯನದುದ್ದಕ್ಕೂ ಸಕಲ ರೀತಿಯಿಂದ ಸಹ ಮನಷ್ಕೆ ಸ್ನೇಹಿಗಳಾದ ಕುಮಾರಣ್ಣ ತುಕಾರಾಮ, ಅರುಣ್ ಜೋಳದ ಕೂಡ್ಲಿಗಿ ಹಾಗೂ ಎಂ.ಫಿಲ್. ತರಗತಿಯ ಸಹಪಾಠಿಗಳಾದ ಮಹಾಂತಗೌಡ, ಸೀತಾರಾಮ, ಬೋರಮ್ಮ, ಉಮಾಮಹೇಶ್ವರಿ, ಶಂಕರಲಿಂಗಯ್ಯ ಇವರಿಗೆ ವಂದನೆಗಳು.

ಗೆಳೆಯರಾದ ಈಶ್ವರ ರಾಠೋಡ, ಅಂಜನೇಯ್ಯ, ಸುರೇಶ ಪವಾರ, ಗೋಪಾಲ ರಾಠೋಡ್,ಪಿ.ಎಸ್.ಐ. ರಂಗನಾಥ.ಕೆ., ಹಾಗೂ ನನ್ನ ಯಶಸ್ಸಿಗೆ ಪ್ರೋತ್ಸಾಹಿಸುತ್ತಿರುವ ಶಾಂಭವಿ ಅವರಿಗೂ ವಂದನೆಗಳು. ಇದರಂತೆ ನನಗೆ ಸದಾ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಡುತ್ತಿರುವ ನನ್ನ ಉದಯಕುಮಾರ ಕುಲಕರ್ಣಿ ಮತ್ತು ಉಮಾ ಕುಲಕರ್ಣಿ ಇವರಿಗೆ ವಂದನೆಗಳು.

ಸ್ಥಳ : ವಿದ್ಯಾರಣ್ಯ

ರವಿ ಗೋಮ್ಯಾ

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಪೀಠಿಕೆ

ಹೈದರಾಬಾದ್ ಕರ್ನಾಟಕ ಪ್ರದೇಶದ ಇತಿಹಾಸವು ವಿಶಿಷ್ಟತೆಯಿಂದ ಕೂಡಿದೆ. ಈ ಪ್ರದೇಶವನ್ನು ಕ್ರಿ.ಶ.೧೩೪೭ರಲ್ಲಿ ಕಲಬುರ್ಗಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಬಹಮನಿಗಳೂ ಆಳ್ವಿಕೆ ಆರಂಭಿಸಿದರು. ನಂತರ ಆದಿಲಶಾಹಿಗಳು ಆಳಿದರು. ಅವರ ಬಳಿಕ ೧೯೪೮ರ ತನಕ ಹೈದರಾಬಾದ್ ಸಂಸ್ಥಾನದ ಕುತುಬಶಾಹಿಗಳ ಆಳ್ವಿಕೆಯಿತ್ತು. ಹೀಗೆ ಸುಮಾರು ಆರು ನೂರಕ್ಕೂ ಹೆಚ್ಚು ವರ್ಷಗಳ ಕಾಲ ಮುಸ್ಲಿಂ ದೊರೆಗಳು ಈ ಪ್ರದೇಶವನ್ನು ಆಳಿದರು. ಈ ರಾಜಕೀಯ ಆಳ್ವಿಕೆಯು ಸಹಜವಾಗಿ ಮುಸ್ಲಿಂ ಸಮಾಜವನ್ನೂ ಇಸ್ಲಾಮಿಕ್ ಸಂಸ್ಕೃತಿಯನ್ನೂ ಉರ್ದು ಭಾಷೆಯನ್ನೂ ಹುಟ್ಟಿಹಾಕಿತು. ಈ ಪ್ರದೇಶದಲ್ಲಿ ಸ್ಥಳೀಯ ಭಾಷೆಯಾದ ಕನ್ನಡದ ಜತೆ ನೆರೆರಾಜ್ಯಗಳ ಭಾಷೆಗಳಾದ ಮರಾಠಿ ಮತ್ತು ತೆಲಗು ಭಾಷೆಗಳ ಪ್ರಭಾವ ಇರುವಂತೆ ಉರ್ದುವಿನ ಪ್ರಭಾವವೂ ಇದೆ. ಈ ಭಾಗದಲ್ಲಿ ಉರ್ದು ಸಾಹಿತ್ಯವು ದೊಡ್ಡಮಟ್ಟದಲ್ಲಿ ಬೆಳೆದಿದೆ. ಬಂದೇನವಾಜರಿಂದ ಹಿಡಿದು ಈಚಿನ ತನಹಾ ತಿಮ್ಮಾಪುರಿಯವರತನಕ ಅನೇಕ ಕವಿಗಳೂ ಆಗಿಹೋಗಿದ್ದಾರೆ. ಮುಸ್ಲಿಮ್ ಸಮಾಜ, ಇಸ್ಲಾಮಿಕ್ ಸಂಸ್ಕೃತಿ ಮತ್ತು ಉರ್ದು ಭಾಷೆಗಳು ಇಲ್ಲಿನ ಸಮಾಜ, ಭಾಷೆ, ಸಂಸ್ಕೃತಿಗಳ ಮೇಲೆ ಗಾಢ ಪ್ರಭಾವ ಬೀರಿವೆ. ಹಾಗೆಯೇ ತೆಲುಗು ಮರಾಠಿ, ಕನ್ನಡ ಉರ್ದುಗಳು ಪರಸ್ಪರ ಇಲ್ಲಿ ಬೆರೆಯುತ್ತವೆ. ಇದು ಇಲ್ಲಿನ ಮೊಹರಂ ಆಚರಣೆಗಳಲ್ಲಿ ಕೂಡ ಕಾಣುತ್ತದೆ. ಮುಸ್ಲಿಮರ ಮನೆಗಳೇ ಇಲ್ಲದಿರುವ ಊರುಗಳಲ್ಲಿ ಕೂಡ ಈ ಹಬ್ಬವನ್ನು ಆಚರಿಸುತ್ತಾರೆ. ಈ ಚಾರಿತ್ರಿಕ ಹಾಗೂ ಧಾರ್ಮಿಕ ಮತ್ತು ಸಾಮಾಜಿಕ ಸನ್ನಿವೇಶವು ಇಲ್ಲಿನ ಮೊಹರಂ ಹಾಡುಗಳಲ್ಲಿ ಪ್ರತಿಫಲನವಾಗುತ್ತದೆ. ಮೊಹರಂ ಹಾಡುಗಳೆಂದರೆ ಕೇವಲ ಕರ್ಬಲದ ಹಾಡುಗಳಲ್ಲ. ಇದರಲ್ಲಿ ರಾಮಾಯಣ, ಮಹಾಭಾರತದ ಹಾಡುಗಳೂ ಇವೆ. ಹಿಂದು ಪೌರಾಣಿಕ ಧಾರ್ಮಿಕ ಕಥಾವಸ್ತುವುಳ್ಳ ಹಾಡುಗಳಿವೆ. ಇಲ್ಲಿ ಶಿವ ಪಾರ್ವತಿಯರು ಬರುತ್ತಾರೆ. ಇಲ್ಲಿನ ಭಾಷೆ ಕೂಡ ಕೇವಲ ಕನ್ನಡವಾಗಿಲ್ಲ. ಇದು ಉರ್ದುವಿನ ಜತೆಗೆ ಸೇರಿಕೊಳ್ಳುತ್ತದೆ. ಇಂತಹ ಅಪರೂಪದ ಹಾಡುಪರಂಪರೆಯನ್ನು ಯಾದಗಿರಿ ಸೀಮೆಗೆ ಸೀಮಿತಗೊಳಿಸಿಕೊಂಡು ಅಧ್ಯಯನ ಮಾಡಲು ಇಲ್ಲಿ ಯತ್ನಿಸಲಾಗಿದೆ.

ಕನ್ನಡ ಜನಪದ ಸಾಹಿತ್ಯವನ್ನು ೨೦ನೇ ಶತಮಾನದಲ್ಲಿ ಅನೇಕ ಬಗೆಗಳಲ್ಲಿ ಸಂಗ್ರಹ ಮತ್ತು ಅಧ್ಯಯನ ಮಾಡಿಕೊಂಡು ಬರಲಾಗಿದೆ. ಗದ್ಯಸಾಹಿತ್ಯ ಮತ್ತು ಪದ್ಯಸಾಹಿತ್ಯ ಎಂದು ವಿಂಗಡಿಸಿ ಅಧ್ಯಯನ ಮಾಡಲಾಗಿದೆ. ಬೇರೆಬೇರೆ ಪ್ರದೇಶಕ್ಕೆ ಸಂಬಂಧಿಸಿದಂತೆ ಜನಪದ ಸಾಹಿತ್ಯವನ್ನು ಕೂಡ ಅಧ್ಯಯನ ಮಾಡಲಾಗಿದೆ. ಹಾಡು, ಕತೆ ಬಯಲಾಟ, ಗಾದೆ, ಪಡೆನುಡಿ, ಒಡಪು, ಒಗಟು, ಕುಣಿತ, ಎಂದು ವರ್ಗೀಕರಿಸಿ ಅಧ್ಯಯನ ಮಾಡಲಾಗಿದೆ. ಹಾಡುಗಳನ್ನು ಗಂಡಸರ ಹಾಡುಗಳು, ಹೆಣ್ಣು ಮಕ್ಕಳ ಹಾಡುಗಳು, ಮಕ್ಕಳ ಹಾಡುಗಳೆಂದು ವರ್ಗೀಕರಿಸಿ ನೋಡಲಾಗಿದೆ. ಗೀಗಿಪದಗಳು, ಹರದೇಶಿ ನಾಗೇಶಿ ಪದಗಳು, ಸವಾಲ್ ಜವಾಬ್ ಪದಗಳು, ಹಂತಿ ಪದಗಳು, ಗರತಿಯ ಹಾಡುಗಳು, ಡಪ್ಪಿನ ಆಟಗಳು, ಲಾವಣಿಗಳು, ಬುಲಾಯಿ ಹಾಡುಗಳು, ಪುಗಡಿ ಹಾಡುಗಳು, ಲಂಬಾಣಿ ಹಾಡುಗಳು, ಚೌಡಿಕೆ ಹಾಡುಗಳು, ಕೊರವಂಜಿ ಹಾಡುಗಳು ಎಂದು ಪ್ರಕಾರದ ಆಧಾರದ ಮೇಲೆ ವಿಂಗಡಿಸಲಾಗಿದೆ.

ವಿಶೇಷವೆಂದರೆ ಜನಪದ ಹಾಡುಗಳಲ್ಲಿ ಹೆಚ್ಚಾಗಿ ಗಂಡಸರು ಹಾಡುವ ಕೆಲವು ಸಂಪ್ರದಾಯಗಳಿವೆ. ಉದಾಹರಣೆಗೆ, ಮೊಹರಂ ಹಾಡುಗಳನ್ನು ಸಾಮಾನ್ಯವಾಗಿ ಹೆಂಗಸರು ಹಾಡುವುದಿಲ್ಲ. ಗಂಡಸರು ವೃತ್ತಿಗಾಯಕರಾಗಿ ಅನೇಕ ಕಥೆಗಳನ್ನು ಹಾಡುತ್ತಾರೆ. ಕೆಲವು ಉತ್ಸವದ ಹಾಡುಗಳನ್ನು ಕೂಡ ಹಾಡುತ್ತಾರೆ. ಉತ್ಸವದ ಹಾಡುಗಳಲ್ಲಿ ಮೊಹರಂ ಹಾಡುಗಳು ಬರುತ್ತವೆ. ಮೊಹರಂ ಹಾಡುಗಳನ್ನು ಜಂಗಿನ ಪದಗಳು, ಅಲಾವಿ ಪದಗಳು, ರಿವಾಯಿತ ಪದಗಳು, ಹುಲಿಹಬ್ಬದ ಪದಗಳು ಎಂಬ ಹೆಸರಿನಿಂದ ಕರೆಯುವರು.

ಅಲಾಯಿ ಹಬ್ಬ, ಬಾಬಯ್ಯನ ಹಬ್ಬ, ಹುಲಿಹಬ್ಬ ಎಂದು ಕರೆಯಲಾಗುವ ಮೊಹರಂ ಕರ್ನಾಟಕದ ಹಿಂದೂ ಮುಸ್ಲಿಂ ಸಮುದಾಯಗಳ ಬಾಂಧವ್ಯದ ಸಂಕೇತವಾಗಿರುವ ಒಂದು ಆಚರಣೆಯಾಗಿದೆ. ಕರ್ನಾಟಕದಲ್ಲಿ ಇಂತಹ ಬಾಂಧವ್ಯವನ್ನು ಉಂಟುಮಾಡಿರುವ ಇನ್ನೊಂದು ಆಚರಣೆಯೆಂದರೆ, ಸೂಫಿ ದರ್ಗಾಗಳ ಉರುಸುಗಳು. ಮೊಹರಂ ಇಡೀ ಕರ್ನಾಟಕದಲ್ಲಿ ಆಚರಣೆಯಾಗುವ ಹಬ್ಬವಾಗಿದ್ದರೂ, ಇದಕ್ಕೆ ಸಂಬಂಧಪಟ್ಟ ಹಾಡುಗಳು ಉತ್ತರ ಮತ್ತು ಹೈದರಾಬಾದ್ ಕರ್ನಾಟಕಗಳಲ್ಲಿ ವಿಶೇಷವಾಗಿ ಕಾಣಸಿಗುತ್ತವೆ. ವರ್ಷದಲ್ಲಿ ಕೇವಲ ಒಂಬತ್ತು ದಿನಗಳಷ್ಟೆ ಹಾಡಲಾಗುವ ಮೊಹರಂ ಪದಗಳು ಕರ್ನಾಟಕದಲ್ಲಿ ಸಾವಿರಾರು ಮೊಹರಂ ಹಾಡುಗಾರರನ್ನು ಸೃಷ್ಟಿಮಾಡಿವೆ.

ಈಗಾಗಲೇ ಎಲ್ಲರಿಗೂ ಗೊತ್ತಿರುವಂತೆ, ಮೊಹರಂ ಆಚರಣೆಯು ೭ನೇ ಶತಮಾನದಲ್ಲಿ ಅರಬಸ್ಥಾನದಲ್ಲಿ ನಡೆದ ಒಂದು ಯುದ್ಧದ ವಿದ್ಯಮಾನವಾಗಿದೆ. ಅರಬಸ್ಥಾನದ ಕರ್ಬಲಾ

ಮರುಭೂಮಿಯಲ್ಲಿ ಕರುಳು ಮಿಡಿಯುವಂತಹ ದುರಂತವೊಂದು ಜರುಗಿತು. ಅದೇನೆಂದರೆ ಪ್ರವಾದಿ ಮಹಮ್ಮದ್ ಪೈಗಂಬರರ ಮೊಮ್ಮಗನಲ್ಲಿ ಒಬ್ಬನಾದ ಹುಸೇನನಿಗೆ ಅವನ ಎದುರಾಳಿಯಾದ ಯಜೀದನಿಗೂ ನಡೆದ ಯುದ್ಧದಲ್ಲಿ ಹುಸೇನನು ಕೊಲ್ಲಲ್ಪಟ್ಟನು. ಅವನ ಸಂಗಾತಿಗಳು ಕೊಲ್ಲಲ್ಪಟ್ಟರು. ಎಳೆಯ ಮಕ್ಕಳನ್ನು ಕೂಡ ಯುದ್ಧದಲ್ಲಿ ಕೊಲ್ಲಲಾಯಿತು. ಇದನ್ನು ಮುಸ್ಲಿಮರು ದುಃಖದ ಆಚರಣೆಯನ್ನಾಗಿ ಆಚರಿಸುತ್ತಾ ಬಂದಿದ್ದಾರೆ.

ಇದಕ್ಕೆ ಕರ್ನಾಟಕದ ಜನರೂ ಹೊರತಲ್ಲ. ಅದರಲ್ಲೂ ಹೈದರಾಬಾದ್ ಕರ್ನಾಟಕದಲ್ಲಿ ಮೊಹರಂ ಆಚರಣೆ ಮತ್ತು ಮೊಹರಂ ಹಾಡುಗಳು ದೊಡ್ಡ ಪ್ರಮಾಣದಲ್ಲಿ ಕಾಣಸಿಗುತ್ತವೆ. ಇದಕ್ಕೆ ಕಾರಣ, ಹೈದರಾಬಾದ್ ನಿಜಾಮರು ಶಿಯಾಗಳಾಗಿದ್ದು, ಮೊಹರಂ ಆಚರಣೆಗಳಿಗೆ ಬಹಳ ಉತ್ತೇಜನ ಕೊಟ್ಟವರಾಗಿರುವುದು. ಅದರಲ್ಲೂ ಹೈದರಾಬಾದ್ ಕರ್ನಾಟಕದಲ್ಲಿ ಗುಲಬರ್ಗಾ ಜಿಲ್ಲೆಯು ಮೊಹರಂ ಹಾಡುಗಳಿಗೆ ಖ್ಯಾತವಾಗಿದೆ. ಗುಲಬರ್ಗಾ ಜಿಲ್ಲೆಯಲ್ಲಿ ಸೇಡಂ, ಚಿತಾಪುರ, ಸುರಪುರ, ಆಳಂದ, ಅಫಜಲಪೂರ, ಜೇವರ್ಗಿ, ಶಹಾಪುರ, ಗುಲಬರ್ಗಾ ಮತ್ತು ಯಾದಗಿರಿ ತಾಲೂಕುಗಳಿವೆ. ಯಾದಗಿರಿ ಭಾಗಕ್ಕೆ ಸೀಮಿತವಾಗಿ ಮೊಹರಂ ಹಾಡುಗಳ ವಿಶಿಷ್ಟತೆಯನ್ನು ಕುರಿತು ಈ ಪ್ರಬಂಧದಲ್ಲಿ ಚರ್ಚಿಸಲಾಗುವುದು.

ಅಧ್ಯಯನದ ಉದ್ದೇಶ ಮತ್ತು ಮಹತ್ವ

ಹೈದರಾಬಾದ್ ಕರ್ನಾಟವನ್ನು "ಮೊಹರಂ ಪದಗಳ ತದನಿಧಿ" ಎಂದು ಕರೆಯಲಾಗುವುದು. ಇಂತಹ ಹೈದರಾಬಾದ್–ಕರ್ನಾಟಕಕ್ಕೆ ಸೇರಿದ ಯಾದಗಿರಿ ಭಾಗದ ಮೊಹರಂ ಹಾಡುಗಳನ್ನು ಅಧ್ಯಯನ ಮಾಡುವುದರಲ್ಲಿ ಅನೇಕ ಸಾಂಸ್ಕೃತಿಕ ಮಹತ್ವದ ಸಂಗತಿಗಳಿವೆ. ಅವೆಂದರೆ–

ಹಬ್ಬಗಳನ್ನು ಧಾರ್ಮಿಕ ಹಬ್ಬ, ಸಾಮಾಜಿಕ ಹಬ್ಬ, ರಾಷ್ಟ್ರೀಯ ಹಬ್ಬ ಮತ್ತು ವೈಯಕ್ತಿಕ ಹಬ್ಬ ಎಂದು ವಿಂಗಡಿಸಲಾಗುತ್ತದೆ. ಆಯಾ ಧರ್ಮಗಳಿಗೆ ಸೇರಿದವರು ತಮ್ಮ ಇಷ್ಟ ದೇವತೆಗಳ ಉತ್ಸವವನ್ನು ಪ್ರತಿವರ್ಷ ಸಾರ್ವತ್ರಿಕವಾಗಿ ಆಚರಿಸುವುದನ್ನು ಮತೀಯ ಹಬ್ಬಗಳೆಂದು ಕರೆಯುವರು. ಕೆಲವು ಮನೆತನಗಳಿಗೆ ಊರಿಗಷ್ಟೆ ಮೀಸಲಾದ ಆಚಣೆಗಳನ್ನು ಸಾಮಾಜಿಕ ಹಬ್ಬಗಳೆಂದು ಕರೆಯುತ್ತಾರೆ. 'ಸಂಕ್ರಾಂತಿ', 'ಓಣಂ' 'ಸುಗ್ಗಿಹಬ್ಬ' ಮೊದಲಾದವು ಕೃಷಿ ಉತ್ಸವಗಳಿಗೆ ಸಂಬಂಧಿಸಿದ ಹಬ್ಬಗಳಾಗಿವೆ. ಜಾತಿ, ಕುಲ, ಗೋತ್ರ, ಲಿಂಗ, ವರ್ಣ ಭೇದಗಳಿಲ್ಲದೇ ಒಂದು ರಾಷ್ಟ್ರದ ಎಲ್ಲ ಜನರು ಒಂದಾಗಿ ಆಚರಿಸುವ ಉತ್ಸವಗಳನ್ನು ರಾಷ್ಟ್ರೀಯ ಹಬ್ಬಗಳೆಂದು ಹೆಸರಿಸಬಹುದು. ವ್ಯಕ್ತಿಗಳ ಹೆಸರಲ್ಲಿ ಆಚರಿಸುವ ಜಯಂತಿ ಮತ್ತು ಪುಣ್ಯತಿಥಿಗಳನ್ನು ವ್ಯಕ್ತಿನೆಲೆಯ ಹಬ್ಬಗಳೆಂದು ಪರಿಗಣಿಸಬಹುದು. ಇವುಗಳಲ್ಲಿ

ಮೊಹರಂ ಮೇಲಿನ ಅನೇಕ ಹಬ್ಬಗಳ ವಿಶಿಷ್ಟತೆಯನ್ನು ಒಳಗೊಂಡಿದೆ. ಇದು ಧಾರ್ಮಿಕ ಹಿನ್ನೆಲೆಯ ಹಬ್ಬವಾಗಿದೆ. ಹಸನ ಹುಸೇನರು ಹುತಾತ್ಮರಾದ ನೆನಪಿಗೆ ಮಾಡುವ ಹಬ್ಬವಾದ ಕಾರಣ, ಇದು ವ್ಯಕ್ತಿನೆಲೆಯ ಹಬ್ಬವಾಗಿದೆ. ಇದರಲ್ಲಿ ಎಲ್ಲ ಜಾತಿಮತಗಳ ಜನರೂ ಸೇರುವ ಕಾರಣ, ಇದು ರಾಷ್ಟ್ರೀಯ ಹಬ್ಬದ ಲಕ್ಷಣವನ್ನೂ ಪಡೆದಿದೆ. ಯಾವುದಾದರೂ ಊರಿನಲ್ಲಿ ಮುಸ್ಲಿಂ ಸಮುದಾಯದವರು ಇಲ್ಲದಿದ್ದರೆ, ಹಬ್ಬಕ್ಕೆಂದೇ ಅವರನ್ನು ಬೇರೆ ಊರಿನಿಂದ ಕರೆಯಿಸಿ, ಮೊಹರಂ ಹಬ್ಬವನ್ನು ಆಚರಿಸಲಾಗುತ್ತದೆ. ಇದು ಹುಸೇನರ ಪುಣ್ಯತಿಥಿಯ ಆಚರಣೆಯಾಗಿದೆ. ಯಾದಗಿರಿ ಭಾಗವು ಮುಖ್ಯವಾಗಿ ರೈತರು ಹೆಚ್ಚು ವಾಸಿಸುವ ಪ್ರದೇಶವಾಗಿದೆ. ರೈತರ ಹಬ್ಬ ನಂಬಿಕೆ ಮತ್ತು ಸಂಪ್ರದಾಯಗಳಿಗೂ ಅವರ ಕಲೆ ಸಾಹಿತ್ಯ ಅಭಿವ್ಯಕ್ತಿಗಳಿಗೂ ಸಂಬಂಧವಿದೆ. ಕೃಷಿ ಸಂಸ್ಕೃತಿಯ ಭಾಗವಾಗಿ ರೂಪುಪಡೆದಿರುವ ಮೊಹರಂ ಅಧ್ಯಯನವನ್ನು ಮಾಡುವುದು ಒಂದು ಭಾಗದ ಜನರ ಸಂಸ್ಕೃತಿಯ ಅಧ್ಯಯನ ಮಾಡಿದಂತಾಗುವುದು.

ಜಾತಿ ಧರ್ಮಗಳು ನಮ್ಮ ಭಾರತೀಯ ಸಮಾಜವನ್ನು ಹಲವು ಬಗೆಗಳಲ್ಲಿ ವಿಂಗಡಿಸಿದೆ. ಈ ಹಿನ್ನೆಲೆಯಲ್ಲಿ ಮೊಹರಂ ತರಹದ ಕೂಡಿ ಮಾಡುವ ಹಬ್ಬಗಳು ಒಂದು ಬಗೆಯಲ್ಲಿ ಭಾವೈಕ್ಯಕ್ಕೆ ಕಾರಣವಾಗಿವೆ. ಇವು ಸಮುದಾಯದ ಒಗ್ಗಟ್ಟು ಹಾಗೂ ಕಲ್ಯಾಣದ ಆಶಯಗಳನ್ನು ಇಟ್ಟುಕೊಂಡಿವೆ. ಹಿಂದುಗಳು ಶರಬತ್ತು ತುಂಬಿದ ಕುಂಭ ಹೊತ್ತು ಸಕ್ಕರೆ ನೈವೇದ್ಯ ತೆಗೆದುಕೊಂಡು ಮೊಹರಂ ದೇವರು ಇಡುವ ಮಸೀದಿಗೆ ಹೋಗಿ ಲೋಬಾನದ ಊದು ಹಾಕಿ ನಮಸ್ಕರಿಸಿ ಬರುತ್ತಾರೆ. ಕೆಲವರು ತೆಂಗಿನಕಾಯಿ ಒಡೆಸುತ್ತಾರೆ. ಇದು ಮುಸ್ಲಿಮ್ ದೇವರಿಗೆ ಅರ್ಪಿಸುವ ಹಿಂದೂಗಳ ಭಕ್ತಿಭಾವದ ಸಮರ್ಪಣೆಯಾಗಿದೆ. ಮೊಹರಂ ಹಬ್ಬವು ಈ ಪ್ರದೇಶದ ಮುಸ್ಲಿಮ್ ಹಾಗೂ ಹಿಂದೂ ಸಮುದಾಯಗಳ ಭಾವನಾತ್ಮಕ ಏಕೀಕರಣಕ್ಕೆ ಕಾರಣವಾಗಿದೆ. ಇಂತಹ ಹಬ್ಬಗಳ ಅಧ್ಯಯನವನ್ನು ಮಾಡುವುದು ಈಗಿರುವ ರಾಜಕೀಯ ಪರಿಸ್ಥಿತಿಯಲ್ಲಿ ಒಂದು ಸಾಂಸ್ಕೃತಿಕ ಅಗತ್ಯವಾಗಿದೆ./

ಮೊಹರಂ ಹಾಡುಗಳು ಕನ್ನಡ ಜನಪದ ಸಾಹಿತ್ಯದಲ್ಲಿ ಬಹಳ ವಿಶಿಷ್ಟವಾದವು. ಮೊಹರಂ ಪದಗಳ ಭಾಷೆ ನೇರ ಮತ್ತು ಸರಳವಾಗಿದೆ. ಇವು ನೇರವಾಗಿ ಮನಮಟ್ಟುವಂತಹ ಜನರ ಭಾಷೆಯಲ್ಲಿ ವ್ಯಕ್ತವಾಗುತ್ತವೆ. ಇವುಗಳಲ್ಲಿ ಬದುಕಿನ ನೈಜತೆಯಿದೆ. ಆದರೆ ಇವನ್ನು ಕನ್ನಡ ಸಾಹಿತ್ಯದಲ್ಲಿ ಹೆಚ್ಚು ಅಧ್ಯಯನ ಮಾಡಿಲ್ಲ. ಹೈದರಾಬಾದ್ ಕರ್ನಾಟಕದ ಸಾಹಿತ್ಯ ಎಂದಾಗ, ಮೊಹರಂ ಸಾಹಿತ್ಯ ನೆನಪಿಗೆ ಬರುವುದಿಲ್ಲ. ಹೈದರಾಬಾದ್ ಕರ್ನಾಟಕದ ಲೇಖಕರು ಎಂದಾಗ ಈ ಭಾಗದ ಮೊಹರಂ ಕವಿಗಳು ನೆನಪಿಗೆ ಬರುವುದಿಲ್ಲ. ಹೈದಾರಾಬಾದ ಕರ್ನಾಟಕದ ಗಾಯಕರು ಎಂದಾಗ

ಈ ಭಾಗದ ಸಾವಿರಾರು ಮೊಹರಂ ಗಾಯಕರು ಉಲ್ಲೇಖಗೊಳ್ಳುವುದಿಲ್ಲ. ಹೀಗೆ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಜನಸಮುದಾಯದ ಅಭಿವ್ಯಕ್ತಿಯಾಗಿರುವ ಮೊಹರಂ ಪದಗಳನ್ನು ಅಧ್ಯಯನ ಮಾಡುವುದರಿಂದ ಈ ಭಾಗದ ಜನರ ಸಂಸ್ಕೃತಿಯನ್ನು ಅಧ್ಯಯನ ಮಾಡಿದಂತಾಗುತ್ತದೆ.

ಮೊಹರಂ ಪದಗಳು ಕೇವಲ ಇಸ್ಲಾಂ ಧರ್ಮಕ್ಕೆ ಸಂಬಂಧಿಸಿರುವ ಪದಗಳೆಂಬ ಪರಿಕಲ್ಪನೆ ಕೆಲವು ಜನರಲ್ಲಿದೆ. ಆದರೆ ಈ ಪದಗಳು ನಿರ್ದಿಷ್ಟ ಧರ್ಮ ಮತ್ತು ಜಾತಿಗೆ ಸೀಮಿತವಾಗಿಲ್ಲ. ಮೊಹರಂ ಪದಗಳು ಇಡೀ ಮಾನವ ಸಮಾಜಕ್ಕೆ ಅನ್ವಯಿಸಬಲ್ಲ ವಿಚಾರಧಾರೆಗಳನ್ನು ಒಳಗೊಂಡಿವೆ. ಇವು ನಮ್ಮ ಸಮಾಜಕ್ಕೆ ಅಗತ್ಯವಾಗಿರುವ ಭಾವ್ಯಕ್ಯತೆಯ ಭಾವನೆಗಳನ್ನು ಮೂಡಿಸುವಲ್ಲಿ ನೆರವಾಗುತ್ತಿವೆ. ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಇದು ಹಿಂದೂಗಳ ಸಾರ್ವತ್ರಿಕ ಹಬ್ಬವಾಗಿದೆ. ಆದ್ದರಿಂದ ಮೊಹರಂ ಬಗ್ಗೆ ಇರುವ ಕೆಲವು ತಪ್ಪುಕಲ್ಪನೆಗಳನ್ನು ಹೋಗಲಾಡಿಸುವುದು ಕೂಡ ಈ ಅಧ್ಯಯನದ ಉದ್ದೇಶವಾಗಿದೆ.

ಮೊಹರಂ ಪದಗಳು ಕೇವಲ ಧಾರ್ಮಿಕ ಮತ್ತು ಐತಿಹಾಸಿಕ ಕಥೆ ಪುರಾಣ ಗಳಿಗೆ ಸಂಬಂಧಪಟ್ಟವು ಎಂಬ ಇನ್ನೊಂದು ತಪ್ಪು ಕಲ್ಪನೆಯಿದೆ. ಆದರೆ ಇವು ತಮ್ಮ ಪ್ರದೇಶದ ಸಾಮಾನ್ಯ ಜನರ ಸಂಸಾರದ ಸುಖ–ದುಃಖಗಳನ್ನು ಒಳಗೊಂಡಿವೆ. ಹಳ್ಳಿಯ ಸರಳ ನೈಜ ವಾಸ್ತವಿಕ ಜೀವನದ ಹಲವು ಮುಖಗಳನ್ನು ನೇರವಾಗಿ ಸರಳ ಭಾಷೆಯಲ್ಲಿ ಇವು ತಿಳಿಸುತ್ತವೆ. ಮೊಹರಂ ಪದಗಳನ್ನು ಬರೆದಂತಹ ಕನ್ನಡ ಭಾಷೆಯ ಜನರು ತಮ್ಮ ಸುತ್ತಲಿನ ಸಮಾಜದಲ್ಲಿರುವ ಅಂದು ಅನೇಕ ಸನ್ನಿವೇಶಗಳನ್ನು ನೋಡಿದವರು, ಕೇಳಿದವರು. ಅನೇಕ ಧರ್ಮಶಾಸ್ತ್ರ ಗ್ರಂಥಗಳನ್ನು ಅಭ್ಯಾಸ ಮಾಡಿದವರು. ತಮ್ಮ ಈ ಅನುಭವ, ಓದು, ನೋಟಗಳನ್ನು ತಮ್ಮದೆ ಆದ ಭಾಷೆಯಲ್ಲಿ ಅವರು ಹಾಡುತ್ತಾರೆ. ಆದ್ದರಿಂದ ಮೊಹರಂ ಹಾಡುಗಳು ಆಯಾ ಪ್ರದೇಶದ ಜನರ ಬದುಕಿನ ಪ್ರತಿಬಿಂಬಗಳಾಗಿವೆ.

ಮೊಹರಂ ಪದಗಳನ್ನು ದಾಸರ, ಮತ್ತು ಶರಣರ, ಪದಗಳಿಗೂ ಹೋಲಿಸಲಾಗುತ್ತದೆ. ಮೊಹರಂ ಹಾಡುಗಳಲ್ಲಿ ಕನ್ನಡದ ದಾಸರ ಪದಗಳ ಮತ್ತು ವಚನಗಳ, ಪುರಾಣ ಪ್ರವಚನಗಳ, ಲಾವಣಿ ಹಾಡುಗಳ, ನಾಟಕದ ಹಾಡುಗಳ ಪ್ರಭಾವವಿದೆ. ಮೊಹರಂ ಗಾಯಕರು ಬೇರೆ ಸಂಪ್ರದಾಯದ ಹಾಡುಗಳನ್ನೂ ಹಾಡುತ್ತಾರೆ. ಹೀಗೆ ಕನ್ನಡದ ಜನಪದ ಹಾಡುಪರಂಪರೆಯಲ್ಲಿ ಮೊಹರಂ ಪದಗಳನ್ನು ಇಟ್ಟುನೋಡುವುದು ಈ ಅಧ್ಯಯನದ ಉದ್ದೇಶವಾಗಿದೆ. ಈ ಭಾಗದ ಮೊಹರಂ ಹಾಡುಗಳ ಸಂಗ್ರಹ ಅಷ್ಟಾಗಿ ಆಗಿಲ್ಲ. ಈ ಹಾಡುಗಳ ಅಧ್ಯಯನ ಕೂಡ ಆಗಿಲ್ಲ. ಪ್ರಸ್ತುತ ಅಧ್ಯಯನವನ್ನು ಈ

ಭಾಗದ ಹಾಡುಗಾರರಿಂದ ನೇರವಾಗಿ ಹಾಡುಗಳನ್ನು ಸಂಗ್ರಹಿಸಿ ಮಾಡಲಾಗಿದೆ. ಜನಪದ ಸಾಹಿತ್ಯದ ಉತ್ತಮ ಪ್ರಕಾರಗಳಲ್ಲೊಂದಾದ ಮೊಹರಂ ಪದಗಳನ್ನು ಸಂರಕ್ಷಣೆ ಮಾಡಿ ಉಳಿಸಿಕೊಳ್ಳಬೇಕಾದ ಅಗತ್ಯವಿದೆ. ಇದಕ್ಕಾಗಿ ಪ್ರೇರಣೆ ಕೊಡುವುದು ಕೂಡ ಈ ಅಧ್ಯಯನದ ಒಂದು ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿ

ಕರ್ನಾಟದಲ್ಲಿ ಎಲ್ಲ ಜಿಲ್ಲೆಗಳಲ್ಲಿ ಮೊಹರಂ ಹಬ್ಬ ನಡೆಯುತ್ತದೆ. ಅದರಲ್ಲೂ ಬಿಜಾಪುರ, ಬಾಗಲಕೋಟ, ಬೀದರ, ಗುಲ್ಬರ್ಗ, ರಾಯಚೂರು, ಕೊಪ್ಪಳ, ಬಳ್ಳಾರಿ, ಗದಗ, ಧಾರವಾಡ, ಬೆಳಗಾವಿ ಮುಂತಾದ ೧೦ ಜಿಲ್ಲೆಗಳಲ್ಲಿ ಮೊಹರಂ ಹಾಡುಗಳು ವಿಶೇಷವಾಗಿ ಸಿಗುತ್ತವೆ. ಇದನ್ನೆಲ್ಲ ಅಧ್ಯಯನ ಮಾಡುವುದು ಅತಿವ್ಯಾಪ್ತಿಗೆ ಕರೆದೊಯ್ಯುವುದು. ಇಲ್ಲಿನ ಮೊಹರಂ ಆಚರಣೆಗಳು ಬಹಮನಿಗಳಿಂದ ಆರಂಭವಾಗುತ್ತವೆ. ಬಹುಮನಿ ಸುಲ್ತಾನರಲ್ಲಿ ಅನೇಕರು ಇರಾನಿನ ಸಂಪರ್ಕ ಮತ್ತು ಒಡನಾಟ ಇಟ್ಟುಕೊಂಡಿದ್ದರು. ಇರಾನ್ ಶಿಯಾ ಮುಸ್ಲಿಮರ ದೇಶ. ಶಿಯಾಗಳಿಗೆ ಹಸನ ಹುಸೇನರು ಧಾರ್ಮಿಕ ಮತ್ತು ಆಧ್ಯಾತ್ಮಿಕ ನಾಯಕರು. ಹೀಗಾಗಿ ಶಿಯಾಗಳ ಪ್ರಭಾವ ಈ ಭಾಗದಲ್ಲಿ ಮೊಹರಂ ಹಬ್ಬದ ವ್ಯಾಪಕತೆಗೆ ಕಾರಣವಾಯಿತು. ನಂತರ ಬಂದ ಆದಿಲಶಾಹಿಗಳಲ್ಲೂ ಅನೇಕರು ಶಿಯಾಗಳಿದ್ದರು. ಹೈದರಾಬಾದ್ ಕರ್ನಾಟಕ ಪ್ರದೇಶವು ಮುಂದೆ ಹೈದರಾಬಾದ್ ನಿಜಾಮನ ಕೈಯಲ್ಲಿ ಬಂದಿತು. ಈ ಹಿಂದೆ ಹೇಳಿದಂತೆ ಹೈದರಾಬಾದ್ ನಿಜಾಮರು ಮೊಹರಂ ಆಚರಣೆಯನ್ನು ದೊಡ್ಡ ಮಟ್ಟದಲ್ಲಿ ಮಾಡಿದವರು. ಇಡೀ ಹೈದರಾಬಾದ್ ಕರ್ನಾಟಕದ ಮೊಹರಂ ಹಾಡುಗಳ ಅಧ್ಯಯನವು ಅತಿವಿಸ್ತಾರವಾಗುವುದು. ಇದರಿಂದ ಯಾದಗಿರಿ ಭಾಗದ ಮೊಹರಂ ಹಾಡುಗಳನ್ನು ಮಾತ್ರ ಇಲ್ಲಿ ಅಧ್ಯಯನ ಮಾಡಲಾಗುತ್ತಿದೆ. ಬಹಳ ಪ್ರಾಚೀನ ಕಾಲದಿಂದಲೂ ಯಾದಗಿರಿ ಸೀಮೆಯು ತನ್ನದೇ ಆದ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿದೆ. ಅದರ ಸಂಸ್ಕೃತಿಯಲ್ಲಿ ಮೊಹರಂ ಪದಗಳು ಕೂಡ ಒಂದಾಗಿವೆ. ಯಾದಗಿರಿ, ಗುರುಮಠಕಲ್, ಇಟ್ಕಲ್, ಅರಕೇರ ಯರಗೋಳ ಮುಂತಾದ ಹಳ್ಳಿಗಳಲ್ಲಿ ಮೊಹರಂ ಪದಗಳ ಸಾಹಿತ್ಯ ಬಹಳಷ್ಟಿದೆ. ಇದು ಈ ಭಾಗದ ಜನಪದರ ಉಸಿರಾಗಿ ಬಂದಿದೆ. ಜನರ ಅನುಭವದ ನೆಲೆಯಿಂದ ಬಂದಿದೆ. ಇದು ಮೌಖಿಕವಾಗಿದ್ದರೂ ಲಿಖಿತರೂಪದಲ್ಲಿ ಕೂಡ ಸಿಗುತ್ತದೆ. ಇದರಲ್ಲಿ ಕಥನ ಕಾವ್ಯಗಳಾದ ಮಹಬೂಬ್ ಸುಬಾನಿ ಚರಿತ್ರೆ, ಬೀಬಿ ಫಾತೀಮಾರ ಹಾಡು, ನಬಿಸಾಹೆಬರ ಹಾಡುಗಳು ಮುಂತಾದ ಪದಗಳಿವೆ. ಜಾತ್ಯತೀತ ಪರಂಪರೆಗೆ ಸೇರಿದ ಮೊಹರಂ ಹಬ್ಬದಲ್ಲಿ ಇನ್ನಿತರ ಹಾಡುಗಳೂ ಇವೆ. ಹೈದರಾಬಾದ್ ಕರ್ನಾಟಕ

ಪ್ರದೇಶದ ಯಾದಗಿರಿ ತಾಲೂಕಿನ ಅನೇಕ ಹಳ್ಳಿಗಳನ್ನು ಇದಕ್ಕಾಗಿ ಕ್ಷೇತ್ರಕಾರ್ಯ ಮಾಡಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಅಧ್ಯಯನದ ವಿಧಾನಗಳು

ಈ ಅಧ್ಯಯನ ಯಾದಗಿರಿ ತಾಲೂಕಿನ ಅನೇಕ ಹಳ್ಳಿಗಳ ಮೊಹರಂ ಹಾಡುಗಾರನ್ನು ಭೇಟಿ ಮಾಡಲಾಗಿದೆ. ಮೊಹರಂ ಆಚರಿಸುವ ಅನೇಕ ಜನರನ್ನು ಮಾತನಾಡಿಸಲಾಗಿದೆ. ಮೊಹರಂ ಹಾಡುಗಳು ಆಚರಣೆ ಮತ್ತು ಪ್ರದರ್ಶನದ ಭಾಗವಾಗಿವೆ. ಇದಕ್ಕಾಗಿ ಈ ಭಾಗದ ಮೊಹರಂ ಆಚರಣೆಗಳನ್ನು ನೋಡಿದ ಅನುಭವವನ್ನು ಪೂರಕವಾಗಿ ಬಳಸಿಕೊಳ್ಳಲಾಗಿದೆ. ಹಬ್ಬ, ಆಚರಣೆ ಮತ್ತು ಹಾಡುವಿಕೆ ಈ ಮೂರು ಸಂಗತಿಗಳು ಏಕಕಾಲಕ್ಕೆ ನಡೆಯುತ್ತವೆ. ಈ ಮೂರು ಅಂಶಗಳ ಪರಸ್ಪರ ಅಂತರಿಕ ಕ್ರಿಯೆಗಳ ಭಾಗವಾಗಿ ಮೊಹರಂ ಹಬ್ಬವು ರೂಪುಪಡೆಯುತ್ತದೆ. ಹಾಡುವಿಕೆಯಲ್ಲೂ ಸಾಮುದಾಯಕ ರೂಪವಿದೆ. ಮೊಹರಂ ಹಾಡು ಮೂಲತಃ ಒಬ್ಬ ಕವಿ ಮತ್ತು ಗಾಯಕನಿಂದ ರೂಪ ಪಡೆದರೂ ಆತ ಸಮುದಾಯದಿಂದ ಹೊರತಾಗಿ ಸ್ವತಂತ್ರವಾಗಿ ಅದನ್ನು ಸೃಷ್ಟಿಸಲಾರ ಮತ್ತು ಅಭಿವ್ಯಕ್ತಿ ಮಾಡಲಾರ. ಈ ಅಧ್ಯಯನವು ಕ್ಷೇತ್ರಕಾರ್ಯದ ಮೂಲಕ ಪ್ರದರ್ಶನಾತ್ಮಕವಾಗಿ ಕಂಡುಬರುವ ಆಚರಣೆಯನ್ನು ಇಟ್ಟುಕೊಂಡು ಅದನ್ನು ವಿಶ್ಲೇಷಿಸುವ ಕೆಲಸವನ್ನೂ ಮಾಡುತ್ತದೆ. ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಗಳ ಜತೆಗೆ ಹೈದರಾಬಾದ್ ಕರ್ನಾಟಕದ ಮೊಹರಂ ಕುರಿತು ಇದುವರೆಗೂ ಬಂದ ಗ್ರಂಥಗಳ ಪರಿವೀಕ್ಷಣೆಯಿಂದ ಈ ಅಧ್ಯಯನಕ್ಕೆ ಬೇಕಾದ ಸಾಮಗ್ರಿ ಮತ್ತು ವಿಚಾರಗಳನ್ನು ಪಡೆದುಕೊಳ್ಳಲಾಗಿದೆ. ಇದಕ್ಕಾಗಿ ಯಾದಗಿರಿ ಭಾಗದ ಅನೇಕ ಮೊಹರಂ ಮಸೀದಿಗಳ ಸಂದರ್ಶನವನ್ನು ಮಾಡಲಾಗಿದೆ. ಈ ಅಧ್ಯಯನಕ್ಕೆ ಮೊಹರಂ ಹಾಡುಗಳ ಬಗ್ಗೆ ಈಗಾಗಲೇ ಕೆಲಸ ಮಾಡಿರುವ ಕೆಲವು ಸಂಶೋಧರು ಮತ್ತು ವಿದ್ವಾಂಸರ ಸಂದರ್ಶನಗಳ ಸಹಾಯವನ್ನು ಪಡೆದುಕೊಳ್ಳಲಾಗಿದೆ.

ಈ ಅಧ್ಯಯನವು ಮೊಹರಂ ಹಾಡುಗಳ ಸಾಹಿತ್ಯಕ ವಿಶ್ಲೇಷಣೆಯನ್ನು ಮಾಡುತ್ತದೆ. ಇದರ ಜೊತೆಯಲ್ಲಿ ಹಾಡುಗಳ ವಿಶ್ಲೇಷಣೆಯಲ್ಲಿ ಹಾಡುಗಳ ಸಾಮಾಜಿಕ ವಿಶ್ಲೇಷಣೆಯನ್ನೂ ಮಾಡಲು ಯತ್ನಿಸಿದೆ. ಇದಕ್ಕಾಗಿ ಇದು ಬಹುಶಿಸ್ತೀಯ ವಿಧಾನವನ್ನು ಅನುಸರಿಸಲು ಯತ್ನಿಸಿದೆ. ಈ ಹಾಡುಗಳನ್ನು ಹಾಡುವ ಜನರ ಬದುಕು ಮತ್ತು ಮನೋಧರ್ಮಕ್ಕೂ ಈ ಹಾಡುಗಳಲ್ಲಿರುವ ವಿಷಯ ಮತ್ತು ಧೋರಣೆಗೂ ಇರುವ ಅಂತರಸಂಬಂಧಗಳನ್ನು ಕೂಡ ಇಲ್ಲಿ ವಿಶ್ಲೇಷಿಸಲು ಯತ್ನಿಸಲಾಗುವುದು. ಅಂದರೆ ನೇರವಾಗಿ ಮೊಹರಂಗೆ ಸಂಬಂಧವಿಲ್ಲದ ಆದರೆ ಮೊಹರಂ ಸಂದರ್ಭದಲ್ಲಿ ಹಾಡಲಾಗುವ

ಹಾಡುಗಳಲ್ಲಿ ಸೂಚ್ಯವಾಗಿ ಇರುವ ಮೊಹರಂ ಆಶಯಗಳನ್ನು ಶೋಧಿಸಲು ಯತ್ನಿಸಲಾಗುವುದು. ಒಟ್ಟಾರೆಯಾಗಿ ಮೊಹರಂ ಹಾಡುಗಳ ಮೂಲಕ ಜನಪದ ಜೀವನ ಚಿಂತನೆಯನ್ನು ಅರಿಯಲು ಇಲ್ಲಿ ಯತ್ನಿಸಲಾಗುವುದು. ಅಂದರೆ ಸಾವಿನ ಸಂದರ್ಭ, ದುರಂತಗಳ ಅನುಭವ, ಮಾನವರ ಅಸಹಾಯಕತೆ, ದುರ್ಬಲ ವ್ಯಕ್ತಿಗಳ ಮೇಲೆ ಬಲಿಷ್ಠ ವ್ಯಕ್ತಿಗಳ ದಬ್ಬಾಳಿಕೆ, ದೈವದ ಸಹಾಯ ಇವುಗಳನ್ನು ಕುರಿತು ನಮ್ಮ ಜನಪದರು ಹೇಗೆ ಚಿಂತನೆ ಮಾಡಿದ್ದಾರೆ ಎಂಬ ಬಗ್ಗೆ ವಿಶ್ಲೇಷಿಸಲು ಯತ್ನಿಸಲಾಗುವುದು.

ಯಾದಗಿರಿ ಭಾಗದ ಮೊಹರಂ ಹಾಡುಗಳಲ್ಲಿ ಬಹುಭಾಷೆಗಳಲ್ಲಿ ಸಿಗುತ್ತವೆ. ಈ ಬಹುಭಾಷಿಕತೆಯ ಹಿಂದೆ ಇರುವ ಬಹು ಜಾತೀಯ ಸಮಾಜ, ಬಹುಧಾರ್ಮಿಕ ಸಮಾಜ, ಬಹು ಸಂಸ್ಕೃತಿಯ ಸಮಾಜದ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಯತ್ನಿಸಲಾಗುವುದು. ಈ ಬಹುತ್ವದ ತತ್ವಕ್ಕೂ ಮೊಹರಂ ಹಾಡುಗಳಿಗೂ ಇರುವ ಆಂತರಿಕ ಸಂಬಂಧವನ್ನು ತೌಲನಿಕವಾಗಿ ನೋಡಲು ಯತ್ನಿಸಲಾಗುವುದು.

ಮೊಹರಂ ಹಾಡುಗಾರರು ಕೇವಲ ಕರ್ಬಲ ಪ್ರಸಂಗದ ಮೇಲೆ ಹಾಡುವುದಿಲ್ಲ. ಇತರೆ ಲೌಕಿಕ ವರ್ತಮಾನದ ವಿಷಯಗಳ ಮೇಲೂ ಹಾಡಿದ್ದಾರೆ. ಈ ಹಾಡುಗಳಲ್ಲಿ ಅವರ ಚಿಂತನ ಕ್ರಮವು ಗೊತ್ತಾಗುವುದು. ಮೊಹರಂ ಹಾಡುಗಳು ಪೌರಾಣಿಕ, ಐತಿಹಾಸಿಕ ಸಂಗತಿಗಳನ್ನೂ ಒಳಗೊಂಡಿವೆ. ಇವುಗಳ ಮೂಲಕ ಯಾದಗಿರಿ ಭಾಗದ ಸಾಂಸ್ಕೃತಿಕ ಚರಿತ್ರೆಯು ಪ್ರಕಟವಾಗುವುದು. ಈ ಹಿನ್ನೆಲೆಯಲ್ಲಿ ಮೊಹರಂ ಹಾಡುಗಳನ್ನು ಯಾದಗಿರಿ ಭಾಗದ ಸಾಮಾಜಿಕ ಸನ್ನಿವೇಶ ಹಾಗೂ ಚಾರಿತ್ರಿಕ ಸನ್ನಿವೇಶದ ಜತೆ ಲಗತ್ತಿಸಿ ನೋಡುವ ಯತ್ನವನ್ನು ಮಾಡಲಾಗಿದೆ.

ಅಧ್ಯಾಯ : ಎರಡು

ಯಾದಗಿರಿ ಪರಿಸರದ ಚಾರಿತ್ರಿಕ ಹಿನ್ನೆಲೆ

ಅಧ್ಯಾಯ : ಎರಡು

ಯಾದಗಿರಿ ಪರಿಸರದ ಚಾರಿತ್ರಿಕ ಹಿನ್ನೆಲೆ

ಒಂದು ನಾಡಿನ ಚರಿತ್ರೆ ಎಂದರೆ ಕೇವಲ ಅದನ್ನು ಆಳಿದ ರಾಜರ ಕಥೆಯಲ್ಲ. ಅಲ್ಲಿ ಬದುಕಿದ ಜನರ ಕಥೆ. ಜನರ ಬದುಕಿನ ರೀತಿ–ನೀತಿಗಳು ಅವರು ಕಟ್ಟಿದ ಕಲೆ, ಅವರ ಜೀವನ ಸಮಸ್ಯೆಗಳು ಮತ್ತು ಭಾವನೆಗಳು ಅವರ ಜೀವನ ಮೌಲ್ಯಗಳು ಇತ್ಯಾದಿಗಳ ವಿವರಣೆಯೇ ಒಂದು ನಾಡಿನ ಇತಿಹಾಸ. ಜನತೆಯ ಜೀವನವನ್ನು ಕುರಿತಾದ ಇಂತಹ ವಿಷಯವೇ ಸಂಸ್ಕೃತಿ ಆಗುತ್ತದೆ. ಆದರೆ ಈ ಜನರ ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಅಲ್ಲಿಯ ರಾಜಕೀಯ ಧಾರ್ಮಿಕ ಸಾಮಾಜಿಕ ವಿದ್ಯಮಾನಗಳು ಪ್ರಭಾವಿಸಿರುತ್ತವೆ. ಆದ್ದರಿಂದ ಈ ರಾಜಕೀಯ ಸಾಮಾಜಿಕ ಚರಿತ್ರೆಯ ಹಿನ್ನೆಲೆಯಿಲ್ಲದೆ ಅಲ್ಲಿ ಸಾಹಿತ್ಯ, ಕಲೆ, ಆಚರಣೆ, ಧರ್ಮಗಳನ್ನು ನೋಡಲು ಆಗುವುದಿಲ್ಲ.

ಯಾದಗಿರಿಯ ಹೆಸರು ಹೇಗೆ ಬಂತೆಂಬ ಬಗ್ಗೆ ಅನೇಕ ವಾಗ್ವಾದಗಳಿವೆ. ಯಾದವರು ಆಳಿದ ಗಿರಿ ಯಾದವಗಿರಿ > ಯಾದಗಿರಿ ಎಂದು ಕರೆಯುವರು. ಯಾದಗಿರಿ ಬೆಟ್ಟವು ನೈಸರ್ಗಿಕವಾದ ಮಲಗಿದ ಎತ್ತಿನ ಹಾಗೆ ಕಾಣುತ್ತದೆ. ಅದಕ್ಕಾಗಿ ಇದು ಎತ್ತಿನಗಿರಿ > ಯಾದಗಿರಿಯಾಗಿರಬೇಕು ಎಂದು ಅಭಿಪ್ರಾಯವಿದೆ. ಆದರೆ ಇದನ್ನು ಶಾಸನಗಳಲ್ಲಿ 'ಏತಗಿರಿ' ಎಂದು ಕರೆಯಲಾಗಿದೆ. ಕರ್ನಾಟಕದ ಪ್ರಮುಖ ರಾಜವಂಶಗಳಲ್ಲಿ ಒಂದು ಮಳಖೇಡದ ರಾಷ್ಟ್ರಕೂಟರು ಯಾದಗಿರಿ ಭಾಗವನ್ನು ಆಳಿದರು. ಎಂಟನೆಯ ಶತಮಾನದ ಮಧ್ಯಭಾಗದಲ್ಲಿ ಚಾಲುಕ್ಯರಿಂದ ಯಾದಗಿರಿಯು ರಾಷ್ಟ್ರಕೂಟರ ಆಡಳಿತಕ್ಕೆ ಒಳಪಟ್ಟಿತು. ರಾಷ್ಟ್ರಕೂಟ ವಂಶದ ಅರಸರಲ್ಲಿ ಕೀರ್ತಿವಂತನಾದ ಅಮೋಘವರ್ಷ ನೃಪತುಂಗನ ಆಸ್ಥಾನದಲ್ಲಿ ಶ್ರೀವಿಜಯನಿಂದ ರಚಿತವಾದ ಕನ್ನಡದ ಮೊದಲನೇ ಕೃತಿಯಾದ 'ಕವಿರಾಜಮಾರ್ಗ'ವು ರಚಿತವಾಯಿತು. "ಕಾವೇರಿಯಿಂದ ಮಾಗೋದಾವರಿವರಮಿರ್ದ ನಾಡನ್ನು ಕನ್ನಡದೊಳ್" ಎಂದು ಶ್ರೀವಿಜಯನು ಅದರಲ್ಲಿ ಕನ್ನಡ ನಾಡಿನ ಅಂದಿನ ಗಡಿಗಳನ್ನು ಗುರುತಿಸಿದನು. ಜತೆಗೆ ಕನ್ನಡಿಗರ ಗುಣ ಸ್ವಭಾವಗಳನ್ನು ವಿವರಿಸಿದನು. ಇವುಗಳಲ್ಲಿ ಜನಪದ ಕವಿಗಳನ್ನು ಕುರಿತು ಹೇಳಿರುವ ಮಾತುಗಳು ಮುಖ್ಯವಾಗಿವೆ.

ಪದನರಿದು ನುಡಿಯಲುಂ ನುಡಿ
ದುದನರಿದಾರಯಲುಮಾರ್ಪರ್ ನಾಡವರ್ಗಳ್

ಚದುರರ್ ನಿಜದಿಂ ಕುರಿತೋ

ದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್॥ (೧-೩೮)

ಯಾದಗಿರಿ ಪರಿಸರದ ಮೊಹರಂ ಹಾಡುಗಳ ವಿಶ್ಲೇಷಣೆಯಲ್ಲಿ ಮೇಲಿನ ಮಾತುಗಳು ಬಹಳ ಮುಖ್ಯವಾಗಿವೆ. ಈಗಲೂ ಇಲ್ಲಿನ ಮೊಹರಂ ಹಾಡುಗಾರರಲ್ಲಿ ಅನೇಕರಿಗೆ ಅಕ್ಷರಾಭ್ಯಾಸವಿಲ್ಲ. ಆದರೂ ಅವರು ಕಾವ್ಯಪ್ರಯೋಗಪರಿಣತ ಮತಿಗಳಾಗಿರುವರು. ನಂತರ ಯಾದಗಿರಿ ಸೀಮೆಯು ಕಲ್ಯಾಣ ಚಾಲುಕ್ಯ ಅರಸ ಇಮ್ಮಡಿ ಜಯಸಿಂಹನ ರಾಜಧಾನಿಯಾಗಿ ಮೆರೆಯಿತು. ಇಲ್ಲಿನ ನೈಸರ್ಗಿಕ ವಾಗಿ ಕಪ್ಪು ಭೂಮಿಯು ಫಲವತ್ತಾಗಿತ್ತು. ಸಮೀಪದ ಭೀಮಾನದಿ ಮತ್ತು ಸುತ್ತಲಿನ ಕೆರೆಗಳು ಅಂದು ನೀರಾವರಿ ಸೌಲಭ್ಯವನ್ನು ಒದಗಿಸಿದ್ದವು. ಯಾದಗಿರಿಯ ಗಿರಿದುರ್ಗವನ್ನು ರಾಜರು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಳ್ಳುತ್ತ ಹೋದರು. ನಂತರ ಈ ಪ್ರದೇಶವು ಮುಸ್ಲಿಂ ಅರಸರ ಆಡಳಿತಕ್ಕೆ ಒಳಪಟ್ಟಿತು. ಕ್ರಿ.ಶ.೧೩೪೭ರಲ್ಲಿ ಕಲಬುರ್ಗಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಬಹುಮನಿ ಸುಲ್ತಾನರು ಈ ಭಾಗವನ್ನು ಆಳ್ವಿಕೆ ಮಾಡಹತ್ತಿದರು. ಬಹುಮನಿ ಸುಲ್ತಾನರ ಆಡಳಿತ ನೇಪಥ್ಯಕ್ಕೆ ಸೇರಿದಾಗ, ಅದರ ಸುಬೇದಾರರು ಪ್ರಬಲರಾಗುತ್ತ ಆಡಳಿತಯಂತ್ರವನ್ನು ತಮ್ಮ ಕೈಗೆತ್ತಿಕೊಂಡರು. ಬಳಿಕ ಬಿಜಾಪುರದ ಆದಿಲಶಾಹಿಗಳಿಗೆ ಯಾದಗಿರಿಯು ಸೇರಿತು. ಎರಡನೇ ಇಬ್ರಾಹಿಂ ಆದಿಲ್ ಇದರಲ್ಲಿ ಪ್ರಮುಖ ಅರಸನಾಗಿದ್ದನು. ಇವನು ವಿಜಯನಗರದ ಅರಸರೊಂದಿಗೆ ಯುದ್ಧಗಳನ್ನು ಮಾಡಿದ್ದನು. ರಾಯಚೂರು ಇವರೀರ್ವರ ನಡುವಿನ ಯುದ್ದ ಸ್ಥಳವಾಗಿತ್ತು. ರಾಯಚೂರು ಯಾದಗಿರಿ ಸಮೀಪವೇ ಇರುವುದರಿಂದ ಯುದ್ಧದ ಪ್ರಭಾವ ಪರಿಣಾಮ ಯಾದಗಿರಿಗೂ ತಟ್ಟುತ್ತಿತ್ತು. ವಿಜಯನಗರದ ಸಾಮ್ರಾಜ್ಯದ ಅವನತಿಯ ನಂತರದ ಯಾದಗಿರಿ ಸಂಪೂರ್ಣವಾಗಿ ಬಿಜಾಪುರ ರಾಜ್ಯದ ಸೀಮೆಗೆ ಸೇರಿತು. ವಿಜಾಪುರದ ಆದಿಲ್‌ಶಾಹಿ ಕಾಲದಲ್ಲಿ ಈ ಸ್ಥಳ ಮುಜಫರ್ ನಗರ ಎಂದು ಹೆಸರಾಗಿತ್ತು. ಇಲ್ಲಿ ಮಸೀದಿಗಳು ನಿರ್ಮಾಣಗೊಂಡವು. ಮುಸ್ಲಿಂ ಶೈಲಿಯ ಕಮಾನುಗಳನ್ನು ಈಗಲು ನಗರದ ಮುಖ್ಯ ರಸ್ತೆಯಲ್ಲಿ ಕಾಣಬಹುದು. ಆದಿಲ್‌ಶಾಹಿ ನಾಯಕ ಫಾಜಿಖಾನನು ಯಾದಗಿರಿಯ ಮಸೀದಿಯನ್ನು ಕಟ್ಟಿಸಿದನು. ಕೆಲವು ಕಾಲ ಯಾದಗಿರಿ ಪ್ರದೇಶವು ಶಿವಾಜಿಯ ವಶಕ್ಕೂ ಹೋಗಿತ್ತು. ಆಗ ಶಿವಾಜಿಯು ತನ್ನ ತಮ್ಮನಾದ ವೆಂಕೋಜಿಗೆ ಇಲ್ಲಿಯ ಆಡಳಿತದ ಮೇಲ್ವಿಚಾರಣೆಯನ್ನು ವಹಿಸಿದನು. ಬಿಜಾಪುರದ ಅರಸರು, ಮತ್ತೆ ಯಾದಗಿರಿ ಪ್ರದೇಶ ತಮ್ಮ ಕೈಗೆ ತೆಗೆದುಕೊಂಡರು. ಆದಿಲಶಾಹಿ ಅರಸರ ಕೈಯಲ್ಲಿದ್ದ ಯಾದಗಿರಿಯನ್ನು ಮೊಗಲರ ಚಕ್ರವರ್ತಿ ಔರಂಗಜೇಬನು ದಕ್ಷಿಣದ ಮೇಲಿನ ತನ್ನ ದಂಡಯಾತ್ರೆಯಲ್ಲಿ ವಶಪಡಿಸಿಕೊಂಡನು. ಮೊಗಲರು ಯಾದಗಿರಿಯನ್ನು ಬಿಜಾಪುರ ಅರಸರಿಂದ ಕಿತ್ತುಕೊಂಡು, ಅಬ್ದುಲ್ ರಹೀಂ ಎಂಬ

ಸುಬೇದಾರನಿಗೆ ಜಹಗೀರಾಗಿ ಕೊಟ್ಟರು. ಫಟ್ಟದಲ್ಲಿ ಈ ಭಾಗವು ಹೈದರಾಬಾದ್ ಪ್ರಾಂತ್ಯಕ್ಕೆ ಸೇರಿತು. ನಿಜಾಮರ ಆಳ್ವಿಕೆ ಇಲ್ಲಿಂದ ಆರಂಭವಾಯಿತು. ನಿಜಾಮರು ಬ್ರಿಟೀಶರ ಕೈಗೊಂಬೆ ಅರಸರಾಗಿದ್ದರು. ಮಹಾರಾಷ್ಟ್ರದ ಪೇಶ್ವೆಗಳು, ಮೈಸೂರಿನ ಹೈದರಾಲಿ, ಫ್ರೆಂಚರು, ಬ್ರಿಟಿಷರು ಈ ಭಾಗವನ್ನು ವಶಪಡಿಸಿಕೊಳ್ಳಲು ಮತ್ತು ನೆಲೆಗೊಳ್ಳಲು ನಿರಂತರವಾಗಿ ಹೊಂಚು ಹಾಕುತ್ತಿದ್ದರು. ಈ ಪ್ರಾಂತದಲ್ಲಿ ಅಧಿಕಾರಕ್ಕೆ ಬಂದ ಮೊದಲ ನಿಜಾಮನು ಮರಣ ಹೊಂದಿದನು. ಅವನ ಬೆನ್ನಹಿಂದೆಯೇ ಅಧಿಕಾರಕ್ಕೆ ಬರಲು ಅಂತಃಕಲಹಗಳು ತೀವ್ರವಾಗಿ ನಡೆದವು. ಈ ಅವಧಿಯಲ್ಲಿ ದಂಗೆಗಳು ಉಲ್ಬಣಗೊಂಡವು. ದಂಗೆಗಳ ಮೇಲೆ ಯಾರ ನಿಯಂತ್ರಣವೂ ಇರಲಿಲ್ಲ. ಇದೇ ಸರಿಯಾದ ಸಮಯವೆಂದು ಫ್ರೆಂಚರು ಮತ್ತು ಬ್ರಿಟಿಷರು ನಿಜಾಮರ ಅಂತಃಕಲಹದಲ್ಲಿ ಕೈಹಾಕಿದರು. ಮೊದಲ ನಿಜಾಮನ ಮಗ ನಾಸಿರಜಂಗನಿಗೂ ಹಾಗೂ ಮಗಳ ಮಗ ಮುಜಫರ ಜಂಗನಿಗೂ ಅಧಿಕಾರಕ್ಕಾಗಿ ತೀವ್ರ ಪೈಪೋಟಿ ನಡೆಯಿತು. ಫ್ರೆಂಚರು ಮುಜಫರ ಜಂಗನಿಗೂ ಬ್ರಿಟಿಷರು ನಾಸಿರ್ ಜಂಗನಿಗೂ ಬೆಂಬಲವಾಗಿ ನಿಂತರು. ಮುಜಫರ್‌ಜಂಗನು ಫ್ರೆಂಚರ ಬೆಂಬಲದಿಂದ ಅಧಿಕಾರಕ್ಕೆ ಬಂದನು. ಆದರೆ ಕಲಹದಲ್ಲಿ ಸಾವಿಗೀಡಾದನು.

ಮುಂದೆ ನಾಸಿರಜಂಗನ ತಮ್ಮ ಸಲಬತ್ ಜಂಗನು ಅಧಿಕಾರಕ್ಕೆ ಬಂದನು. ಈ ಸಂದರ್ಭದಲ್ಲಿ ಫ್ರೆಂಚರ ಪ್ರಾಬಲ್ಯ ಹೆಚ್ಚಾಗಿತ್ತು. ಫ್ರೆಂಚರಿಂದ ಬೆಂಬಲಿತನಾದ ಸಲಬತ್‌ಜಂಗ್ ಅಧಿಕಾರದಲ್ಲಿದ್ದಾಗ ಇವನ ತಮ್ಮನಾದ ನಿಜಾಮಲಿ ಖಾನ್ ಬಂಡಾಯ ಹೂಡಿದನು. ಆಗ ಸಲಬತ್‌ಜಂಗನು ಬ್ರಿಟಿಷರ ಮೊರೆ ಹೋದನು. ಇದೇ ಸಂದರ್ಭವನ್ನು ಬ್ರಿಟಿಷರು ಸರಿಯಾಗಿ ಉಪಯೋಗಿಸಿಕೊಂಡು ಅವನನ್ನು ಅಧಿಕಾರಕ್ಕೆ ತಂದರು. ಇಲ್ಲಿಂದಲೇ ನಿಜಾಮರು ಬ್ರಿಟಿಷರ ಹಿಡಿತಕ್ಕೆ ಒಳಗಾದರು.

ಇದೇ ಅವಧಿಯಲ್ಲಿ ಹೈದರಾಲಿಯು ಮೈಸೂರು ಪ್ರಾಂತ್ಯವನ್ನು ಆಳುತ್ತಿದ್ದನು. ಹೈದರಾಲಿಗೆ ರಾಜಕೀಯ ಅಧಿಕಾರ ಹಿಡಿಯಲು ಹಕ್ಕಿಲ್ಲವೆಂದು ನಿಜಾಮಲಿಖಾನ್ ದ್ವೇಷಿಸುತ್ತಿದ್ದನು. ಬ್ರಿಟಿಷರು ನಿಜಾಮರ, ಮರಾಠರ ಬೆಂಬಲವನ್ನು ನಿರಂತರವಾಗಿ ಪಡೆದು ಮೈಸೂರನ್ನು ಮುತ್ತಿಗೆ ಹಾಕುತ್ತಿದ್ದರು. ಕರ್ನಾಟಕದಲ್ಲಿ ಬ್ರಿಟಿಷರ ವಸಾಹತುಶಾಹಿ ಆಡಳಿತವನ್ನು ವಿರೋಧಿಸುತ್ತಿದ್ದ ಟಿಪ್ಪುಸುಲ್ತಾನಿಗೆ ನಿಜಾಮರು, ಮರಾಠರು ಬೆಂಬಲ ನೀಡಲಿಲ್ಲ. ಬದಲಾಗಿ ಬ್ರಿಟಿಷರಿಗೆ ಅನೇಕ ರೀತಿಯ ನೆರವನ್ನು ನೀಡಿ ಬೆಂಬಲಿಸಿದರು. ಟಿಪ್ಪುಸುಲ್ತಾನನು ನಿಜಾಮರ ಜತೆ ವೈವಾಹಿಕ ಸಂಬಂಧವನ್ನು ಬೆಳಸಲು ಪ್ರಯತ್ನಿಸಿದ. ಅದು ಸಾಧ್ಯವಾಗಲಿಲ್ಲ. ರಾಜಕೀಯ ಅಧಿಕಾರ, ಯುದ್ಧ ಮತ್ತು ನಾಶಗಳಿಗೆ ಧರ್ಮವು ಅಡ್ಡಿ ಬರುವುದಿಲ್ಲ ಎಂಬುದಕ್ಕೆ ಇದು ಸಾಕ್ಷಿ.

ಟಿಪ್ಪುವಿನ ಪತನಾನಂತರ ಬ್ರಿಟೀಶರು ಮೈಸೂರು ರಾಜ್ಯದ ಅಧೀನದಲ್ಲಿದ್ದ ಬಳ್ಳಾರಿಯನ್ನು ಮದ್ರಾಸ್ ಪ್ರಾಂತ್ಯಕ್ಕೆ ಒಳಪಡಿಸಿದರು. ೧೮೧೮ರಲ್ಲಿ ಪೇಶ್ವೆಗಳ ಆಳ್ವಿಕೆಯನ್ನು ಮುಕ್ತಾಯಗೊಳಿಸಿದ ಬ್ರಿಟಿಷರು ಅವರ ಅಧೀನದ ಪ್ರದೇಶಗಳನ್ನು ಮುಂಬೈ ಪ್ರಾಂತ್ಯಕ್ಕೆ ಸೇರಿಸಿದರು. ನಿಜಾಂ ಸಂಸ್ಥಾನದಲ್ಲಿ ಕರ್ನಾಟಕದ ಬೀದರ್, ಗುಲ್ಬರ್ಗ ಮತ್ತು ರಾಯಚೂರು ಜಿಲ್ಲಾ ಪ್ರದೇಶಗಳು ಸೇರಿಸಿದರು.

ನಿಜಾಮ ಪ್ರಾಂತ್ಯಕ್ಕೆ ಬೀದರ್, ಗುಲಬರ್ಗ, ರಾಯಚೂರು ಜಿಲ್ಲೆಗಳು ಸೇರಿದವು. ಇಲ್ಲಿನ ಬಹುಸಂಖ್ಯಾತರ ಭಾಷೆ ಕನ್ನಡವಾಗಿತ್ತು. ಆದರೆ ನಿಜಾಮ ರಾಜ್ಯದಲ್ಲಿ ಉರ್ದು ಭಾಷೆಗೆ ಹೆಚ್ಚಿನ ಸ್ಥಾನ ದೊರೆಯಿತು. ಬ್ರಿಟಿಷರು ಹೈದರಾಬಾದ್ ನಿಜಾಮರನ್ನು ತಮ್ಮ ಕೈಗೊಂಬೆಯಂತೆ ನಡೆಸಿಕೊಳ್ಳುತ್ತಿದ್ದರು. ೧೯೪೭ರಲ್ಲಿ ದೇಶ ಬ್ರಿಟೀಶರ ಆಳ್ವಿಕೆಯಿಂದ ಮುಕ್ತವಾಯಿತು. ಆದರೆ ಹೈದರಾಬಾದ್ ನಿಜಾಮರು ಭಾರತದ ಒಕ್ಕೂಟದಲ್ಲಿ ಹೈದರಾಬಾದ್ ಸಂಸ್ಥಾನವನ್ನು ವಿಲೀನಗೊಳಿಸಲು ಸಮ್ಮತಿಸಲಿಲ್ಲ. ಆಗ ಭಾರತ ಸರ್ಕಾರವು ತನ್ನ ಸೈನಿಕ ಕಾರ್ಯಾಚರಣೆ ಮಾಡಿ, ಈ ಪ್ರದೇಶವನ್ನು ಒಕ್ಕೂಟಕ್ಕೆ ಸೇರಿಸಿಕೊಂಡಿತು. ೧೯೪೮ರ ಸೆಪ್ಟೆಂಬರ್ ೧೭ ರಂದು ಹೈದರಾಬಾದ್ ಪ್ರಾಂತ್ಯವು ಭಾರತದಲ್ಲಿ ವಿಲೀನವಾಯಿತು. ಈ ಸಂದರ್ಭದಲ್ಲಿ ಉಂಟಾದ ರಜಕಾರರ ದಂಗೆಗಳು ನಡೆದವು. ಜನಜೀವನ ಅಲ್ಲೋಲ ಕಲ್ಲೋಲವಾಯಿತು. ಇಲ್ಲಿನ ಜನಪದ ಸಾಹಿತ್ಯದಲ್ಲಿ ರಜಾಕಾರರ ಹಾವಳಿಯ ಬಗೆಗಿನ ಲಾವಣಿ ಪದಗಳು ಇನ್ನೂ ಇವೆ. ಹೈದರಾಬಾದಿನಲ್ಲಿ ೧೯೫೦ರಲ್ಲಿ ಹೊಣೆಗಾರ ಸರಕಾರ ಅಸ್ತಿತ್ವದಲ್ಲಿ ಬಂದಿತು. ಈ ಯಾದಗಿರಿ ಪ್ರದೇಶವು ಭಾಷಾವಾರು ಪ್ರಾಂತ್ಯ ರಚನೆಯಾದ ನಂತರ ಮೈಸೂರು ರಾಜ್ಯ ಸೇರಿತು.

ಹೀಗೆ ಸುಮಾರು ೧೫೦೦ ವರ್ಷಗಳ ಇತಿಹಾಸದಲ್ಲಿ ವಿವಿಧ ರಾಜಮನೆತನಗಳ ಆಳ್ವಿಕೆಯನ್ನು ಕಂಡ ಯಾದಗಿರಿ ಭಾಗವು, ತನ್ನದೆ ಆದ ವಿಶಿಷ್ಟ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿದೆ. ಇವೆಲ್ಲವೂ ಇಲ್ಲಿನ ಕಲೆ ಭಾಷೆ ಸಾಹಿತ್ಯದ ಮೇಲೆ ಪ್ರಭಾವ ಬೀರಿವೆ. ಮೊಹರಂ ಪದಗಳ ಹಿನ್ನೆಲೆಯಲ್ಲಿ ಕೂಡ ಇವು ಕೆಲಸ ಮಾಡಿವೆ. ತತ್ವಪದಕಾರರ ತತ್ವಪದಗಳಲ್ಲಿ ಕೆಲಸ ಮಾಡಿವೆ.

ಧಾರ್ಮಿಕ ಸಾಂಸ್ಕೃತಿಕ ಪರಿಸ್ಥಿತಿಗಳು

ಈ ಪ್ರದೇಶವು ಆದಿಲ್‌ಶಾಹಿಗಳ ಆಳ್ವಿಕೆ ನಿಂತುಹೋದ ಮೇಲೆ ಈ ಪ್ರಾಂತದಲ್ಲಿ ಅರಾಜಕತೆ ಹುಟ್ಟಿಕೊಂಡಿತು. ಯಾವುದೇ ಪ್ರಮುಖ ಧರ್ಮ ಜನ ಸಮುದಾಯಗಳನ್ನು ಮುನ್ನಡೆಸುವಷ್ಟು ಕ್ರಿಯಾಶೀಲವಾಗಿರಲಿಲ್ಲ. ಶಾಹಿರಾಜ್ಯಗಳ ಆಳ್ವಿಕೆಯಲ್ಲಿ ಬ್ರಾಹ್ಮಣರಾಗಲಿ, ಲಿಂಗಾಯತರಾಗಲಿ ತಮ್ಮ ತಮ್ಮ ನಿರ್ದಿಷ್ಟ ವಲಯದೊಳಗೆ ಸಂಪ್ರದಾಯಗಳೊಂದಿಗೆ ಬದುಕುತ್ತಿದ್ದರು. ಇಸ್ಲಾಮ್ ಧರ್ಮವು

ಕ್ರಿಯಾಶೀಲವಾಗಿದ್ದರೂ ಅದಕ್ಕೂ ಕೆಲವು ಮಿತಿಗಳು ಇದ್ದವು. ಪ್ರಮುಖ ಧರ್ಮಗಳು ಈ ಕಾಲಾವಧಿಯಲ್ಲಿ ಜಡವಾಗಿದ್ದವು. ಆದರೆ ಈ ಕಾಲದಲ್ಲಿ ಕೆಲವು ಪಂಥಗಳು ಚುರುಕಾಗಿದ್ದವು. ಇವು ಬಡವರನ್ನು ಕೆಳವರ್ಗದವರನ್ನು ಆಕರ್ಷಿಸಿದ್ದವು. ಈ ಪಂಥಗಳ ವ್ಯಕ್ತಿಗಳು ಸೂಫಿಗಳು, ಅವಧೂತರು, ಆರೂಢರು, ಸಿದ್ಧರು ಆಗಿದ್ದರು. ಆದಿಲ್‌ಶಾಹಿಗಳ ಆಳ್ವಿಕೆ ಕೊನೆಗೊಂಡ ಕಾಲಕ್ಕೆ ಸೂಫಿಗಳ ಪ್ರಭಾವ ಇಳಿಮುಖವಾಗಿತ್ತು. ಇದ್ದವರೆಲ್ಲ ಪ್ರಭುತ್ವದ ಜತೆ ಗುರುತಿಸಿಕೊಂಡು ಆಸ್ತಿವಂತರಾಗಿ ಸಾಂಸ್ಥಿಕಗೊಂಡಿದ್ದರು. ಆದರೂ ಸೂಫಿ ಸಂತರ ದರ್ಗಾಗಳು ಕೆಳವರ್ಗಕ್ಕೆ ಸೇರಿದ ಪಿಂಜಾರರು, ಜಾತಿಗಾರರು, ಕಲಾಯಿಕಾರರು, ದಲಿತರು ಮುಂತಾದ ದಮನಿತ ಸಮುದಾಯಗಳ ಆರಾಧನಾ ಕೇಂದ್ರಗಳಾಗಿ ಜೀವಂತಿಕೆ ಪಡೆದಿದ್ದವು. ಈ ಸನ್ನಿವೇಶದಲ್ಲಿ ಹೆಚ್ಚಾಗಿ ಕೆಳವರ್ಗದ ಜನರೇ ಭಾಗವಹಿಸುವ, ಉರುಸು, ಜಾತ್ರೆ, ಮೊಹರಂ ಮುಂತಾದ ಉತ್ಸವಗಳು ಜನಪ್ರಿಯತೆ ಪಡೆಯುತ್ತ ಹೋದವು. ಮೊಹರಂ ಆಚರಣೆಗೂ ಆರೂಢ ಸಂಪ್ರದಾಯಕ್ಕೂ ಸೂಫಿಪಂಥಕ್ಕೂ ಅನೇಕ ಬಗೆಯ ಒಳಸಂಬಂಧಗಳಿವೆ. ಇವುಗಳಲ್ಲಿ ಭಾಗವಹಿಸುವ ಜನ, ಹಾಡುವ ಗಾಯಕರು ಬಹುಮಟ್ಟಿಗೆ ಒಂದೇ ಆಗಿರುವರು.

ಯೌಗಿಕ ಪಂಥಗಳ ಅವಧೂತರು, ಆರೂಢರು, ಸಿದ್ಧರು, ನಾಥರು ಎಂದು ಕರೆಸಿಕೊಳ್ಳುವ ಸಂತರು ಅನುಭಾವಿಗಳು ೧೭-೧೯ನೇ ಶತಮಾನದಲ್ಲಿ ತಮ್ಮ ಅನುಭಾವಿಕ ವ್ಯಕ್ತಿತ್ವದಿಂದಲೇ ಜನ ಸಾಮಾನ್ಯರನ್ನು ಆಕರ್ಷಿಸಿದರು. ಸಮಾಜದಲ್ಲಿ ಅರಾಜಕತೆಯನ್ನು ಕಮ್ಮಿ ಮಾಡಲು ಇವರು ಪರೋಕ್ಷವಾಗಿ ಕಾರಣರಾದವರು. ಹಾಗೆ ನೋಡಿದರೆ ಈ ಸಂತ ಪರಂಪರೆಯವರು ವ್ಯಕ್ತಿಗತವಾಗಿ ದೇವರನ್ನು ತಮ್ಮ ಸಾಧನೆಯಿಂದ ದಕ್ಕಿಸಿಕೊಳ್ಳಬಹುದೆಂದು ನಂಬಿದವರು. ಇಂಥ ಅನುಭವಕ್ಕಾಗಿ ಬೇಕಾಗುವ ತನ್ನಯತೆಯನ್ನು ಪಡೆಯಲು ಲೌಕಿಕ ಕಟ್ಟುಪಾಡುಗಳನ್ನು ಬದಿಗೊತ್ತಿದವರು. ತಮ್ಮ 'ಒಳದನಿ'ಗೆ ಮಾತ್ರ ಓಗೊಡುವ ಸ್ಥಿತಿಗೆ ಬದ್ಧರಾದವರು. ತಾವು ಸಾಧನೆಯಿಂದ ದಕ್ಕಿಸಿಕೊಳ್ಳುವ ಅನುಭಾವಿಕ ಶಕ್ತಿಗೆ ಶರಣಾಗಿ, ಅದರ ಜತೆ ಮೌನ ಸಂವಾದವನ್ನು ನಿರಂತರವಾಗಿ ನಡೆಸಿ ಅನುಭವದ ಅತ್ಯಂತಿಕ ಗತಿಗೆ ಯತ್ನಿಸಿದವರು. ತಮ್ಮ ಸಾಧನೆಗೆ ಆರಂಭದಲ್ಲಿ ಗುರುವಿನ ನೆರವನ್ನು ಉತ್ಕಟವಾಗಿ ಬಯಸಿದವರು. ವ್ಯಕ್ತಿಗತವಾಗಿ ತಮ್ಮ ಆತ್ಮೋನ್ನತಿಗಾಗಿ ಧ್ಯಾನ, ಯೋಗದಲ್ಲಿ ನಿರತರಾಗಿ ತರ್ಕದ ವ್ಯಾಮೋಹವನ್ನು ಕಳೆದುಕೊಂಡು ಯೋಗಿಗಳಾದವರು. ಇಂಥ ಯೋಗಿಗಳು ಯಾವುದೇ ಧರ್ಮವನ್ನು ಪ್ರತಿಪಾದಿಸಲಿಲ್ಲ. ಅವರು ಯಾವುದೇ ಜಾತಿಯಲ್ಲಿ ಹುಟ್ಟಿರಬಹುದು. ಆ ಜಾತಿ-ಧರ್ಮವನ್ನು ಅವರು ಪ್ರಚಾರ ಮಾಡುವ ಯಾವುದೇ ಕೆಲಸಕ್ಕೆ ಕೈಹಾಕಲಿಲ್ಲ. ಅಧಿಕಾರ, ಸಂಪತ್ತು ಭೋಗವನ್ನು ಖಂಡಿಸಿದರು. ಯೋಗಿಕ ಪಂಥದ ಈ ಅನುಭಾವಿಗಳು 'ಗುರು-ಶಿಷ್ಯ, ಸಂಪ್ರದಾಯದವರು;

ಈ ಜನಪ್ರಿಯ ಸಂತರನ್ನು ಬಡವರು, ದಲಿತರು, ಕೆಳವರ್ಗದವರು ತಮ್ಮ ಅನೇಕ ಬಂಧನಗಳಿಂದ ಕಳಚಿಕೊಳ್ಳಲು ಬೆನ್ನುಹತ್ತಿದರು.

ಇಂಥವರ ಪರಂಪರೆಗೆ ಸೇರಿದವರಲ್ಲಿ ಅನೇಕರು ಹಾಡುಗಳನ್ನು ಕಟ್ಟಿದವರಿದ್ದಾರೆ. ಅವರನ್ನು ತತ್ವಪದಕಾರರು ಎಂದು ಅವರ ಹಾಡುಗಳನ್ನು ತತ್ವಪದಗಳೆಂದು ಕರೆಯಲಾಗುತ್ತದೆ. ಈ ಪ್ರಾಂತ್ಯದಲ್ಲಿ ವಚನ ಸಾಹಿತ್ಯಕ್ಕಿಂತ ಹೆಚ್ಚು ಜನಪ್ರಿಯವಾಗಿರುವುದು ತತ್ವಪದಗಳ ಸಾಹಿತ್ಯ. ೧೮ ರಿಂದ ೨೦ನೇ ಶತಮಾನದ ಮಧ್ಯಭಾಗದವರೆಗೆ ಈ ಪ್ರಾಂತದಲ್ಲಿ ಜನಸಮುದಾಯಗಳ ನಾಲಿಗೆ ಮೇಲೆ ಇವು ಇದ್ದವು. ಇವುಗಳ ಜತೆ ದಾಸರ ಹಾಡುಗಳು ಮೊಹರಂ ಪದಗಳು ಕೂಡ ಇದ್ದವು. ದಾಸರ ಪದಗಳು ಬ್ರಾಹ್ಮಣ ವಲಯದಲ್ಲಿ ಮಾತ್ರ ಇದ್ದವು. ಆದರೆ ತತ್ವಪದಗಳು ಎಲ್ಲ ಜನಸಮುದಾಯದ ಬದುಕಿನಲ್ಲಿ ಹಾಸುಹೊಕ್ಕಾಗಿವೆ. ಇದರಂತೆ ಮೊಹರಂ ಪದಗಳು ಕೂಡ ಬಹುದೊಡ್ಡ ಸಮುದಾಯದಲ್ಲಿ ಹಾಡಲ್ಪಡುತ್ತವೆ.

ಭಾಷಿಕ ಪರಿಸ್ಥಿತಿಗಳು

ಮೇಲೆ ವಿವರಿಸಿದ ಧಾರ್ಮಿಕ ಸನ್ನಿವೇಶಕ್ಕೆ ತಕ್ಕಂತೆ ಇಲ್ಲಿನ ಭಾಷಿಕ ಸನ್ನಿವೇಶವೂ ಇದೆ. ಬಹಮನಿ ಮತ್ತು ಆದಿಲಶಾಹಿ ಆಳ್ವಿಕೆಯಲ್ಲಿ ಇಲ್ಲಿ ಫಾರಸಿ ಭಾಷೆಯು ಆಡಳಿತದ ಭಾಷೆಯಾಗಿತ್ತು. ಆದರೆ ಮುಂದೆ ಈ ಭಾಗದಲ್ಲಿ ಫಾರಸಿ ಭಾಷೆಯು ಹಿಂಜರಿಯುತ್ತ ಹೊಸದಾಗಿ ಹುಟ್ಟಿದ ದಖನಿ ಭಾಷೆಯು ಮುಂಚೂಣಿಗೆ ಬಂದಿವೆ. ಇದುವೇ ಮುಂದೆ ಉರ್ದು ಭಾಷೆಯಾಯಿತು. ಉರ್ದು ಭಾಷೆಯ ಹುಟ್ಟಿಗೆ ಕಾರಣವಾದ ಸನ್ನಿವೇಶಗಳು ಕುತೂಹಲಕರವಾಗಿವೆ. ಮಧ್ಯಯುಗದಿಂದ ದಖ್ಖನ್ ಪ್ರಾಂತ್ಯಕ್ಕೆ ಉತ್ತರದಿಂದ ಬಂದ ಸೈನಿಕರ ಜತೆಗೆ ಅರಬರು, ಟರ್ಕಿಗಳು, ಅಫ್ಘನ್ನರು, ಪರ್ಷಿಯನ್ನರು ಹೀಗೆ ಅನೇಕ ಬಗೆಯ ಜನವರ್ಗದವರು ಬಂದು ನೆಲೆಸತೊಡಗಿದರು. ಈ ಜನವರ್ಗದಲ್ಲಿ ಸೈನಿಕರಾದಿಯಾಗಿ ಮತಾಂತರಿಗಳು, ಸೂಫಿಸಂತರು, ವ್ಯಾಪಾರಿಗಳು, ವೃತ್ತಿಗಾಯರರು, ಅಧಿಕಾರಿಗಳು, ಕವಿ–ಕಲಾವಿದರು ಸೇರಿಕೊಂಡಿದ್ದರು, ಅರಬ್ಬಿ ತುರ್ಕಿ, ಫಾರಸಿ ಮುಂತಾದ ಭಾಷೆಗಳನ್ನು ಮಾತನಾಡುವವರಾಗಿದ್ದ ಇವರೆಲ್ಲ ಈ ಪ್ರಾಂತ್ಯದಲ್ಲಿ ಒಂದೆಡೆ ಬಾಳಬೇಕಾಯಿತು. ಇವರಿಗೆ ಈ ಪ್ರಾಂತ್ಯದ ಸ್ಥಳೀಯ ಮರಾಠಿ, ಕನ್ನಡ, ತೆಲಗು ಭಾಷಿಗರ ಜತೆ ಒಡನಾಟ ಅನಿವಾರ್ಯವಾಯಿತು. ಉತ್ತರದಿಂದ ಬಂದ ಭಿನ್ನಭಾಷಿಕರ ನಡುವೆ ಮತ್ತು ಈ ಭಿನ್ನ ಭಾಷೆಗಳ ಸ್ಥಳೀಯ ಭಾಷಿಗರ ನಡುವೆ ವ್ಯವಹರಿಸುವಾಗ ಸಹಜವಾಗಿ ಭಾಷಿಕ ತೊಡಕು ಉಂಟಾಯಿತು. ಸಂಪರ್ಕ ಸಂವಹನವು ಈ ಜನವರ್ಗಗಳ ನಡುವೆ ಕೇವಲ ತಾತ್ಕಾಲಿಕವಾಗಿರಲಿಲ್ಲ. ಸುಮಾರು ೨೦೦ ವರ್ಷಗಳ ಹೊತ್ತಿಗೆ

ಈ ಭಿನ್ನ ಭಾಷಿಕರು ಈ ಪ್ರಾಂತದಲ್ಲಿದ್ದು, ಒಡನಾಡಿನ ಫಲವಾಗಿ 'ದಖನಿ' ಎಂಬ ಭಾಷೆಯನ್ನು ಸೃಷ್ಟಿಸಿಕೊಂಡರು. ಈ 'ದಖನಿ' ಮಿಶ್ರ ಭಾಷೆಗಳಿಂದ ರೂಪಗೊಂಡಿತು. ಇದು ಸಂವಹನದ ತೊಡಕನ್ನು ನಿವಾರಿಸಿತು. ಆದರೂ ಈ ದಖನಿ ಭಾಷೆಯನ್ನು ಬೀದಿಭಾಷೆಯೆಂದೂ ಸೈನಿಕರು ಮಾಡಿಕೊಂಡ ಓರಟು ಭಾಷೆಯೆಂದೂ ಕಲಬೆರಕೆ ಭಾಷೆಯೆಂದೂ ಮತ್ತು ಅದನ್ನು ಸುಶಿಕ್ಷಿತರು ಬಯಸುವುದು ಅಗೌರವವೆಂದೂ ಮಡಿವಂತರು, ಮೂಲಭೂತವಾದಿಗಳು ಹೀಗಳೆದರು. ಆದರೆ ಈ ಭಾಷೆ ೧೫-೧೬ನೇ ಶತಮಾನಗಳಲ್ಲಿ ಸಾಂಸ್ಕೃತಿಕವಾಗಿ ದೊಡ್ಡದಾಗಿ ಬೆಳೆಯಿತು. ಅದು ಅನೇಕ ವರ್ಗದ ಜನರಿಗೆ ಬೇಕಾಗಿತ್ತು. ಸೈನಿಕರು ವ್ಯಾಪಾರಿಗಳು, ಸೂಫಿಗಳು ಮುಜುಗರವಿಲ್ಲದೆ ಇದನ್ನು ಬಳಸತೊಡಗಿದರು. ಮತಾಂತರಿಗಳಿಗೆ ಈ ಭಾಷೆಯ ಅಗತ್ಯ ಹೆಚ್ಚಾಗಿಯೇ ಕಂಡಿತು. ದಿನ ಕಳೆದಂತೆ ದಖನಿ ಭಾಷೆ ಜನ ಭಾಷೆಯಾಗಿ ಪರಿಣಮಿಸಿತು. ಆದಿಲ್‌ಶಾಹಿಗಳು ಈ ಭಾಷೆಯನ್ನು ಆಡಳಿತಕ್ಕೆ ಬಳಸಿದರು. ಎರಡನೇ ಇಬ್ರಾಹಿಂ ಆದಿಲಶಾಹಿಯು ಈ ಭಾಷೆಯನ್ನು ಅರಮನೆಯೊಳಗೆ ಬಿಟ್ಟುಕೊಂಡನು. ಅಲ್ಲಿಯವರೆಗೆ ಧಾರ್ಮಿಕ ಕಾರಣಗಳಿಗೆ ಅರಬ್ಬೀ ಭಾಷೆಯಿತ್ತು. ಆಡಳಿತ ಭಾಷೆಯಾಗಿ ಫಾರಸಿ-ಮರಾಠಿ ಭಾಷೆಗಳಿದ್ದವು. ಅವುಗಳ ಜಾಗದಲ್ಲಿ ಈಗ ದಖನಿಯು ಬಂದಿತು.

ಆದಿಲ್‌ಶಾಹಿಗಳು ದಖನಿಯನ್ನು ಪುರಸ್ಕರಿಸುವುದು ಎಂದರೆ ಜನಸಾಮಾನ್ಯರನ್ನು ಪುರಸ್ಕರಿಸುವುದು ಎಂದಂತಾಯಿತು. ಉತ್ತರದಿಂದ ಬಂದ ಸೂಫಿಸಂತ ಖ್ವಾಜಾ ಬಂದೇ ನವಾಜ್ ದಖನಿ ಭಾಷೆಯನ್ನೇ ಬಳಸಿ ತನ್ನ ಅನುಭವ ಸಾಹಿತ್ಯ ರಚಿಸಿದನು. ದಖನಿ ಭಾಷೆಯಲ್ಲಿ ಸಾಹಿತ್ಯವನ್ನು ರಚಿಸುವುದು ದೊಡ್ಡ ಸವಾಲಾಗಿಯೂ ಕ್ರಾಂತಿಕಾರಿಯಾಗಿಯೂ ಪರಿಣಮಿಸಿತು. ಸ್ವತಃ ೨ನೇ ಇಬ್ರಾಹಿಂ 'ಕಿತಾಬೆ-ನವರಸ್' ಎಂಬ ಸಂಗೀತಕ್ಕೆ ಸಂಬಂಧಿಸಿದ ಗ್ರಂಥವನ್ನು ಈ ಭಾಷೆಯಲ್ಲಿ ಬರೆದನು. ಈ ಪ್ರಾಂತದಲ್ಲಿ ಇದೇ ಭಾಷೆಯಲ್ಲಿ ಸಾಹಿತ್ಯ ರಚನೆಯಾಯಿತು. ಆದಿಲ್‌ಶಾಹಿಗಳನ್ನು ಬದಿಗೊತ್ತಿ ಬಂದ ಮೊಗಲರ ಕಾಲದಲ್ಲಿ ಈ ಭಾಷೆ ಕೊಂಚ ಹಿನ್ನಡೆ ಕಂಡಿತು. ಆದರೆ ಹೈದರಾಬಾದ್ ನಿಜಾಮರ ಕಾಲದಲ್ಲಿ ಈ ಭಾಷೆಯು ರಾಜ್ಯಾಡಳಿತ ಭಾಷೆಯಾಗಿ, ಶಿಕ್ಷಣದ ಭಾಷೆಯಾಗಿ ಘನತೆಯನ್ನು ಪಡೆಯಿತು. ಕನ್ನಡ ಭಾಷೆಯಲ್ಲಿ ಲಿಖಿತ ರೂಪದಲ್ಲಿ ಹೆಚ್ಚಿನ ಸಾಹಿತ್ಯ ಚಟುವಟಿಕೆಗಳು ಆಗ ನಡೆದಂತೆ ಕಾಣುವುದಿಲ್ಲ. ಆದರೆ ಜನಪದದಲ್ಲಿ ಕನ್ನಡ ಸಾಹಿತ್ಯ ರಚನೆ ಅವ್ಯಾಹತವಾಗಿತ್ತು. ಕನ್ನಡ ಭಾಷೆ ಬಳಕೆಯು ಮೋಡಿಲಿಪಿಯಲ್ಲಿ ಇತ್ತು. ಶಾಹಿರಾಜ್ಯಗಳು ಮರಾಠಿ, ದಖನಿ-ಉರ್ದು ಭಾಷೆಗಳನ್ನು ಸ್ವೀಕರಿಸಿದಂತೆ ಮೋಡಿಲಿಪಿಯಲ್ಲಿರುವ ಕನ್ನಡಕ್ಕೂ ಸ್ಥಾನವನ್ನು ಕೊಟ್ಟವು. ಜನ ಸಾಮಾನ್ಯರು ನಿತ್ಯ ವ್ಯವಹಾರಗಳಿಗೆ ಮರಾಠಿ, ದಖನಿ, ಕನ್ನಡ ತೆಲಗು ಭಾಷೆಗಳನ್ನು ಬಳಸಿದರೂ ಈ ಭಾಷೆಗಳನ್ನು ಮೋಡಿ ಲಿಪಿಯಲ್ಲಿ ಅಡಗಿಸಿದರು. ಇದರಿಂದ ಕನ್ನಡ ಲಿಖಿತ

ಭಾಷೆಯಾಗಿ ಅಭಿವೃದ್ಧಿ ಹೊಂದದೇ ಕೇವಲ ಮೌಖಿಕವಾಗಿ ಚಾಲ್ತಿಯಲ್ಲಿ ಉಳಿಯಿತು. ಲಿಂಗಾಯತ ಮಠಮಾನ್ಯಗಳ ಪರಿಸರದಲ್ಲಿ ಕನ್ನಡ ಭಾಷೆ ಲಿಖಿತವಾಗಿ ಚಾಲ್ತಿಯಲ್ಲಿತ್ತು. ಅಕ್ಷರ ಕಲಿಕೆ ಮಠಗಳಲ್ಲಿ ನಡೆಯುತ್ತಿತ್ತು. ಜನಪದರಲ್ಲಿ ಈ ಭಾಷಿಕ ಸಂಘರ್ಷಗಳು ನಡೆಯಲಿಲ್ಲ. ಇದನ್ನು ಇಲ್ಲಿನ ಜನಪದ ಸಾಹಿತ್ಯದಲ್ಲಿ ಕಾಣಬಹುದು. ಅದರಲ್ಲೂ ಉರ್ದು ಕನ್ನಡ ಮರಾಠಿ, ತೆಲುಗು ಭಾಷೆಗಳನ್ನು ಏಕಕಾಲಕ್ಕೆ ಮಿಶ್ರಣಮಾಡುವ ಮೊಹರಂ ಪದಗಳಲ್ಲಿ ಇದರ ಈ ಬಹುಭಾಷಿಕ ಸನ್ನಿವೇಶದ ಸಹಬಾಳುವೆಯನ್ನು ಕಾಣಬಹುದು.

ಯಾದಗಿರಿ ಪರಿಸರದ ಆರ್ಥಿಕ ಹಿನ್ನೆಲೆ

ಬಹುಶಃ ಬಹಳ ಹಿಂದಿನಿಂದಲೂ ಈ ಭಾಗದಲ್ಲಿ ಭಾರಿಭೂಮಾಲಿಕ ಪದ್ಧತಿಯಿದೆ. ಬಹಮನಿ ಆದಿಲಶಾಹಿ ಹಾಗೂ ನಿಜಾಮರ ಆಳ್ವಿಕೆಯಲ್ಲಿ ಈ ಪದ್ಧತಿಯು ಹೆಚ್ಚು ಬದಲಾಗಲಿಲ್ಲ. ಭೂಮಿಯ ಮೇಲೆ ಹಿಡಿತವಿದ್ದ ದೇಸಾಯಿ ಇನಾಂದಾರ ಗೌಡ ಇವರು ಅರೆಸರ್ಕಾರಿ ನೌಕರರೂ ಆಗಿದ್ದು, ರಾಜ್ಯಾಡಳಿತದಲ್ಲಿ ತೆರಿಗೆ ಸಂಗ್ರಹ, ಸ್ಥಳೀಯ ಅಪರಾಧಗಳ ವರದಿಮಾಡುವಿಕೆ ಇತ್ಯಾದಿ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ಎಲ್ಲ ಧರ್ಮದ ಬಹುಸಂಖ್ಯಾತರ ಜನರು ಕೃಷಿಕಾರ್ಮಿಕರಾಗಿ ಕುಶಲವೃತ್ತಿಗಳಲ್ಲಿ ಕೆಲಸ ಮಾಡುತ್ತಿದ್ದರು. ನಿಜಾಮರು ಆಳ್ವಿಕೆ ಇದ್ದರೂ ಆಂಧ್ರದ ತೆಲಂಗಾಣದಲ್ಲಿ ಜಹಗೀರದಾರ, ದೇಶ್‌ಮುಖ, ಸರ್‌ದೇಸಾಯಿ, ದೇಸಾಯಿಗಳು ಎಂಬ ಹೆಸರಿನ ಭೂಮಾಲೀಕರು ತಮ್ಮ ತಮ್ಮ ಸರಹದ್ದಿನಲ್ಲಿ ಸ್ಥಳೀಯ ಸರ್ವಾಧಿಕಾರಿಗಳಾಗಿ ಆಳ್ವಿಕೆ ನಡೆಸುತ್ತಿದ್ದರು. ಹತ್ತು ಸಾವಿರ ಎಕರೆ ಭೂಮಿಯಿಂದ ಹಿಡಿದು ಒಂದೂವರೆ ಲಕ್ಷ ಎಕರೆ ಭೂಮಿಯನ್ನು ಉಳ್ಳವರಾಗಿದ್ದ ಇವರು ಕಂದಾಯ ವಸೂಲಿಗೆ ಅಧಿಕಾರಿಗಳನ್ನು ತಾವೇ ನೇಮಿಸಿಕೊಳ್ಳುತ್ತಿದ್ದರು. ೧೦ ಹಳ್ಳಿಗಳಿಂದ ಹಿಡಿದು ೪೦ ಹಳ್ಳಿಗಳ ಸರಹದ್ದಿನಲ್ಲಿ ಪಾಳೇಗಾರಿಕೆಯ ಅಧಿಕಾರ ಚಲಾಯಿಸುತ್ತಿದ್ದರು. ಬಡ ರೈತರನ್ನು ಕಸುಬುದಾರರನ್ನು ಕೂಲಿಕಾರರನ್ನು ಕರೆಸಿಕೊಂಡು 'ಬಿಟ್ಟಿಚಾಕರಿ' ಮಾಡಿಸಿಕೊಳ್ಳುತ್ತಿದ್ದರು. ಭೂಮಾಲೀಕತ್ವವನ್ನು ಬಿಟ್ಟಿಚಾಕರಿ ವಿರೋಧಿಸುವ ಬಣ ಆಂಧ್ರ ಮಹಾಸಭೆ ಎಂಬ ಹೆಸರಿನಲ್ಲಿ ೧೯೨೮ರ ಹೊತ್ತಿಗೆ ರೂಪುಗೊಂಡು ಬೆಳೆಯಿತು. ಈ ಬಣದ ಯುವಕರು ಕಮ್ಯುನಿಸ್ಟ್ ತತ್ವಗಳಿಗೆ ಮಾರುಹೋಗಿದ್ದರು. ಬಡರೈತರು ಕಸುಬುದಾರರು, ಕೂಲಿಕಾರರು ಈ ಬಣವನ್ನು ಬೆಂಬಲಿಸುತ್ತ ಸೇರಿಕೊಂಡರು. ಭೂಮಾಲೀಕರು ಬಾಡಿಗೆದಾರರಿಂದ ಈ ಬಣವನ್ನು ಬಗ್ಗು ಬಡಿಯಲು ಪ್ರಯತ್ನಿಸಿತು. ಈ ಬಣವೂ ಸಶಸ್ತ್ರ ಹೋರಾಟಕ್ಕೆ ಹಿಂಜರಿಯಲಿಲ್ಲ. ಭೂಹೀನನರಿಗೆ ಭೂಮಾಲೀಕರಿಂದ ಭೂಮಿಯನ್ನು ಪಡೆದು ವಿತರಿಸಿತು. ಸಾವಿರಾರು ಗ್ರಾಮಗಳಲ್ಲಿ ಸ್ವರಾಜ್ಯವನ್ನು ಸ್ಥಾಪಿಸಿತು.

ಇದು ಭೂಮಾಲೀಕರಿಗೂ ನಿಜಾಮರಿಗೂ ಭೀತಿಯನ್ನುಂಟು ಮಾಡಿತು. ಸ್ವಾತಂತ್ರ್ಯ ನಂತರದ ವರ್ಷವೇ ನಿಜಾಮ ಸಂಸ್ಥಾನವನ್ನು ವಶಪಡಿಸಿಕೊಳ್ಳಲು ಭಾರತೀಯ ಸೇನೆ ಬಂದು ಅದು ರಜಾಕಾರನ್ನು ನಿಜಾಮರನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ಅದು ಇನ್ನಷ್ಟು ಕಾಲ ಅಲ್ಲೇ ಉಳಿದು ಭೂಮಾಲೀಕರ ವಿರುದ್ಧ ಹೋರಾಡಿದ ಬಡ ರೈತರು, ಕಸಬುಕಾರರು, ಕೂಲಿಕಾರರರನ್ನು ದಮನಕ್ಕೆ ಒಳಪಡಿಸಿತು. ಈ ವಿಷಯವು ತೆಲಂಗಾಣ ಹೋರಾಟದ ಕೃತಿಗಳಿಂದ ತಿಳಿದು ಬರುತ್ತದೆ. ತೆಲಂಗಾಣ ರೈತ ಹೋರಾಟವು ಯಾವುದೇ ಮತೀಯ ಇಲ್ಲದೇ ಜಾತಿಯ ಧ್ವನಿಯಿಲ್ಲದೆ ಬಡರೈತರ ಆರ್ಥಿಕ ಸಾಮಾಜಿಕ ಸಮಸ್ಯೆಗಳನ್ನು ರಾಜಕೀಯ ಸನ್ನಿವೇಶಗಳಿಗೆ ಕೂಡಿಸಿ, ನಡೆಸಿದ ಹೋರಾಟವಾಗಿತ್ತು. ಇಂತಹ ಹೋರಾಟಗಳು ಕೆಳವರ್ಗದ ಮತ್ತು ಕೆಳಜಾತಿಯ ಜನರನ್ನು ಒಟ್ಟಿಗೆ ತರುತ್ತಿದ್ದವು. ಈ ಒಗ್ಗಟ್ಟು ಮೊಹರಂ ಉರುಸು ಜಾತ್ರೆ ಮುಂತಾದ ಜಾತ್ಯತೀತ ಆಚರಣೆಗಳಲ್ಲಿ ಸಾಂಸ್ಕೃತಿಕ ಏಕೀಕರಣವಾಗಿ ಮುಂದುವರೆಯಿತು.

ಯಾದಗಿರಿ ಪರಿಸರದ ಸಾಮಾಜಿಕ ಹಿನ್ನೆಲೆ

ಗುಲಬರ್ಗ ಜಿಲ್ಲೆಯ ಇತರ ಭಾಗಗಳಲ್ಲಿ ಕಂಡುಬರುವಂತೆ ಇಲ್ಲಿ ಸಹ ಹಿಂದು ಇಸ್ಲಾಂ, ಜೈನ, ಕ್ರೈಸ್ತ, ವೀರಶೈವ ಧರ್ಮಗಳು ಕಂಡುಬರುತ್ತವೆ. ಬ್ರಾಹ್ಮಣರಲ್ಲಿ ಮಾಧ್ವರು ಇಲ್ಲಿ ವಿಶೇಷವಾಗಿದ್ದಾರೆ. ಯರಗೋಳದ ಉತ್ತರಾಧಿಮಠ ಹಾಗೂ ಯಾದಗಿರಿಯ ರಾಯರಗುಡಿ ಪ್ರಸಿದ್ಧವಾಗಿವೆ. ಇಲ್ಲಿಗೆ ಸಮೀಪದ ಮಳಖೇಡವು ಮಾಧ್ವಯತಿಯ ಸಮಾಧಿಯಿರುವ ಜಾಗವಾಗಿದೆ. ಇಲ್ಲಿನ ಮುಖ್ಯ ಜಮೀನುದಾರ ವರ್ಗವು ಲಿಂಗಾಯತರಾಗಿದ್ದು, ಶರಣಧರ್ಮವು ಸಾಕಷ್ಟು ಪ್ರಬಲವಾಗಿದೆ. ಲಿಂಗಾಯತ ಧರ್ಮವು ಕೂಡ ಬಸವಣ್ಣನಂತಹ ಪ್ರಗತಿಪರ ಧಾರ್ಮಿಕ ನಾಯಕನ ಕಾರಣದಿಂದ ದಲಿತ ಕೆಳವರ್ಗದ ಸಮುದಾಯಗಳ ಬಗ್ಗೆ ವೈದಿಕಮತಗಳಲ್ಲಿ ಇರುವಂತಹ ಭೇದವನ್ನು ಇಟ್ಟುಕೊಂಡಿರಲಿಲ್ಲ. ಆದರೆ ಜಮೀನುದಾರಿ ಪದ್ಧತಿಯ ಕಾರಣದಿಂದ ಅದು ವರ್ಗಭೇದವನ್ನು ಉಂಟುಮಾಡಿತ್ತು. ಅದು ಸಹ ಮತಾಂತರವನ್ನು ನಂಬಿದ ಧರ್ಮವಾದ ಕಾರಣ, ಇಸ್ಲಾಮಿನ ಜತೆ ಅದಕ್ಕೆ ಬಹಳ ದೊಡ್ಡ ವೈರುಧ್ಯಗಳಿರಲಿಲ್ಲ. ಹೆಚ್ಚಿನ ಲಿಂಗಾಯತ ಬ್ರಾಹ್ಮಣ ವಿದ್ಯಾವಂತರು ನಿಜಾಮರ ಆಡಳಿತದ ಭಾಗವಾಗಿದ್ದರಿಂದ, ನಿಜಾಮರಿಗೆ ಪ್ರಿಯವಾಗಿದ್ದ ಮೊಹರಂ ಆಚರಣೆಗಳಿಗೆ ಸಹಕಾರವನ್ನು ಕೊಟ್ಟಿರುವ ಸಾಧ್ಯತೆಯಿದೆ. ವೀರಶೈವದವರು ಮೊಹರಂ ಹಬ್ಬವನ್ನು ಸಹ ಉತ್ಸಾಹವಾಗಿ ಆಚರಣೆ ಮಾಡುವರು. ಕ್ರೈಸ್ತಧರ್ಮವು ಕೆಲವು ಕಡೆ ಕಂಡು ಬರುತ್ತದೆ. ಕ್ರಿ.ಶ. ೧೫೨೩ರಲ್ಲಿ ವಿಜಯನಗರ ಪ್ರಸಿದ್ಧ ದೊರೆ ಶ್ರೀ ಕೃಷ್ಣದೇವರಾಯನು ಕ್ರೈಸ್ತ ಧರ್ಮಕ್ಕೆ ಪ್ರೋತ್ಸಾಹ ನೀಡಿದನೆಂದು ತಿಳಿದು ಬರುತ್ತದೆ. ಈ

ಭಾಗವು ನೇರ ಬ್ರಿಟಿಶರ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿರದೆ ಇದ್ದುದರಿಂದ ಇಲ್ಲಿ ದೊಡ್ಡಪ್ರಮಾಣದಲ್ಲಿ ಕ್ರೈಸ್ತಧರ್ಮದ ಪ್ರವೇಶವು ಆಗಲಿಲ್ಲ. ಈ ಭಾಗದಲ್ಲಿ ವೀರಶೈವವನ್ನು ಬಿಟ್ಟರೆ ಪ್ರಬಲವಾಗಿ ಎದ್ದುಕಾಣುವ ಧರ್ಮವೆಂದರೆ ಇಸ್ಲಾಂ. ಬಹಮನಿ, ಆದಿಲಶಾಹಿ ಹಾಗೂ ಹೈದರಾಬಾದ್ ನಿಜಾಮರ ಕಾಲದಲ್ಲಿ ಇಲ್ಲಿ ಇಸ್ಲಾಂ ಹರಡಿತು. ಸ್ಥಳೀಯ ಜನರು ಇಸ್ಲಾಮನ್ನು ಸ್ವೀಕರಿಸಿದರು. ಸ್ಥಳೀಯ ಮತ್ತು ಹೊರಗಿನಿಂದ ಬಂದ ಇಸ್ಲಾಮಿಕ್ ಇಲ್ಲಿನ ಸಾಮಾಜಿಕ ಬದುಕಿನಲ್ಲಿ ಸೇರಿ ಒಂದು ಸಂಕರವಾದ ಭಾಷೆ ಧರ್ಮ ಮತ್ತು ಸಂಸ್ಕೃತಿಗಳನ್ನು ಹುಟ್ಟುಹಾಕಿತು. ಇದುವೇ ಮೊಹರಂ ಪರಂಪರೆಯನ್ನು ಹುಟ್ಟಿಬೆಳೆಸಿದ ಬುನಾದಿಯೂ ಆಗಿದೆ. ಇಲ್ಲಿನ ದೊರೆಗಳ ಹಾಗೆ ಇಲ್ಲಿನ ಸೂಫಿಗಳು ಕೂಡ ಮೊಹರಂ ಪರಂಪರೆಯವರು. ಈ ಭಾಗದಲ್ಲಿ ದೊಡ್ಡ ಪ್ರಭಾವ ಪಡೆದಿರುವ ಗುಲಬರ್ಗೆಯ ಖಾಜಾ ಬಂದೇನವಾಜರು ಸ್ವತಃ ಹಸನಹುಸೇನರ ವಂಶದ ಜತೆಗೆ ಸಂಬಂಧವುಳ್ಳವರು. ಬಂದೇನವಾಜ್ ಪರಂಪರೆಯ ಎಲ್ಲ ಸಂತರಲ್ಲಿ ಹಸನ ಹುಸೇನರ ಹೆಸರು ಇರುವುದು ಕಡ್ಡಾಯವಾಗಿದೆ. ಇಲ್ಲಿನ ಸೂಫಿಸಂತರು ಕೂಡ ಪರೋಕ್ಷವಾಗಿ ಮೊಹರಂಪರಂಪರೆಗೆ ಕಾರಣರಾದರು.ಇಂತಹವರ ಪ್ರಭಾವದಿಂದ ಮೊಹರಂ ಹಬ್ಬವನ್ನು ಆಚರಿಸುವ ಹಿಂದೂ ಮತ್ತು ಮುಸ್ಲಿಮರು ಭಾವ್ಯಕ್ಯತೆಯಿಂದ ಕೂಡಿಕೊಂಡಿದ್ದಾರೆ. ಮೇಲಿನ ಧರ್ಮಗಳಲ್ಲದೆ ಬೇರೆಬೇರೆ ಕೆಳಜಾತಿಗಳು ತಮ್ಮದೇ ಆದ ಜನಪದ ಧರ್ಮಗಳನ್ನು ಹೊಂದಿವೆ. ಈ ಕೆಳಜಾತಿ ವರ್ಗದ ಜನರೇ ಮೊಹರಂ ಹಬ್ಬವನ್ನು ವಿಶೇಷವಾಗಿ ಆಚರಿಸುವುದು. ಈಭಾಗಕ್ಕೆ ಉತ್ತರ ಭಾರತದಿಂದ ಬಹಳ ಹಿಂದೆ ಲಂಬಾಣಿ ಸಮುದಾಯದವರು ವಲಸೆ ಬಂದಿದ್ದಾರೆ. ಅವರು ತಮ್ಮ ಸೇವಾಲಾಲ್ ಮತ್ತು ಮರಿಯಮ್ಮನ ಜತೆಗೆ ಮೊಹರಂ ಹಬ್ಬವನ್ನು ಕೂಡ ವಿಶೇಷವಾಗಿ ಆಚರಿಸುತ್ತಾರೆ. ಕೆಳಜಾತಿ ವರ್ಗದ ಜನರು ಧರ್ಮದ ವಿಷಯದಲ್ಲಿ ಉದಾರವಾದಿಗಳು. ಅವರು ತಮ್ಮದು ಪರರದು ಎಂಬ ಭೇದವಿಲ್ಲದೆ ತಮಗೆ ಆಸರೆಕೊಡುವ ಎಲ್ಲ ಧರ್ಮಗಳನ್ನು ಎಲ್ಲ ಬಗೆಯ ನಂಬಿಕೆಗಳನ್ನು ಇಟ್ಟುಕೊಳ್ಳುವರು.ಇಂತಹ ಸಾಮಾಜಿಕ ಸನ್ನಿವೇಶವು ಮೊಹರಂ ನೆಲೆಸಲು ಪೂರಕವಾಗಿ ಕೆಲಸ ಮಾಡಿದೆ.

ಇಷ್ಟು ರಾಜಕೀಯ ಚಾರಿತ್ರಿಕ ಧಾರ್ಮಿಕ ಸಾಮಾಜಿಕ ಮತ್ತು ಭಾಷಿಕ ಹಿನ್ನೆಲೆಗಳ ಜತೆಗೆ ಯಾದಗಿರಿ ಭಾಗದ ಮೊಹರಂ ಹಾಡುಗಳನ್ನು ಇಟ್ಟು ವಿಶ್ಲೇಷಣೆ ಮಾಡಬಹುದು.

ಅಧ್ಯಾಯ : ಮೂರು

ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ : ಮೂರು
ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಅಧ್ಯಯನಕ್ಕೆ ತೊಡಗುವ ಮೊದಲು ಈ ಕ್ಷೇತ್ರದಲ್ಲಿ ಬಂದಿರುವ ಅಧ್ಯಯನಗಳನ್ನು ನೋಡುವುದು ಅಗತ್ಯವಿದೆ. ಇದರಿಂದ ಪ್ರಸ್ತುತ ಅಧ್ಯಯನಕ್ಕೆ ಬೇಕಾದ ಹೊಸ ನೋಟಗಳು ಸಿಗಬಹುದು. ಹೊಸ ಪಾಠಗಳು ಕೂಡ ಸಿಗಬಹುದು. ಈ ಹಿನ್ನೆಲೆಯಲ್ಲಿ ಹೈದರಾಬಾದ್ ಕರ್ನಾಟಕದ ಮೊಹರಂ ಅಧ್ಯಯನಗಳಿಗೆ ಸಂಬಂಧಪಟ್ಟಂತಹ ಕೃತಿಗಳನ್ನು ಇಲ್ಲಿ ಸಮೀಕ್ಷೆ ಮಾಡಲಾಗಿದೆ. ವಿಶೇಷವೆಂದರೆ ಗುಲಬರ್ಗಾ ಭಾಗದ ಮೊಹರಂಹಾಡುಗಳನ್ನು ಅನೇಕರು ಸಂಗ್ರಹ ಮಾಡಿ ಪ್ರಕಟಿಸಿದ್ದಾರೆ. ಆದರೆ ಅವುಗಳನ್ನು ಕುರಿತು ವಿಶ್ಲೇಷಣೆ ಮಾಡುವ ಅಧ್ಯಯನಗಳು ತುಂಬಕಡಿಮೆ. ಈಗ ಪ್ರಕಟವಾಗಿರುವ ಸಂಗ್ರಹಗಳಲ್ಲಿಯೇ ಇರುವ ವಿಸ್ತಾರವಾದ ಪ್ರಸ್ತಾವನೆಗಳನ್ನೇ ಇಲ್ಲಿ ಅಧ್ಯಯನವೆಂದು ಭಾವಿಸಿ ಅವನ್ನು ಪರಿಶೀಲಿಸಲು ಯತ್ನಿಸಲಾಗಿದೆ.

ಇಲ್ಲಿ ಡಾ. ಚೆನ್ನಣ್ಣ ವಾಲೀಕಾರ ಅವರು ಸಂಪಾದಿಸಿರುವ ಗುಲ್ಬರ್ಗಾ ಜಿಲ್ಲೆಯ ಮೊಹರಂ ಪದಗಳು' ಎಂಬ ಕೃತಿಯನ್ನು ಚರ್ಚೆಗೆ ಎತ್ತಿಕೊಳ್ಳಬಹುದು. ಚೆನ್ನಣ್ಣ ವಾಲೀಕಾರರು ಈಗಾಗಲೇ ಶಿಷ್ಟ ಮತ್ತು ಜಾನಪದ ಕ್ಷೇತ್ರಗಳಲ್ಲಿ ವಿವಿಧ ಪ್ರಕಾರಗಳಿಗೆ ಸಂಬಂಧಿಸಿದಂತೆ ಬರೆಹ ಮಾಡಿ ಹೆಸರಾಗಿರುವರು. ಚೆನ್ನಣ್ಣ ಅವರನ್ನು ಒಬ್ಬ ಜಾನಪದ ವಿದ್ವಾಂಸರೆಂದು ಗುರುತಿಸುವುದಕ್ಕಿಂತ ಹೆಚ್ಚಾಗಿ ಒಬ್ಬ ಸೃಜನಶೀಲ ಬರಹಗಾರರೆಂದು ಹೆಚ್ಚಾಗಿ ಗುರುತಿಸಲಾಗಿದೆ. ಅವರು ಆಧುನಿಕ ಶಿಷ್ಟ ಸಾಹಿತ್ಯ ಬರೆಯುತ್ತಿದ್ದರೂ ಅದರಲ್ಲಿ ಜಾನಪದದ ಸತ್ವವಿದೆ. ಅವರ ಜಾನಪದ ಚಿಂತನೆಯಲ್ಲಿ ಯಾವುದೇ ವಿದೇಶೀ ತತ್ವ ಅಥವಾ ಸಿದ್ಧಾಂತಗಳ ಪ್ರಭಾವಗಳಿಲ್ಲ. ಬರವಣಿಗೆಯಲ್ಲಿ ಅವರದೇ ಆದ ವಿಶಿಷ್ಟತೆಗಳು ಎದ್ದು ಕಾಣಿಸುತ್ತದೆ. ಜಾನಪದ ಕ್ಷೇತ್ರದಲ್ಲಿ ಅವರು ಸ್ವತಃ ಕ್ಷೇತ್ರಕಾರ್ಯ ಮಾಡುತ್ತಾರೆ. ಜನಪದ ಸಮುದಾಯದ ಬಗ್ಗೆ ಅವರಿಗೆ ಅಪಾರವಾದ ಕಾಳಜಿಯಿದೆ. ಅವರ ಬದುಕು ಹಸನಾಗಬೇಕು ಎಂಬ ಆಶಯವಿದೆ. ಈ ಹಿನ್ನೆಲೆಯಲ್ಲಿ ಅವರ ಜಾನಪದ ಕಾರ್ಯ ಮತ್ತು ಬರವಣಿಗೆ ಇವೆ. ಇದು ಅವರನ್ನು ಉಳಿದವರಿಗಿಂತ ಭಿನ್ನವಾಗಿಸಿದೆ.

ಅವರ ಕೃತಿ 'ಗುಲ್ಬರ್ಗಾ ಜಿಲ್ಲೆಯ ಮೊಹರಂ ಪದಗಳು' ಕೃತಿಯನ್ನು ಮೈಸೂರು ವಿವಿಯ ಕನ್ನಡ ಅಧ್ಯಯನ ಸಂಸ್ಥೆಯು ಪ್ರಕಟಿಸಿದೆ. ಮೈಸೂರು ವಿಶ್ವವಿದ್ಯಾಲಯವು ಕರ್ನಾಟಕದಲ್ಲಿ

ವಿಶ್ವವಿದ್ಯಾಲಯದ ಮಟ್ಟದಲ್ಲಿ ಜಾನಪದ ಅಧ್ಯಯನವನ್ನು ಮೊದಲ ಬಾರಿಗೆ ಕೈಗೊಂಡ ವಿಶ್ವವಿದ್ಯಾಲಯ. ಇದಕ್ಕಾಗಿ ವಿಶ್ವವಿದ್ಯಾಲಯವು ತನ್ನ ಕ್ಷೇತ್ರಕಾರ್ಯಕರ್ತರನ್ನು ಕರ್ನಾಟಕದ ಬೇರೆಬೇರೆ ಭಾಗಗಳಿಗೆ ಕಳಿಸಿ, ಅಲ್ಲಿನ ಜನಪದ ಸಾಹಿತ್ಯವನ್ನು ಸಂಗ್ರಹ ಮಾಡಿಸಿ ಪ್ರಕಟಿಸಿತು. ಕೆಲವೊಮ್ಮೆ ಅಲ್ಲಿನ ವಿದ್ವಾಂಸರ ಮೂಲಕವೇ ಸಂಗ್ರಹ ಮಾಡಿಸಿ ಪ್ರಕಟಿಸಿತು. ಹಾಗೆ ಸಂಗ್ರಹ ಮಾಡಿಸಿ ಪ್ರಕಟಿಸಿದ ಕೃತಿಗಳಲ್ಲಿ ಚೆನ್ನಣ್ಣವಾಲೀಕಾರರ 'ಗುಲ್ಬರ್ಗಾ ಜಿಲ್ಲೆಯ ಮೊಹರಂ ಹಾಡುಗಳು' ಒಂದಾಗಿದೆ. ಇದು ಕಾಲುಶತಮಾನ ಕಳೆದರೂ ಕನ್ನಡದ ಅತ್ಯುತ್ತಮ ಮೊಹರಂ ಹಾಡುಗಳ ಸಂಗ್ರಹಗಳಲ್ಲಿ ಒಂದಾಗಿದೆ. ಹೈದರಾಬಾದ್ ಕರ್ನಾಟಕದ ಭಾಗದ ಜನಪದ ಸಾಹಿತ್ಯವನ್ನು ಕರ್ನಾಟಕದ ಎಲ್ಲ ಕಡೆ ಪಸರಿಸಲು ಈ ಕೃತಿಯು ದೊಡ್ಡ ಸಹಾಯಮಾಡಿತು. ಈ ಕೃತಿಯಲ್ಲಿ ಗುಲಬರ್ಗಾ ಜಿಲ್ಲೆಯ ಬೇರೆಬೇರೆ ಗಾಯಕರು ಹಾಡುವ ಮೊಹರಂ ಹಾಡುಗಳ ಸಂಗ್ರಹವಿದೆ. ಚೆನ್ನಣ್ಣನವರು ತಮ್ಮ ಪ್ರಸ್ತಾವನೆಯಲ್ಲಿ ಮೊಹರಂ ಹೇಗೆ ಹಿಂದುಮುಸ್ಲಿಂ ಸಾಮರಸ್ಯದ ಹಬ್ಬವೆಂಬುದನ್ನು ವಿವರಿಸುತ್ತಾರೆ. ಮೊಹರಂ ಹಬ್ಬದ ಆಚರಣೆಗಿರುವ ಐತಿಹ್ಯವನ್ನು ವಿವರಿಸುತ್ತಾರೆ. ಈ ಹಬ್ಬದ ವಿಶಿಷ್ಟ ಕುಣಿತಗಳನ್ನು ಹಾಗೂ ಮೊಹರಂ ಪದಗಳ ಸಂದೇಶದ ಮಹತ್ವವನ್ನು ಚಿತ್ರಿಸುತ್ತಾರೆ. ತಮ್ಮ ಕೃತಿಯಲ್ಲಿ ಚೆನ್ನಣ್ಣನವರು ವಿಸ್ತಾರವಾಗಿ ಮೊಹರಂ ಹಬ್ಬಕ್ಕೂ ಹಾಡುಗಳಿಗೆ ಕಾರಣವಾಗಿರುವ ಕರ್ಬಲಾ ಪಸಂಗವನ್ನು ಕುರಿತು ವಿವರಿಸುತ್ತಾರೆ. ಚಿತಾಪೂರ ತಾಲ್ಲೂಕಿನ ಪ್ರಮುಖ ಗ್ರಾಮಗಳ ವೈಶಿಷ್ಟವನ್ನು ಚಿತ್ರಿಸಿ ಅಲ್ಲಿ ಹೇಗೆ ಮೊಹರಂ ಪದಗಳು ಹುಟ್ಟುತ್ತವೆ ಎಂಬುದನ್ನು ವಿವರಿಸುತ್ತಾರೆ. ಸಾಮಾಜಿಕ ಆಚರಣೆಗಳಿಗೆ ಸಂಬಂದಿಸಿದಂತೆ ಹೈದರಾಬಾದ್ ಕರ್ನಾಟಕದ ಇಸ್ಲಾಂ ಧರ್ಮದ ಪಕ್ಷಿನೋಟವನ್ನು ಕೂಡ ಇಲ್ಲಿ ಕಾಣಬಹುದು.

"ಸಾಮಾನ್ಯ ಮನುಷ್ಯನ ಆತ್ಮವನ್ನು ಸೆರೆಹಿಡಿಯಬಲ್ಲ, ಅಳಿಸಬಲ್ಲ, ಮಾನವೀಯ ಮೌಲ್ಯಗಳಿಂದ ಕೂಡಿದ ಈ ಹಾಡುಗಳು ಇಸ್ಲಾಂ ಜನಾಂಗಕ್ಕಷ್ಟೇ ಅಲ್ಲ. ವಿಶ್ವಜನಾಂಗಕ್ಕೆ ಸಂಜೀವಿನಿ" ಎಂದು ವಾಲೀಕಾರರು ಮೊಹರಂ ಹಾಡುಗಳ ಬಗ್ಗೆ ಭಾವುಕವಾದ ಹೇಳಿಕೆಯನ್ನು ಮಾಡುತ್ತಾರೆ.

ಈ ನೆಲೆಯಲ್ಲಿಯೇ ಅವರು ಜನಪದರಲ್ಲಿರುವ ಆಚರಣೆಗಳಾದ ಬಲಿ ಪದ್ಧತಿ, ಉಟ್ಟುಗುಡುವುದು ಬೆತ್ತಲೆಸೇವೆ ಮಾಡುವುದು ಕೃತಿಯಿಂದ ಅವರು ಮೂರ್ತಿಯಾಗಿ ದೇಶಿಯ ಮಾದರಿಯ ಪ್ರತಿಬಿಂಬನೆ ದೇಶೀ ಸಂಸ್ಕೃತಿಯಿಂದ ಹೊಸ ಬದುಕಿಗೆ ಬುನಾದಿ ಎಂಬುವುದು ಅವರ ಪ್ರತಿಕ್ರಿಯೆಯಾಗಿದೆ, ಅವರು ತಮ್ಮ ಪರಿಸರದ ಸಂಸ್ಕೃತಿಯಲ್ಲಿನ ಉದಾತ್ತ ಅಂಶಗಳನ್ನು ಗ್ರಹಿಸುತ್ತಾ ಹೋಗುತ್ತಾರೆ. ಮತ್ತು ಅದರ ಬಳಕೆಗೆ ಕರೆ ನೀಡುತ್ತಾರೆ.

ವಾಲೀಕಾರರು ಈ ಕೃತಿಯಲ್ಲಿ ಮೊಹರಂ ಪದಗಳು ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಮಾತ್ರ ಕಂಡು ಬರುತ್ತದೆ ಎಂದು ಹೇಳಿರುವುದು ನಿಜವಾಗಿದೆ. ಆದರೆ ಯಾಕೆ ಉತ್ತರ ಕರ್ನಾಟಕದಲ್ಲಿಯೇ ಇವು ಸಿಗುತ್ತವೆ ಎಂಬುದಕ್ಕೆ ಅವರು ಕಾರಣವನ್ನು ಕೊಡುವುದಿಲ್ಲ.

ಈ ಕೃತಿಯಲ್ಲಿರುವ ಮೊಹರಂ ಗೀತೆಗಳಲ್ಲಿ ಮುಸ್ಲಿಮರ ಪುರಾಣ ಧರ್ಮಗಳಿಗೆ ಸಂಬಂಧಪಟ್ಟ ಹಾಡುಗಳಿವೆ. ಇವುಗಳ ಜತೆಗೆ ಹಿಂದೂ ಮೂಲಕ್ಕೆ ಸಂಬಂಧಪಟ್ಟ ಹಾಡುಗಳೂ ಇವೆ. ಉತ್ತರ ಕರ್ನಾಟಕದ ಲಾವಣಿ ಸಂಪ್ರದಾಯದ ಅನೇಕ ಹಾಡುಗಳು ಮೊಹರಂ ಪದಗಳಲ್ಲಿ ಬೆರೆತಿರುವುದನ್ನು ಈ ಸಂಕಲನದಲ್ಲಿ ನೋಡಬಹುದು. ತಂದೆಯ ಮಾತನ್ನು ಉಳಿಸಿಕೊಡುವುದಕ್ಕಾಗಿ ಹದಿನಾಲ್ಕು ವರುಷ ವನವಾಸ ಮಾಡಿ, ಕಣ್ಣೀರಿನ ಕೂಳುತಿಂದ ಶ್ರೀರಾಮನಂತೆ ಇಮಾಮ ಹುಸೇನರು ಜನತೆಯ ಮಾತನ್ನು ಪರಿಪಾಲಿಸುವ ಸಲುವಾಗಿ ಕಷ್ಟಪಟ್ಟ ಪ್ರಸಂಗವಿದೆ. ಸತ್ಯಕ್ಕಾಗಿ ಹೋರಾಡುತ್ತ ಕೌರವರ ಕೈಯಲ್ಲಿ ಸಿಲುಕಿ ಗೋಳಾಡಿದ ಪಾಂಡವರಂತೆ ಇಸ್ಲಾಂ ಧರ್ಮ ರಕ್ಷಣೆಗಾಗಿ ಹಸನ ಹುಸೇನ ಸೋದರರು ತಮ್ಮ ಆತ್ಮಾಹುತಿ ಮಾಡಿಕೊಂಡು ಹುತಾತ್ಮರಾದ ಪ್ರಸಂಗವಿದೆ. ಮಹಾಭಾರತದ ಯುದ್ಧದಲ್ಲಿ ಚಕ್ರವ್ಯೂಹವನ್ನು ಭೇದಿಸಲು ಹೋಗಿ ಸಿಕ್ಕು ಸಾಯುವ ಅಭಿಮನ್ಯುವಿನಂತೆ, ಮನೆತನದ ಮರ್ಯಾದೆಗಾಗಿ ಬಲಿಯಾದ ಬಾಲಕ ಕಾಸೀಮನ ಅಮರ ಜೀವನವಿದೆ. ಹೀಗೆ ಎರಡು ಧರ್ಮಗಳ ನಡುವೆ ಸಮಾನ ಪ್ರಸಂಗಗಳು ಮೊಹರಂ ಗಾಯಕರಿಗೆ ಪ್ರೇರಣೆ ಕೊಟ್ಟಿರುವುದನ್ನು ವಾಲೀಕಾರರು ಸರಿಯಾಗಿ ಚರ್ಚಿಸುತ್ತಾರೆ.

ಕವಿರಾಜಮಾರ್ಗಕಾರನು ಹೇಳುವಂತಹ 'ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಎಂಬ ಮಾತು ಇತರ ಜಾನಪದ ಸಾಹಿತ್ಯ ರಚಿಸುವವರಿಗೆ ಅನ್ವಯಿಸುವಂತೆ ಗುಲಬರ್ಗಾ ಮೊಹರಂ ಹಾಡುಗಳ ಕರ್ತೃಗಳಿಗೂ ಅನ್ವಯಿಸುವುದು. ಕವಿಗಳು ಯಾವ ಭಯಬಂಧನ, ಮಡಿ–ಮೈಲಿಗೆ ಇಲ್ಲದೆ, ಕಣ್ಣಿಗೆ ಕಾಣುವ, ಕಿವಿಗೆ ಕೇಳುವ, ಮೂಗಿಗೆ ಮುಟ್ಟುವ, ನಾಲಿಗೆಗೆ ನಿಲುಕುವ ಮೈಗೆ ಮುತ್ತುವ, ಒಳಗಿನ ಇಂದ್ರಿಯವನ್ನು ಅನುಭವಿಸುವ ಎಲ್ಲ ವಸ್ತುಗಳನ್ನು ಕುರಿತು ಕಾವ್ಯ ಬರೆದಿರುವುದನ್ನು ವಾಲೀಕಾರರು ಗುರುತಿಸುತ್ತಾರೆ. ಕವಿರಾಜಮಾರ್ಗದಲ್ಲಿ ಶ್ರೇಷ್ಠ ಕವಿಗಳ ಕಾವ್ಯದ ಲಕ್ಷಣವನ್ನು ಕುರಿತು ಹೇಳುತ್ತಾ ಅವು "ಪಾಪಮಿದು ಪುಣ್ಯಮಿದು ಹಿತಮಿದು, ಅಹಿತಪ್ರಕಾರಮಿದು" ಎಂದು ತಿಳಿಸಿಕೊಡುತ್ತವೆ ಎಂದು ಅವರು ಹೇಳುತ್ತಾರೆ. ಅದರಂತೆಯೇ ಇಲ್ಲಿನ ಮೊಹರಂ ಕವಿಗಳು ಪಾಪಕ್ಕೆ ಹೆದರಿ ನೀತಿಯಿಂದ ಬದುಕಿ ಬಾಳಬೇಕೆಂಬುದು ಬಯಸಿ ಈ ರಚನೆಗಳನ್ನು ಮಾಡಿದ್ದಾರೆ. ಎಂದು ವಾಲೀಕಾರರು ತಿಳಿಸಿದ್ದಾರೆ. ಯಾವುದೆ ಧರ್ಮಕ್ಕೆ ಸಂಬಂಧಪಟ್ಟ ಹಾಡುಗಳಿರಲಿ, ಅವುಗಳ ಮುಖ್ಯ ಉದ್ದೇಶ ಮಾನವರ ಬದುಕನ್ನು ಹಸನುಮಾಡುವುದು ಎಂಬುದನ್ನು ಅವರು ಗುರುತಿಸಿದ್ದಾರೆ.

ಚೆನ್ನಣ್ಣ ವಾಲೀಕಾರರು ಮೂಲತಃ ಬಂಡಾಯದ ಲೇಖಕರು. ಜನಪರ ಚಳುವಳಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಎಲ್ಲ ಬಗೆಯ ಅನ್ಯಾಯಗಳ ವಿರುದ್ಧ ಹೋರಾಡುವುದು ಅವರ ಗುಣವಾಗಿದೆ. ಹೀಗಾಗಿ ಜನಪದರ ಮೇಲೆ ಎಷ್ಟೇ ಒಲವಿದ್ದರೂ ಅವರಲ್ಲಿ ಅಮಾನವೀಯ ಅಂಶಗಳು ಕಂಡು ಬಂದಾಗ ಅವರಲ್ಲಿರುವ ಜಾನಪದ ವಿದ್ವಾಂಸ ಹಿಂದೆ ಸರಿದು, ಅವರೊಳಗಿನ ಸಾಮಾಜಿಕ ಕಾರ್ಯಕರ್ತ ಮುಂದೆ ಬರುತ್ತಾನೆ. ಆಗ ಅವರು ಈ ಕುರಿತು ಕಟುವಾದ ಟೀಕೆಗೆ ಇಳಿದುಬಿಡುತ್ತಾರೆ.

ಆದರೆ ವಾಲೀಕಾರರ ವಿಷಯ ಮಂಡನ ವಿಧಾನದಲ್ಲಿ ಒಂದು ಬಗೆಯ ಶೈಕ್ಷಣಿಕ ಶಿಸ್ತು ಇಲ್ಲ. ಜಾನಪದ ಅಧ್ಯಯನ ಇತ್ತೀಚಿನ ಪ್ರವೃತ್ತಿಗಳ ಬಗೆಗಿನ ತಿಳಿವಳಿಕೆಯೂ ಅಲ್ಲಿ ಕಾಣುವುದಿಲ್ಲ. ಆದರೆ ನಮ್ಮ ಜನಗಳ ಅಗತ್ಯಗಳ ಬಗೆಗೆ ಅವರಿಗೆ ಗಾಢವಾದ ಅರಿವಿದೆ. ನಮ್ಮ ದೇಶದ ಇತಿಹಾಸದುದಕ್ಕೂ ನಡೆದುಕೊಂಡು ಬಂದ ಬೌದ್ಧಿಕ ವಂಚನೆಗಳ ಬಗೆಗೆ ಅವರು ಸಾಕಷ್ಟು ತಿಳಿಸಿಕೊಡುತ್ತಾರೆ.

ಈ ಕೃತಿಯಲ್ಲಿ ಮೊಹರಂ ಪದಗಳು ಕನ್ನಡದಲ್ಲಿವೆ ಮತ್ತು ಇವು ಉತ್ತರ ಕರ್ನಾಟಕದಲ್ಲಿ ಮಾತ್ರ ಕಂಡು ಬರುತ್ತದೆ ಎಂದು ವಾಲೀಕಾರರು ಹೇಳುತ್ತಾರೆ. ಆದರೆ ಇವು ಯಾಕೆ ಉತ್ತರ ಕರ್ನಾಟಕದಲ್ಲಿಯೇ ಇವೆ ಎಂಬುದಕ್ಕೆ ಚಾರಿತ್ರಿಕ ಕಾರಣಾನ್ವೇಷಣೆ ಮಾಡುವುದಿಲ್ಲ.

ವಾಲೀಕರರು ಮುಸ್ಲಿಮರು ಹಿಂದುಗಳ ಜತೆ ಬೆರೆತು ಮೊಹರಂ ಹಬ್ಬವನ್ನು ಆಚರಿಸುತ್ತಾರೆ; ಇದೊಂದು ಹಿಂದು ಮುಸ್ಲಿಂರ ಭಾವೈಕ್ಯದ ಒಂದು ಸಂಕೇತ ಎಂದು ಹೇಳುತ್ತಾರೆ. ಆದರೆ ಭಾವೈಕ್ಯದ ಆಚೆ ಈ ಹಾಡುಗಳಿಗೆ ಇರುವ ನೆಲೆಗಳನ್ನು ನೋಡುವುದಕ್ಕೆ ಅವರು ಹೋಗುವುದಿಲ್ಲ.

ಉತ್ತರ ಕರ್ನಾಟಕದ ಲಾವಣಿ ಸಾಂಪ್ರದಾಯಿಕ ಅನೇಕ ಹಾಡುಗಳು ಮೊಹರಂ ಗೀತೆಗಳಲ್ಲಿ ಬೆರೆತಿರುವುದನ್ನು ಇಲ್ಲಿ ಗಮನಿಸಲಾಗಿದೆ. ಆದರೆ ಈ ಮೊಹರಂ ಹಾಡುಗಳು ಲಾವಣಿ ಸಂಪ್ರದಾಯದ ಹಾಡುಗಳ ಜತೆ ಸೇರಿಕೊಳ್ಳುವುದಕ್ಕೆ ಇರುವ ಕಾರಣಗಳನ್ನು ವಿವರಿಸಲು ಅವರಿಗೆ ಆಗಿಲ್ಲ.

ಈ ಕೃತಿಯ ವಿಶೇಷವೆಂದರೆ, ಮೊಹರಂ ಹಾಡುಗಳ ಮೂಲವನ್ನು ಫಾರಸಿ ಭಾಷೆಯಲ್ಲಿರುವ ಮರ್ಸಿಯಾ ಎಂಬ ದು:ಖಗೀತೆಯ ಸಂಪ್ರದಾಯದಲ್ಲಿ ಶೋಧಿಸಿರುವುದು. ಕರ್ಬಲಾ ಯುದ್ಧದಲ್ಲಿ ನಡೆದ ದುರಂತ ಕಥೆಯನ್ನು ಎಲ್ಲ ವಿವರಗಳೊಂದಿಗೆ ವರ್ಣಿಸಿ ಹೇಳುವ ಮರ್ಸಿಯಾ ಹಾಡಿನ ಪ್ರಕಾರವು ಪರ್ಷಿಯನ್ ಭಾಷೆಯಲ್ಲಿ ಪ್ರಸಿದ್ಧವಾದ ಸಿಯಾಸ್ ಜನಾಂಗದವರು ಕರುಣರಸದಿಂದ ತುಂಬಿ ತುಳುಕುವಂತೆ ಹಾಡುತ್ತಾರೆ ಎಂದು ಸೂಚಿಸುತ್ತಾರೆ. ಹೀಗೆ ಹಾಡು ಸಂಪ್ರದಾಯವೊಂದು

ಕರ್ನಾಟಕದ ದೇಶೀಯ ಸಂಸ್ಕೃತಿಯಲ್ಲಿ ಬೆರೆತು ಹೊಸಹುಟ್ಟು ಪಡೆದಿರುವುನ್ನು ಗಮನಿಸಿರುವುದು ವಾಲೀಕಾರರ ವಿಶೇಷತೆಯಾಗಿದೆ.

ಈ ಕೃತಿಯಲ್ಲಿ ಮೊಹರಂ ಆಚರಣೆಯನ್ನು 'ಜಾತ್ಯತೀತ ಗ್ರಾಮ ನಿವಾಸಿಗಳ ಭಾವೈಕ್ಯದ ಬೀಜ ಮಂತ್ರ' ಎಂದು ವರ್ಣಿಸುವ ವಾಲೀಕಾರರು ಇದರ ಬಗ್ಗೆ ಬರೆಯುತ್ತ ಅತಿಭಾವುಕತೆಗೆ ಹೋಗುತ್ತಾರೆ. ಇದೊಂದು ಮಿತಿಯಾಗಿದೆ.

ವಾಲಿಕಾರರು ಹೇಳುವ ಪ್ರಕಾರ, ಅರೇಬಿಯಾ ಒಂದು ಕಾಲಕ್ಕೆ ಮೂಢನಂಬಿಕೆಗಳ ತವರಾಗಿತ್ತು. ಅನೇಕ ಬುಡಕಟ್ಟು ಸಮುದಾಯಗಳು ಪರಸ್ಪರ ಕಚ್ಚಾಡುತ್ತಿದ್ದರು ಏಳನೆಯ ಶತಮಾನದ ವೇಳೆಗೆ ಆರೇಬಿಯಾದಲ್ಲಿ ಇಸ್ಲಾಂ ಧರ್ಮ ಉಗಮವಾಗಿ ಪರಸ್ಪರ ಹೋರಾಡುತ್ತಿದ್ದ ಜನರನ್ನು ಸಂಘಟಿಸಿತು. ಅರಬಿ ಸಾಮ್ರಾಜ್ಯ ಮುಂದೆ ಸ್ಥಾಪಿತವಾಯಿತು. ಇಲ್ಲಿನ ಸಂಸ್ಕೃತಿಯೂ ಬೆಳೆಯಿತು ಎಂದು ಹೇಳುತ್ತಾರೆ. ಆದರೆ ಈ ಮಾಹಿತಿಯು ಇಲ್ಲಿರುವ ಯಾವುದೇ ಹಾಡುಗಳಲ್ಲಿ ಕಂಡು ಬರುವುದಿಲ್ಲ. ಈ ಮಾಹಿತಿಗೂ ಮೊಹರಂ ಹಾಡುಗಳಿಗೂ ಯಾವ ಬಗೆಯಲ್ಲಿ ಸಂಬಂಧವೆಂದು ಸ್ಪಷ್ಟವಾಗುವುದಿಲ್ಲ.

ಗುಲಬರ್ಗಾ ಜಿಲ್ಲೆಯ ಮೊಹರಂ ಹಾಡುಗಳ ಮೇಲೆ ಉರ್ದು ಮರಾಠಿ ಮತ್ತು ಇಂಗ್ಲೀಷ್ ಭಾಷೆಯ ಪ್ರಭಾವ ಇರುವುದನ್ನು ಗಮನಿಸಬಹುದು. ಉದಾಹರಣೆಗೆ **ಮರಾಠಿ ಶಬ್ದಗಳು** : ಸೆಂಬರ್=ನೂರು, ಪೋಣೆ=ಮುಕ್ಕಾಲು, ಬತ್ತಿಸ್=ಮೂವತ್ತೆರಡು, ಚಾರಣೆ=ನಾಲ್ಕಾಣೆ, ಗಾಂವಡಿ=ಹಳ್ಳಿ ಇತ್ಯಾದಿ. **ಉರ್ದು ಶಬ್ದಗಳು**: ಬಾರಾ=ಹನ್ನೆರಡು, ಹೈರಾಣ=ಕಷ್ಟ, ದೋಸ್ತಿ=ಗೆಳೆಯ, ಹಮಲಾ=ದಾಳಿ, ಹಕನಾಕ=ಮೆತ್ತಗೆ ಇತ್ಯಾದಿ. ಇಂಗ್ಲೀಷ್ ಶಬ್ದಗಳು: ರೈಲುಗಾಡಿ=ರೈಲ್ ಟ್ರೇನ್, ಡರವರ–ಡ್ರೈವರ್ ಇತ್ಯಾದಿ. ಹೀಗೆ ಅನ್ಯಭಾಷೆಯ ಪ್ರಭಾವ ಮೊಹರಂ ಈ ಹಾಡುಗಳ ಮೇಲೆ ಕಾಣುತ್ತದೆ. ಆದರೆ ಈ ಭಾಷೆಯ ಶಬ್ದಗಳು ಮೂಲತಃ ಅನ್ಯಭಾಷೆಯವಾದರೂ, ಅವು ಬಳಕೆಗೊಂಡು ದೇಶೀಯವಾದವುಗಳಾಗಿವೆ ಎಂಬುದನ್ನು ಮರೆಯುವಂತಿಲ್ಲ.

ಇಲ್ಲಿಯ ಹಾಡುಗಳ ತುಂಬ ಮೊಹರಂ ಕವಿಗಳು ಮಾನವತಾವಾದದಿಂದ ಕೂಡಿದ ತತ್ವಗಳಿಗೆ ಹೆಚ್ಚಿನ ಒತ್ತುಕೊಟ್ಟಿರುವರು ಎಂದು ವಾಲೀಕಾರರು ಹೇಳುವುದು ಕೂಡ ಉಚಿತವಾಗಿದೆ. ಗುಲಬರ್ಗಾ ಭಾಗದ ಅತ್ಯುತ್ತಮ ಮೊಹರಂ ಹಾಡುಗಳ ಸಂಗ್ರಹ ಕೃತಿ ಇದಾಗಿದೆ. ವಾಲೀಕಾರರು ಭಾಗದ ಜನಪದ ಸಾಹಿತ್ಯವನ್ನು ಹಬ್ಬಗಳ ಆಧಾರದಲ್ಲಿ ವಿಂಗಡಿಸಿ ಅಧ್ಯಯನ ಮಾಡಲು ಪ್ರೇರಣೆ ಕೊಟ್ಟವರಲ್ಲಿ ಮುಖ್ಯರು.

ಅಧ್ಯಾಯ : ನಾಲ್ಕು

ಯಾದಗಿರಿ ಪರಿಸರದ ಮೊಹರಂ ಪದಗಳಲ್ಲಿ ಧಾರ್ಮಿಕ ಪ್ರಜ್ಞೆ

ಅಧ್ಯಾಯ : ನಾಲ್ಕು

ಯಾದಗಿರಿ ಪರಿಸರದ ಮೊಹರಂ ಪದಗಳಲ್ಲಿ ಧಾರ್ಮಿಕ ಪ್ರಜ್ಞೆ

ಮೊಹರಂ ಹಾಡುಗಳಿಗೆ ಕಾರಣವಾಗಿರುವ ಕರ್ಬಲ ಯುದ್ಧವು ಮೂಲತಃ ಚರಿತ್ರೆಗೆ ಸಂಬಂಧಪಟ್ಟಿದ್ದು. ಅರಬ್ಬರಲ್ಲಿ ಯಾರು ಅವರ ಆಧ್ಯಾತ್ಮಿಕ ರಾಜಕೀಯ ನಾಯಕತ್ವವನ್ನು ವಹಿಸಬೇಕು ಎಂಬ ವಿಷಯದಲ್ಲಿ ನಡೆದ ಇಬ್ಬರು ಎದುರಾಳಿಗಳಲ್ಲಿ ನಡೆದ ಯುದ್ಧಕ್ಕೆ ಸಂಬಂಧಪಟ್ಟಿದ್ದು. ಈ ಅರ್ಥದಲ್ಲಿ ಇದು ರಾಜಕೀಯಕ್ಕೆ ಸಂಬಂಧಪಟ್ಟಿದ್ದು. ಆದರೆ ಇದು ಕೇವಲ ಚಾರಿತ್ರಿಕ ಅಥವಾ ರಾಜಕೀಯವಾದ ವಿದ್ಯಮಾನವಲ್ಲ. ಇದರಲ್ಲಿ ಇಸ್ಲಾಂ ಧರ್ಮದ ಸಂಗತಿಯು ಸಹ ಅಡಗಿದೆ. ರಾಜಕೀಯ ಮತ್ತು ಧರ್ಮವನ್ನು ಹಾಗೆ ಬೇರೆ ಮಾಡಲಾಗದ ಸಮಾಜದಲ್ಲಿ ನಡೆದ ಯುದ್ಧವಿದು. ಈ ಯುದ್ಧದ ನಂತರ ಅದರಲ್ಲಿ ಹುತಾತ್ಮರಾದವರು ಧಾರ್ಮಿಕ ಆಯಾಮವನ್ನು ಪಡೆದುಕೊಂಡರು. ಇದಕ್ಕೆ ಇನ್ನೊಂದು ಕಾರಣ, ಹುತಾತ್ಮರಾದವರು ಮಹಮದ್ ಪೈಗಂಬರರ ಮೊಮ್ಮಕ್ಕಳು ಕೂಡ ಆಗಿದ್ದುದು. ಹೀಗಾಗಿ ಮೊಹರಂ ಹಾಡುಗಳಲ್ಲಿ ಚಾರಿತ್ರಿಕ ಸಂಗತಿಯೂ ಇದೆ. ರಾಜಕೀಯ ಸಂಗತಿಯೂ ಇದೆ. ಈ ಚರಿತ್ರೆ ಮತ್ತು ರಾಜಕೀಯಗಳು ಧರ್ಮದ ಆಯಾಮದಲ್ಲಿವೆ. ಕರ್ಬಲಾ ಕಾಳಗವನ್ನು ಧರ್ಮಯುದ್ಧ, ಧರ್ಮದ ರಕ್ಷಣೆಗಾಗಿ ನಡೆದ ಹೋರಾಟ ಎಂದು ನಂಬಲಾಗಿದೆ. ಅಂತೆಯೇ ಮೊಹರಂ ಪದಗಳಲ್ಲಿ ಹೆಚ್ಚು ಭಾಗ ಧಾರ್ಮಿಕ ಪದಗಳಿವೆ. ಇವು ದೇವರು ಭಕ್ತಿ ಶಾಪ ವರಗಳಂತಹ ಅಲೌಕಿಕ ಸನ್ನಿವೇಶಗಳಿಂದ ಕೂಡಿವೆ. ದೇವರನ್ನೇ ನಂಬಿದ ಭಕ್ತರು, ಕಷ್ಟ–ನಷ್ಟ ಅನುಭವಿಸಿದರೂ ಕೊನೆಗೆ ಶಾಶ್ವತ ಸುಖ ಶಾಂತಿಯನ್ನು ಪಡೆಯುವರು ಎಂಬ ಆಶಯವು ಇಲ್ಲಿ ಕಾಣುವುದು. ಮೊಹರಂ ಹಾಡುಗಳಲ್ಲಿ ಸ್ಥಳಪುರಾಣ, ಐತಿಹ್ಯ, ಸಂಪ್ರದಾಯ ಸಂಗತಿಗಳಿರುವುದನ್ನೂ ಸಹ ಕಾಣಬಹುದಾಗಿದೆ. ವಿಶೇಷವೆಂದರೆ ಮೊಹರಂ ಹಾಡುಗಳಲ್ಲಿ ಸ್ಥಳೀಯ ಚರಿತ್ರೆಯ ಸಂಗತಿಗಳು ಸೇರಿಹೋಗಿರುವುದು. ಸ್ಥಳೀಯ ಜನರ ನಂಬಿಕೆಗಳ ಲೋಕವು ಸೇರಿಹೋಗಿರುವುದು. ಬಹಳ ಮುಖ್ಯಸಂಗತಿ ಎಂದರೆ, ಯಾದಗಿರಿ ಸೀಮೆಯ ದರ್ಗಾ ಸಂಸ್ಕೃತಿಯು ಮೊಹರಂ ಸಂಸ್ಕೃತಿಯ ಜತೆ ಬೆರೆತುಹೋಗುವುದು. ಮಸೀದಿಯು ನಮಾಜ್ ಮಾಡುವ ಜಾಗವಾಗಿದ್ದು, ಅಲ್ಲಿಗೆ ಮುಸ್ಲಿಮರಲ್ಲದವರು ಪ್ರವೇಶಿಸುವುದಿಲ್ಲ. ಮುಸ್ಲಿಮರಾದರೂ ಮಹಿಳೆಯರು ಹೋಗುವುದಿಲ್ಲ. ಆದರೆ ದರ್ಗಾ ಮತ್ತು ಮೊಹರಂ ಸಂಸ್ಕೃತಿಗಳು ಧರ್ಮಭೇದವಿಲ್ಲದೆ ಎಲ್ಲರಿಗೂ ಪ್ರವೇಶ ಕೊಡುತ್ತವೆ.

ಲಿಂಗಭೇದವಿಲ್ಲದೆ ಎಲ್ಲರಿಗೂ ಸ್ವೀಕರಿಸುತ್ತವೆ. ಹೀಗಾಗಿ ಮೊಹರಂ ಹಾಗೂ ದರ್ಗಾ ಸಂಸ್ಕೃತಿಗಳು ಈ ಭಾಗದಲ್ಲಿ ಜನಪ್ರಿಯ ಇಸ್ಲಾಮಿನ ಭಾಗವಾಗಿವೆ.

ಕರಮುಗಿದು ಸಿರಬಾಗಿ ಹೇಳತೀನಿ ಸಭೆದೊಳಗೆ ಬಂದಾ
ಶಹರ ಗುರುಮಠಕಲ್ ಊರಾ ನೋಡರಿ ಭಲೆರೆ ಫಸಂದಾ
ಕಿಲೆದಾಗ ದರ್ಗವು ಗಬ್ಬೆಂದಾ ಮಸೂತಿ ಹುಸೇನಿಬಾಸಂದಾ

–ಎಂದು ಆರಂಭಗೊಳ್ಳುವ ಒಂದು ಮೊಹರಂ ಹಾಡಿದೆ. ಇದು ಯಾದಗಿರಿ ತಾಲ್ಲೂಕಿನ ಕೊಟ್ಟಗಿರಿ ಎಂಬ ಊರಿನಲ್ಲಿರುವ ಹುಸೇನ ಸಾಹೇಬರ ದರ್ಗಾಕ್ಕೆ ಸಂಬಂಧಪಟ್ಟಿದ್ದು. ಈ ಹುಸೇನ ಸಾಬರು ಮೊಹರಂ ಹಾಡುಗಳ ನಾಯಕರಾದ ಹುಸೇನ್ ಕೂಡ ಇರಬಹುದು. ಈ ಹಾಡಿನಲ್ಲಿ ನಗಾರಿ ಸೌಬತ್ತಿನಿಂದ ಬೇವಿನ ಗಿಡಗಳಿಂದ, ಕಲ್ಲಿನ ಹಾಸಿಗೆಯಿಂದ, ಐದು ಸಲ ನಮಾಜು ಮಾಡುವವರಿಂದ ಶೋಭಿಸುವ ದರ್ಗಾದ ವರ್ಣನೆಯಿದೆ. ಇದಕ್ಕೆ ಒಮ್ಮೆ ಮಕ್ಕಳಾಗದ ಒಬ್ಬ ಗರತಿ ಬಂದು ಬೇಡಿಕೊಳ್ಳುವಳು. ಆಕೆಯ ಹೆಸರು ಕಾಸಿಬಾಯಿ. ಆಕೆ ಹೀಗೆ ಬೇಡಿಕೊಳ್ಳುವಳು:

ಕಾಸಿಬಾಯಿ ಕೈಯ ಒಡ್ಡಿ ತಾ ಬೇಡಿಕೊಂಡಾಳ ಬಂದಾ
ಮನದನ ಹರಕಿ ಆಗಿಬಂದರೆ ವಾರ ಮಾಡುವೆ ಐದಾ
ಕಂದೂರಿ ಮಾಡ್ತೀನಿ ಕುರಿಕೊಯಿದಾ ಉಣಸ್ತೀನಿ ಫಕೀರನ ಕರದಾ
ಬೆಳ್ಳಿಯ ಕುದರಿ ಬಂಗಾರ ತೊಟ್ಲ ಸೊಲಗಿಯ ಬಂಗಾರದ
ಮುತ್ತಿನ ಜಮಕಿ ಬಂಗಾರ ತೊಟ್ಲಾಗ ಕಂದಾ ಆಡಿಬಂದ
ದೇವರ ಗದ್ದಗಿ ಮ್ಯಾಲ ತಂದು ಧೀನ್ ಹಾಕ್ತೀನಿ ಒಂದಬಂದ

ಕಾಸಿಬಾಯಿಯ ಬೇಡಿಕೆಯು ಒಂದು ಬಗೆಯಲ್ಲಿ ಇಡೀ ಹಳ್ಳಿಯವರ ಹರಕೆಯಂತಿದೆ. ಇದು ದೇವರಲ್ಲಿ ಸಂಪೂರ್ಣ ಶರಣು ಹೋದ ಬಗೆಯನ್ನು ತಿಳಿಸುವುದಾಗಿದೆ. ಸಾಮಾನ್ಯವಾಗಿ ಮೊಹರಮ್ಮಿನ ಸಾಮಾಜಿಕ ಹಾಡುಗಳು ಕೌಟುಂಬಿಕ ಸಮಸ್ಯೆಯನ್ನು ಒಳಗೊಂಡಿದೆ. ಇಲ್ಲಿ ಮಕ್ಕಳಿಲ್ಲದ ಹೆಣ್ಣು ತನಗೆ ಮಗುವಾದರೆ, ದರ್ಗಾಕ್ಕೆ ಬಂಗಾರ ತೊಟ್ಟಿಲು ಮಾಡಿಸಿಕೊಡುತ್ತೇನೆಂದು ಬೇಡಿಕೊಳ್ಳುವದು ಆಕೆಯ ಶ್ರೀಮಂತಿಕೆ ಸೂಚಿಸುತ್ತದೆ. ತೊಟ್ಟಿಲು ಮತ್ತು ಕುದುರೆಯ ಹರಕೆಯು ದರ್ಗಾಗಳಿಗೆ ಮಾಡಿಕೊಳ್ಳುವಂತೆಯೇ ಮೊಹರಂ ದೇವರಿಗೂ ಮಾಡಿಕೊಳ್ಳಲಾಗುವುದು. 'ನಮಾಜಿನ ಮಹತ್ವ' ಎಂಬ ಇನ್ನೊಂದು ಹಾಡಿದೆ. ಅದರಲ್ಲಿ ಕೂಡ ಭಕ್ತಿಯ ಮಹತ್ವವನ್ನು ಹೇಳಲಾಗಿದೆ.

ಬಡತಾನೆಂಬುದು ಬಹಳೇ ಹೀನ
ಈ ಭೇದ ಶಾಸ್ತ್ರದ ಸಂಧಾನ

ಮೌಲಾಲಿ ಎಂಬುದು ದೊಡ್ಡ ಶರಣ
ಮನಿಮಂದಿ ಒಂದತ್ತೊ ಮೂರದಿನ
ಐದು ಹೊತ್ತು ತಪ್ಪದಾಂಗ
ನಮಾಜ ಮಾಡಿ ನೆನಸುವ ಶಿವಗ
ಮನಿಯೊಳಗ ಇತ್ತು ಕಠಿಣಾ
ಮಕ್ಕಳು ಇದ್ದವು ಸಣ್ಣ ಸಣ್ಣಾ
ಸತಿ ಇದ್ದಾಳೋ ಬೆರಕಿ ಹೆಣ್ಣ ಮಹಾಜಾಲಾ
ತಿನ್ನುವಳು ಗಂಡನ ಜೀಂವಾ
ಯಿಂವಂಗಾರ ಬರವಲ್ಲು ಸಾವಾ
ಬಡದೈತಿ ನಮಾಜಿನ ದೆವ್ವಾ ಫಲವಿಲ್ಲಾ

ಈ ಹಾಡಿನಲ್ಲಿ ಬರುವ ಗಂಡ ಭೋಳ, ಅಂದರೆ ಭಕ್ತ ಕೂಲಿಗೆ ಹೋಗದೆ ನಮಾಜು ಬಿಡದೆ ಮಸೂತಿ ಹಿಡಿದು ಹಗಲು ರಾತ್ರಿ ಶಿವ ಶಿವನೇ ಅಂತೀರಿ ಖಾಲಿ, ನಿಮಗೆ ಒಂದಿಷ್ಟು ಸಂಸಾರದ ಚಿಂತಿಯಿಲ್ಲ–ಎಂದು ಅವನ ಹೆಂಡತಿ ಗಂಡನಿಗೆ ಛೀಮಾರಿ ಹಾಕುವಳು. ಛೀಮಾರಿ ಸಹಿಸದೆ ಬಡವ ನಮಾಜು ಮಾಡಿ, ನಬಿಸಾಹೇಬರ ನೆನೆದು ಕೂಲಿಯವರ ಹಿಂದೆ ಹಿಂದೆ ನಡೆಯುತ್ತಾನೆ. ಯಾರೂ ಕೂಲಿಗೆ ಕರೆದುಕೊಳ್ಳುವುದಿಲ್ಲ. ಮನಸ್ಸಿಗೆ ಕೆಡುಕೆನಿಸಿದರೂ ನಬಿಸಾಹೇಬರ ಮೇಲೆ ಭರವಸೆಯಿಟ್ಟು, ಸಾಯಂಕಾಲ ಮನೆಗೆ ಹಿಂದಿರಿಗುತ್ತಾನೆ.

ಸತಿ ಅಂದಳು ಎಲ್ಲಿ ಐತಿ ನಿನಕೂಲಿ ಮದಲಾ
ಅಂತನಾ ಹಿಡದೀನ ಕೆಲಸ । ಎಂಟ ದಿನ ಕರಾರಾ
ಮಾಡ್ಯಾನ ಸಾವಕಾರ । ತರಿತು ನಮ್ಮ ಹಣೆಬರಾ
ಇನ್ನೆಲ್ಲಿ ದುಡುಕಿ ಚಿಂತಿ । ಹ್ವಾರೆ ಬಹಳ ಐತಿ
ಹತ್ತುವುದು ವರುಷಾನಗತಿ ಬ್ಯಾರಿಕಾಲಾ
ಕಿರಿಕಿರಿ ತಾಳಲಾರದಕ । ಮಾಡಿ ಹೇಳ್ಯಾನ ಹಿಂತಮಲಕ
ಸತಿ ಮಟಗುಡಾಕ ಹತ್ಯಾಳಲ್ಲಾ

ಹೆಂಡತಿಯನ್ನು ಸಾಂತ್ವನ ಮಾಡಿದ ಬಡವ ದಿನಂಪ್ರತಿ ಹೋಗಿ ಅಡವಿಯಲ್ಲಿ ಕುರಿತು ಶಿವಸ್ಮರಣೆ ಮಾಡುವನು. ಎಂಟು ದಿನಗಳಿದ್ದು ಮನೆಗೆ ಬರುವನು. ಬರಿಗೈಲಿ ಬಂದ ಗಂಡನನ್ನು

ನೋಡಿ ಹೆಂಡತಿ ಕಿಡಿಕಿಡಿ ಆಗುವಳು. ಆಗ ಬಡವ ಮತ್ತೆ ಹುಡುಕಾಡಿ ಬಂದು ಅಕಲು ತೆಗೆದು ಹೇಳುತ್ತಾನೆ:

ಸಾವಕಾರ ಊರಾಗ ಇಲ್ವಾ । ನಾಳಿಗೆ ಬರತಾನಲ್ಲಾ
ಹೊಲದ ಸಣ್ಣ ಸಣ್ಣ ಚೀಲ ತರತೀನಿ ಸಾಮಾನ
ಎಲ್ಲಾ ಮರುದಿನ ಬೆಳಗಾಗಿಂದ । ಚೀಲಾ ಕೊಟ್ಟಾಳು
ಹೊಲದತಗೊಂಡು ಸಾಹೇಬನ ನೆನೆದು । ಹೈ ಅಲ್ಲಾ
ಕುಂತಾನು ಹೋಗಿ ಅಡಿವ್ಯಾಗ । ಕಳವಳಿ ಹುಟ್ಟಿತೋ ಶಿವಗ
ಕಳಿಸೀದ ಜಿಬರಾಯಿಲಗ ತತ್ಕಾಲ
ಜಿಬರಾಯಿಲಗ ಆದೀತೋ ಹುಕುಮಾ
ಸಂಗತೇತಿ ಒಯ್ಯಬೇಕೋ ರಖಮಾ
ಸವಿಯದಾಂಗ ಏಳೇಳು ಜಲಮಾ
ನನ್ನ ಭಕ್ತ ಬಿಡತಾನ ಶ್ರಮ

ಜಿಬರಾಯಿಲನು (ದೇವದೂತನು) ಮುದುಕನ ರೂಪ ಧರಿಸಿ ಬಡವನ ಮನೆಗೆ ಹೋಗಿ ರೇಖಡಿ ರಖಮಿನ ಥೈಲಿಯನ್ನು ಬಡವನ ಹೆಂಡತಿಯ ಮುಂದೆ ಇಟ್ಟು ನಿನ್ನ ಗಂಡ ಕೂಲಿ ಕಳಿಸಿರುವನೆಂದು ಹೇಳುವನು. ಇತ್ತ ಅಡವಿಯಲ್ಲಿ ಚಿಂತಿಸುತ್ತ ಕುಳಿತಿದ್ದ ಬಡವ ಹಂಚಿಕೆ ಹಾಕಿ, ತಂದ ಖಾಲಿ ಚೀಲದಲ್ಲಿ ನಿಂತಿದ್ದ ಸತಿಯನ್ನು ನೋಡಿದಂಗಾಗುವನು. ಆದರೆ ಸತಿ ಎಂದಿನಂತೆ ವಟಗುಡದೆ ನಯವಿನಯವಾಗಿ ಮಾತಾಡಿದಳು. ಗಂಡನನ್ನು ಕರೆದು ಮುದುಕ ಕೊಟ್ಟ ರೊಕ್ಕ ರೂಪಾಯಿಗಳನ್ನು ತೋರಿಸಿದಳು.

ಬಡತನದಲ್ಲೇ ಬದುಕುವ ಪರಿಸರಲ್ಲಿ ಇಂತಹ ಆಶಾವಾದದ ಕತೆಗಳು ಹುಟ್ಟುತ್ತವೆ ಎನಿಸುತ್ತದೆ. ಬಡತನವು ದೈವದ ದಯೆಯಿದ್ದರೆ ಒಂದಲ್ಲಾ ಒಂದು ದಿನ ನೀಗುತ್ತದೆ ಎಂಬ ಭರವಸೆಯನ್ನು ಈ ಹಾಡು ಉಳಿಸಿಕೊಂಡಿದೆ. ಆದರೆ ಬಡತನಕ್ಕೆ ನಿಜವಾದ ಕಾರಣಗಳನ್ನು ಇಂತಹ ಭಕ್ತಿಯ ಹಾಡುಗಳು ಹುಡುಕುವುದಕ್ಕೆ ಪ್ರೇರಿಸುವುದಿಲ್ಲ. ಮೊಹರಂ ಹಾಡುಗಳು ಭಕ್ತಿಯು ಭಕ್ತರನ್ನು ಎಲ್ಲ ಕಷ್ಟಗಳಿಂದ ಕಾಪಾಡುವುದು ಎಂಬ ಆಸ್ತಿಕತೆಯನ್ನು ಉಳ್ಳವಾಗಿವೆ. ಈ ಹಾಡಿನಲ್ಲಿರುವ ಆಶಯವು ಈ ಭಾಗದ ಜನಪದ ಕತೆಗಳಲ್ಲಿ ಬೇಕಾದಷ್ಟು ಕಾಣಸಿಗುತ್ತವೆ. ಮಹತ್ವದ ವಿಚಾರವೆಂದರೆ, ಈ ಹಾಡಿನಲ್ಲಿ ಶಿವ ಮತ್ತು ಅಲ್ಲಾ ಒಂದೇ ಅಗಿರುವುದು. ದುಡಿಯುವ ವರ್ಗದಲ್ಲಿ ದೇವರು ಇರುತ್ತಾನೆ. ಆದರೆ ಅವನಿಗೆ ನಿರ್ದಿಷ್ಟ ಧರ್ಮದ ಚಹರೆಗಳು ಇರುವುದಿಲ್ಲ.

'ನಮಾಜಿನ ಮಹತ್ವ' ಹಾಡಿನ ಹಾಗೆಯೇ 'ಬಿಸುಮಿಲ್ಲಾ ನುಡಿಯ ಪ್ರಭಾವ'ವೂ ಭಕ್ತಿಪ್ರಧಾನವಾಗಿದೆ. ಇದರಲ್ಲಿ ಚಿನಿವಾಲನ ಮಗಳು ಮುಸಲ್ಮಾನ ಹುಡುಗರೊಂದಿಗೆ ಸಾಲಿಗೆ ಹೋಗುವ ಪ್ರಸಂಗವಿದೆ. ಆಕೆ ಅವನ ಸಹವಾಸದಿಂದ 'ಬಿಸಮಿಲ್ಲಾ' ಎಂಬ ಶಬ್ದ ಕಲಿಯುವಳು. ಕುಂತರೆ ನಿಂತರೆ ಆ ಹುಡುಗಿ 'ಬಿಸುಮಿಲ್ಲಾ' ಎನ್ನುವಳು. ಇದನ್ನು ಕೇಳಿ ಸಹಿಸದ ಅಪ್ಪನು, ಮಗಳಿಗೆ ಮುದ್ದು ಮಾಡಿ ಬಿಸಮಿಲ್ಲಾ ಶಬ್ದ ನುಡಿಯಬೇಡ ಅದು ನಮ್ಮ ಧರ್ಮಕ್ಕೆ ವಿರುದ್ಧವಾದುದೆಂದು ತಿಳಿಸುವನು.

ವ್ಯಸನದಿಂದ ಎತ್ತಿಗೊಂಡು ಮಗಳ ಗಲ್ಲಾ
ಹಿಡಿದು ಬೇಡಿಕೊಂಡು ಕೊಟ್ಟಾನು ಲಚಲಚ ಬೆಲ್ಲಾ ।
ಅಂತಾನೋ ಬೆಳ್ಳಿ ಬಟ್ಟಲಾ ಬಂಗಾರ ಪ್ಯಾಲಾ
ಮುಂದ ಎಣಿಸಿ ಕುಡಿಸಿ ಹೇಳತಾನೋ ಸಕ್ಕಾರಿ ಹಾಲಾ
ಸಿಟ್ಟಿಗೆದ್ದ ಚಿನಿವಾಲಾ ಕಟ್ಟಿಯ ಕಲ್ಲಾ
ಎತ್ತಿ ತಲಿಮ್ಯಾಲ ಹಾಕೂತ ತತ್ಕಾಲಾ ಆದೀತೋ ಹೆರಳಾ
ತರುವಾಯ ತಂದಾನೊಂದು ಕುಡುಗೋಲಾ

ಭಯ ಭಕ್ತಿಯಿಂದ ಅಲ್ಲಾನ ನೆನೆದರೆ ಬಂದ ಕಷ್ಟಗಳು ಬಯಲಾಗುವವು. ಅಡಿಗೊಮ್ಮೆ ಬಿಸಮಿಲ್ಲಾ ನುಡಿದದ್ದೇ ಆದರೆ ಎಂಥ ಕಷ್ಟದ ಪ್ರಸಂಗಗಳೂ ಇಲ್ಲವಾಗುವುವು. ಈ ಪದವು ವಿಷ್ಣುನಾಮ ಜಪಿಸುವ ಕಾರಣದಿಂದಲೇ ತನ್ನ ತಂದೆಯಿಂದ ಶಿಕ್ಷೆಗೆ ಒಳಗಾಗುವ ಪ್ರಹ್ಲಾದನ ಕತೆಯನ್ನು ನೆನಪಿಸುತ್ತದೆ. 'ಹರನಾಮ ಸ್ಮರಣೆಯ ಮಹತ್ವ', 'ಕುರ್ಬಾನಿ ಕೊಟ್ಟ ಪದ', 'ಬೀಬಿಖಾತುನಳ ಪದ' ಮುಂತಾದ ಪದಗಳ ಉದ್ದೇಶ ದೈವಭಕ್ತಿಯ ಮಹತ್ವವನ್ನು ನಿರೂಪಿಸುವುದೇ ಆಗಿದೆ. ಮೊಹರಂ ಹಾಡುಗಳಲ್ಲಿ ಒಂದು ಬಗೆಯಲ್ಲಿ ಇಸ್ಲಾಮಿನ ತತ್ವಗಳನ್ನು ಕತೆಗಳನ್ನು ಪುರಾಣಗಳನ್ನು ಜನರಿಗೆ ತಲುಪಿಸುವ ಪ್ರಚಾರದ ಆಯಾಮವೂ ಇದೆ. ಇದೊಂದು ಬಗೆಯಲ್ಲಿ ಧಾರ್ಮಿಕ ಶಿಕ್ಷಣದ ಭಾಗವಾಗಿವೆ. ಯಾದಗಿರಿ ಭಾಗದಲ್ಲಿ ಮೊಹರಂ ಆಚರಣೆಯನ್ನು ಹಿಂದುಧರ್ಮದ ಹೆಚ್ಚಿನ ಕೆಳಜಾತಿಗಳು ಆಚರಿಸುತ್ತವೆ. ಆದರೆ ಉಚ್ಚಜಾತಿಯ ಜನರು ಆಚರಿಸುವುದಿಲ್ಲ. ಈ ಹಿನ್ನೆಲೆಯಲ್ಲಿ ಮೇಲಿನ ಹಾಡನ್ನು ಗಮನಿಸಬಹುದು. ಈ ಧಾರ್ಮಿಕತೆಯನ್ನು ಹೆಚ್ಚಿಸಲು ಜನಪದ ಕವಿಗಳು ಪವಾಡ ಪ್ರಸಂಗಗಳನ್ನು ಸೇರಿಸಿದ ಹಾಗೆ ಕಾಣುತ್ತದೆ. ಒಮ್ಮೆ ನಬಿಸಾಹೇಬರ ಸವಾರಿ ಕಾಶಿಮನ ಜಾತ್ರೆಗೆಂದು ಹೊರಟಿತ್ತು. ನಬಿಸಾಬರು ಗಾಡಿಗೆ ಹತ್ತಲು ಬರುತ್ತಾರೆ.

ಗಾಡಿಗೆ ಯೋಗಿ ಹತ್ಯಾರೋ ಹತ್ತು ಪ್ರೀತಿಲಿಂದಾ
ಹಾಸಲು ಕೊಟ್ಟು ಹತ್ಯಾರೋ ಗಾಡಿ ನುಗಿಸಿ ಕೊಟ್ಟಾರೇ ಇಂದಾ
ಹಾಸಲು ಕೊಟ್ಟು ಸ್ವಾಮಿ ತಗೊಂಡು ಸರಪಿಟ ಸಾಹಿಬ ಬಂದ
ಪಾದಾನಿಟ್ಟು ಬೇಗ ಹತ್ಯಾರೋ ಗಾಡಿ ಸಾಗಿತೋ ಮುಂದ
ಹೋಗೋ ಗಾಡಿಗೆ ಯೋಗಿ ನಿಲ್ಲಿಸ್ಯಾರೋ ಸತ್ಯದ ಬಲದಿಂದಾ
ಅಣ್ಣೀಗೇರಿ ದುಂದೂರು ನಡುವೆ ಗಾಡಿ ಅಂತೋ ಬಂದಾ

ಸತ್ಯದ ಬಲದಿಂದ ಹೋಗುವ ಗಾಡಿ ನಿಲ್ಲಿಸಿದ ನಬಿಸಾಹೇಬರಿಗೆ ಸರಪೀಟ ಸಾಹಿಬ ಬಂದು ತನ್ನ ತಪ್ಪು ಒಪ್ಪಿಕೊಂಡು ಕ್ಷಮೆ ಕೇಳುತ್ತಾನೆ. ಯಾದಗಿರಿ ಭಾಗದಲ್ಲಿ ಇಂದಿಗೂ ನಬಿಸಾಹೇಬರ ಬರಗಾಕ್ಕೆ ಜನ ಭಕ್ತಿಯಿಂದ ಹರಕೆ ಸಲ್ಲಿಸುವರು.

ಯಾದಗಿರಿ ಭಾಗದಲ್ಲಿ ಮಾಬೂಸುಬಾನಿ ದರ್ಗಾಗಳು ಊರಿಗೆ ಒಂದೊಂದಾರೂ ಕಾಣುತ್ತವೆ. ಮಾಬುಸುಬಾಯಿನಿಯವರ ಹಿನ್ನೆಲೆ, ಜೀವನ ಚರಿತ್ರೆ ತಿಳಿಯದವರು ಭಕ್ತಿಯಿಂದ ದರ್ಗಾಕ್ಕೆ ನಡೆದುಕೊಳ್ಳುವುದು ಕಂಡುಬರುತ್ತದೆ. ಕಾರಣ ಅವರು ಪವಾಡ ಪುರುಷರಾಗಿದ್ದರೆಂದು ಐತಿಹ್ಯಗಳು ಹೇಳುತ್ತವೆ. ಅಲ್ಲಾನ ಆಜ್ಞೆಯಿಂದ ಭೂಮಿಗೆ ಬಂದ ಮಾಬೂಸುಬಾನಿಯವರು, ಭೂಮಿಯ ಮೇಲಿನ ಭಕ್ತರ ಕಷ್ಟಗಳಿಗೆ ಸಹಾಯಕವಾಗಿ ನಿಲ್ಲುವ ಹಲವಾರು ಹಾಡುಗಳಿವೆ. ಇವು ಕೈಲಾಸದಿಂದ ಶಿವನ ಗಣಗಳು ಭೂಮಿಯ ಮೇಲಿನ ಶಿವಭಕ್ತರಿಗೆ ನೆರವಾಗಲು ಅವತಾರ ಎತ್ತಿಬರುವ ರಚನಾಕ್ರಮವನ್ನು ಹೊಂದಿವೆ.

ಅಧ್ಯಾಯ : ಐದು

ಯಾದಗಿರಿ ಪರಿಸರದ ಮೊಹರಂ ಪದಗಳಲ್ಲಿ ಸಾಮಾಜಿಕ ಪ್ರಜ್ಞೆ

ಸಾಮಾಜಿಕ ಎನ್ನಬಹುದಾದ ಅಂಶಗಳು ಬರುತ್ತವೆ. ಆದರೂ ಅವು ಇಲ್ಲಿರುವ ಸಾಮಾಜಿಕ ಹಾಡಿನಷ್ಟು ಆತ್ಮೀಯವಾಗಿ ನಮ್ಮನ್ನು ಆಕರ್ಷಿಸಲಾರವು. ಈ ಸಾಮಾಜಿಕ ಹಾಡುಗಳು ಜನರ ನೇರ ಬದುಕಿನಲ್ಲಿ ಇರುವಂತಹ ಸಮಸ್ಯೆಗಳನ್ನು ಒಳಗೊಂಡಿವೆ. ಇಲ್ಲಿರುವ ಪಾತ್ರಗಳು ಸಹ ಈ ಜನರ ಬದುಕಿನಿಂದ ಬಂದಂತಹವು. ಯಾದಗಿರಿ ಭಾಗದ ಸಾಮಾಜಿಕ ಹಾಡುಗಳಲ್ಲಿ ಪ್ರಮುಖವಾಗಿ ಸೋಮರಾಯ ಮತ್ತು ಭೀಮರಾಯರ ಹಾಡು ಪ್ರಸಿದ್ಧಿಯಾಗಿದೆ. ಈ ಹಾಡಿನ ಮುಖ್ಯ ಸಾರ ಈ ರೀತಿಯಿದೆ.

ಒಂದು ಗ್ರಾಮದಲ್ಲಿ ಸೋಮರಾಯ ಭೀಮರಾಯರೆಂಬ ಗೆಳೆಯರಿದ್ದರು. ಕುಸ್ತಿ ಪಟುಗಳಾದ ಅವರು ಗರಡಿಯಲ್ಲಿಯೇ ಭೇಟಿಯಾದವರು. ಅವರು ಒಬ್ಬರ ಮನೆ ಮತ್ತೊಬ್ಬರು ನೋಡಿರಲಿಲ್ಲ. ಒಂದು ದಿನ ಅಕಸ್ಮಾತ್ತಾಗಿ ಭೀಮರಾಯನ ಹೆಂಡತಿಯನ್ನು ಸೋಮರಾಯನು ಕಾಣುತ್ತಾನೆ. ಅವನಿಗೆ ಅವಳ ಮೇಲೆ ಮನಸಾಗುತ್ತದೆ. ಅವಳನ್ನು ಕೂಡಿ ಸುಖಪಡಬೇಕು ಎಂದು ಉತ್ಕಟ ಆಸೆಯಾಗುತ್ತದೆ. ಈ ಸಂಗತಿಯನ್ನು ಸೋಮರಾಯನು ತನ್ನ ಜೀವದ ಗೆಳೆಯನಾದ ಭೀಮರಾಯನಿಗೆ ಹೇಳಿಕೊಳ್ಳುವನು. ಇದನ್ನು ಕೇಳಿದ ಭೀಮರಾಯನಿಗೆ ಸಿಡಿಲು ಬಡಿದಂತಾಗುತ್ತದೆ. ಅವನು ಒಳಗೊಳಗೆ ಚಡಪಡಿಸುತ್ತಾನೆ. ಆದರೆ ಹೊರಗೆ ಮಾತ್ರ ಏನೂ ಆಗಿಲ್ಲವೆಂದು, ಇದನ್ನು ಸುಲಭವಾಗಿ ಈಡೇರಿಸಬಹುದು ಎಂದು ಗೆಳೆಯನಿಗೆ ಆಶ್ವಾಸನೆ ಕೊಡುತ್ತಾನೆ. ಆದರೆ ಗೆಳೆಯನ ಆಸೆಯನ್ನು ಹೇಗೆ ಈಡೇರಿಸಬೇಕೆಂದು ಚಿಂತೆಯೊಳಗೆ ಮನೆಗೆ ಬರುತ್ತಾನೆ. ಎಂದೂ ಇಲ್ಲದ ಗಂಡ ಇಂದೇಕೆ ಚಿಂತೆಯೊಳಗಿರುವನೆಂದು ಬಗೆದು ಅವನ ಹೆಂಡತಿ ಕೇಳುತ್ತಾಳೆ.

ಚಿಂತೆ ಒಳಗ ಗಂಡನ । ನೋಡಿದವಳಲ್ಲ
ಆಡ್ರಾಸಿ ಕೇಳುತಾಳಲ್ಲ । ಯಾಕೆ ಬಾಡ್ಯಾವ್ರಿ ಗಲ್ಲ

ಹೆಂಡತಿ ಪ್ರೀತಿಯಿಂದ ಬಂದು ಕೇಳಿದಾಗ ಭೀಮರಾಯನು ತನ್ನ ಮಾತೊಂದನ್ನು ನಡೆಸಿ ಕೊಡುವುದಾದರೆ ಹೇಳುವನೆನ್ನುತ್ತಾನೆ. ಗಂಡನ ಮಾತು ಕೇಳಿದವಳೆ

ಹಾರಿಹೋಗಿ ಹಿಡಿದಾಳ್ರಿ ಗಂಡನಾಲಾ
ಅದೇ ನಿಮ್ಮದು ಲ್ಯಾಜನಮಗ ತೋಲಾ
ಮೀರಂಗಿಲ್ರಿ ನಿಮ್ಮ ವಚನ ಮದಲಾ।

ಎಂದು ಹೇಳುತ್ತಾಳೆ. ಆಗ ಭೀಮರಾಯನು ವಚನ ಕೊಡು ಎನ್ನುತ್ತಾನೆ. ಆಕೆ ಕೈಮೇಲೆ ಕೈಹಾಕಿ ವಚನ ನಡೆಸಿಕೊಡುವನೆಂದು ಹೇಳುತ್ತಾಳೆ. ಆಗ ಭೀಮರಾಯ ನಡೆದ ಸಂಗತಿಯನೆಲ್ಲ

ವಿವರಿಸಿ, ಇವತ್ತಿನ ರಾತ್ರಿ ನನ್ನ ಜೀವದ ಗೆಳೆಯನ ಜೊತೆ ಭೋಗ ಕೊಡಬೇಕೆಂದು ತಿಳಿಸುವನು. ಆಗ ಆಕೆಗೆ ಆದ ಆಘಾತವನ್ನು ಜನಪದ ಕವಿ ಹೀಗೆ ವರ್ಣಿಸುವನು:

ನಾರಿ ಕೇಳಿ ಜೀಂವ ಅಂದಿತೋ ಝಲ್ಲಾ
ಎನ್ನ ಪ್ರೇಮದ ನಲ್ಲ ಹಿಂಥಾದ್ದೇಳಣಿದಿಲ್ಲಾ
ಬಹಳ ರಂಜಿಲಿ ರಾಜಿ ಆದಳಲ್ಲ ಬಾಗಿದಿಲ್ಲ.

ಆ ರಾತ್ರಿ ಊರೊಳಗಿನ ಎಲ್ಲ ಜನ ಉಂಡು ಮಲಗಿಕೊಂಡ ಮೇಲೆ ಭೀಮರಾಯ ತನ್ನ ಆತ್ಮೀಯ ಗೆಳೆಯನಾಗಿರುವ ಸೋಮರಾಯನನ್ನು ಕರೆದುಕೊಂಡು ತನ್ನ ಮನೆಗೆ ಬಿಟ್ಟು ಹೊರಟುಹೋಗುತ್ತಾನೆ. ಆದರೆ ಮನೆಯಲ್ಲಿ ತೂಗು ಬಿದ್ದಿರುವ ಖಡ್ಗಗಳಿಂದಲೂ ಬಟ್ಟೆಬರೆಗಳಿಂದಲೂ ಇದು ತನ್ನ ಸ್ನೇಹಿತನಾದ ಭೀಮರಾಯನ ಮನೆ ಎಂಬುದು ಸೋಮರಾಯನಿಗೆ ಗೊತ್ತಾಗುತ್ತದೆ. ಗೊತ್ತಾಗುತ್ತಲೆ ಇಂಥ ದೇವರಂತಹ ಗೆಳೆಯನ ಮೇಲೆ ನಾನೆಂಥ ಅನ್ಯಾಯ ಬಗೆಯಲಿಕ್ಕೆ ಬಂದಿರುವೆನಲ್ಲ ಎಂದವನೇ ಅಲ್ಲಿರುವ ಖಡ್ಗದಿಂದ ಹೊಡೆದುಕೊಂಡು ಅವನು ಪ್ರಾಣ ಬಿಡುತ್ತಾನೆ. ತನ್ನ ಗಂಡನಿಗೆ ಕೊಟ್ಟ ಮಾತು ನಡೆಸಿಕೊಡಲು ಆಗಲಿಲ್ಲವಲ್ಲ ಎಂದು ನೊಂದ ಭೀಮರಾಯನ ಹೆಂಡತಿಯೂ ಅದೇ ಖಡ್ಗದಿಂದ ಹೊಡೆದುಕೊಂಡು ಸಾಯುತ್ತಾಳೆ. ಸೂರ್ಯ ಹುಟ್ಟುವ ಹೊತ್ತಿಗೆ ಬಂದು ನಡೆದುದೆಲ್ಲ ನೋಡಿದ ಭೀಮರಾಯನಿಗೆ ಇವರೇ ಹೀಗಾದ ಮೇಲೆ ನಾನೇಕೆ ಉಳಿಯಬೇಕೆಂದೆನಿಸುತ್ತದೆ. ಅವನು ಅದೇ ಖಡ್ಗದಿಂದ ಹೊಡೆದುಕೊಂಡು ಪ್ರಾಣ ನೀಗುತ್ತಾನೆ. ಆಗ ದೇವರು ಇಳಿದು ಬಂದು ಮೂವರಿಗೂ ಮರಳಿ ಜೀವಕೊಡುತ್ತಾನೆ. ಈ ಕಥೆಯ ಕೊನೆಯಲ್ಲಿ ಕವಿ ಹೇಳುವ ಮಾತುಗಳು ಹೀಗಿವೆ:

ಇದ್ದರಿರಬೇಕು ಹಿಂಥ ಗೆಳೆಯರಾ । ಇಲ್ಲದಿದ್ದರೆ ಬೇಕಾರ
ಈಗಿನ ಗೆಳೆಯೇರ । ಮತಲಾಪಿ ಇರುವುದೋ ತೋಲ
ಮ್ಯಾಲೆ ಮಾತಾಡುತ ತುಳಿವರು ಕಾಲಾ । ದೋಸ್ತಿ
ಇದ್ದರೇನು ಫಲ । ಹಾವಿಗಿ ಇದ್ದಂಥ ಇಸದ ಹಲ್ಲಾ.

ಈ ಹಾಡಿನಲ್ಲಿ ಈಗಿರುವ ಗೆಳೆಯರಲ್ಲಿ ಇಂತಹ ತ್ಯಾಗಭಾವ ಇಲ್ಲವೆಂಬ ಟೀಕೆಯಿಲ್ಲ. ಜನಪದ ಹಾಡುಗಳಲ್ಲಿ ಸಾಮಾನ್ಯವಾಗಿ ಹಿಂದಿನ ಕಾಲವು ಹೆಚ್ಚು ಶ್ರೇಷ್ಠವಾದುದು. ವರ್ತಮಾನದ ಕಾಲವು ಮೌಲ್ಯಗಳ ದೃಷ್ಟಿಯಿಂದ ಪತನಗೊಂಡಿದ್ದು ಎಂಬ ನಿಲುವು ಕಾಣುತ್ತದೆ. ಇದು ಯಾಕೆಂದು ತಿಳಿಯುವುದಿಲ್ಲ. ಆದರೆ ಹಾಗೆ ಯಾವುದೋ ಒಂದು ಕಾಲದಲ್ಲಿ ಮೌಲ್ಯಗಳೂ ಕುಸಿಯುತ್ತವೆ ಎಂದು ಸಾಮಾನ್ಯೀಕರಿಸಿ ಹೇಳುವುದು ಉಚಿತವೆನಿಸುವುದಿಲ್ಲ.

ಈ ಹಾಡಿನಲ್ಲಿ ಸೋಮರಾಯನ ಭೀಮರಾಯನ ಸ್ನೇಹವು ಸಮಾಜದಲ್ಲಿ ಇರಬೇಕಾದ ಶ್ರೇಷ್ಠ ಮೌಲ್ಯವೆಂಬಂತಹ ರೀತಿಯಲ್ಲಿ ವ್ಯಕ್ತವಾಗುತ್ತದೆ. ಇಂತಹ ಸ್ನೇಹದ ಮಾದರಿಗಳು ದುಡಿಯುವ ಜನರಲ್ಲಿ ಸಾಮಾನ್ಯವಾಗಿ ಇರುತ್ತವೆ. ಇದಕ್ಕೆ ಯಾದಗಿರಿ ಸೀಮೆಯು ಹೊರತಲ್ಲ. ಇದು ಮೊಹರಂ ಹಾಡಿಗೆ ಸಂಬಂಧಪಡದೆ ಇದ್ದರೂ, ಇದರಲ್ಲಿರುವ ಮೌಲ್ಯಗಳು ಮೊಹರಂ ಹಾಡುಗಳ ಮೌಲ್ಯಗಳಾಗಿವೆ. ಅಂದರೆ ಅನ್ಯರಿಗೆ ತಮ್ಮ ಪ್ರಾಣವನ್ನು ತ್ಯಾಗ ಮಾಡುವ ಪ್ರಸಂಗಗಳು ಮೊಹರಂ ಹಾಡುಗಳಲ್ಲಿ ಸಾಮಾನ್ಯವಾಗಿ ಬರುತ್ತವೆ. ಇವು ಹಸೇನ್ ಹುಸೇನರ ತ್ಯಾಗದ ಪ್ರಸಂಗವನ್ನು ನೆನಪಿಸುತ್ತವೆ. ಈ ಹಾಡು ಸಾಮಾಜಿಕವಾದ ಹಾಡಾದರೂ ಕೊನೆಯಲ್ಲಿ ದೇವರು ಪ್ರತ್ಯಕ್ಷವಾಗು ಅಲೌಕಿಕ ಪ್ರಸಂಗವು ಬರುತ್ತದೆ. ಇದರ ಧ್ವನ್ಯಾರ್ಥವು ಮನುಷ್ಯರಲ್ಲಿ ನಂಬಿಕೆ ಇಟ್ಟವರಿಗೆ ದೇವರು ಕೈಬಿಡುವುದಿಲ್ಲ ಎಂಬುದೇ ಆಗಿದೆ.

ಮೊಹರಂ ಸಂಪ್ರದಾಯದಲ್ಲಿ ಹಾಡಲಾಗುವ ಸಾಮಾಜಿಕ ಹಾಡುಗಳಲ್ಲಿ ಸ್ತ್ರೀಯರ ಶೀಲಕ್ಕೆ ಸಂಬಂಧಪಟ್ಟ ಸಂಗತಿಯು ಸಾಮಾನ್ಯವಾಗಿ ಇರುತ್ತದೆ. ಅದರಲ್ಲಿ ಹೆಣ್ಣಿನ ಪಾತಿವ್ರತ್ಯದ ರಕ್ಷಣೆಯೇ ಮುಖ್ಯ ಸಂಗತಿಯಾಗಿರುತ್ತದೆ. ಗಂಗಾಬಾಯಿ ಮತ್ತು ಕಾಸೀಬಾಯಿಯ ಪದಗಳಲ್ಲೂ ಇದೇ ಆಶಯವಿದೆ. ಕೋಮಟಿಗನ ಚೆನ್ನುಳ್ಳ ಚೆಲುವೆಯಾದ ಗಂಗಾಬಾಯಿ ಎನ್ನುವ ಹೆಂಡತಿಗೆ ಕಾಮುಕ ಜನ ಗಂಟುಬಿದ್ದು ಕೋಮಟಿಗನನ್ನು ಕೊಲ್ಲುವ ಪ್ರಸಂಗ ಅದರಲ್ಲಿ ಬರುತ್ತದೆ. ಮೊದಲಿಗೆ ಕಾಮುಕರು ಒಬ್ಬ ಮುದುಕಿಯನ್ನು ಕಳಿಸಿ ಆಕೆಗೆ ಬೆಳ್ಳಿ ಬಂಗಾರದ ಆಸೆ ತೋರಿಸುವರು. ಆದರೆ ಗಂಗಾಬಾಯಿ ಇದಕ್ಕೆ ಮಣಿಯುವುದಿಲ್ಲ. ಕಾಮುಕರಿಂದ ಪಾರಾಗಲು ಗಂಡ ಹೆಂಡತಿ ಕೂಡಿ ನಸುಕಿನಲ್ಲಿ ಊರುಬಿಟ್ಟು ಹೋಗುವ ನಿರ್ಧಾರ ಮಾಡುತ್ತಾರೆ. ಆದರೆ ಕಾಮುಕರು ಬೆನ್ನು ಹತ್ತುವರು. ದುಷ್ಟರು ಕುದುರೆ ಏರಿ ಹತ್ತಿರ ಬರುತ್ತಿದಂತೆ ಗಂಗಾಬಾಯಿ ಅಡವಿಯ ಕಂಟಿ ಕಮರಿಯೊಳಗೆ ಗಂಡನನ್ನು ಮುಚ್ಚಿಡುವಳು. ಆದರೆ ದೇವರ ಮೇಲೆ ಆಣೆಯಿಟ್ಟು ನಿನ್ನ ಗಂಡನಿಗೆ ಏನು ಮಾಡುವುದಿಲ್ಲವೆಂದು ಹೇಳಿದಾಗ ಆಕೆ ನಂಬಿ ಗಂಡನಿಗೆ ಹೊರಗೆ ಕರೆದಾಗ ತಕ್ಷಣವೇ ಅವನನ್ನು ಕಡಿದು ಹಾಕುವರು. ಆಗ ಗಂಗಾಬಾಯಿ ದೇವರ ಹೆಸರೆತ್ತಿ ಗೋಳಾಡುವಳು. ಆಗ–

ಅಷ್ಟರೊಳಗೆ ನಬೀಸಾಹೇಬರ ಆಗಿತೆಚ್ಚರ
ಮ್ಯಾಲಿಂದೆ ಇಳದಾನ್ರಿ ಸರದಾರಾ
ಕಂಡ ಕ್ಷಣಕೆ ಅವರಿಬ್ಬರಿಗೆ ಕಡದಾರಾ
ರುಂಡ ಹಾರಿಸಿ ಬಿಟ್ಟಾರೋ ಚದ್ರ ಚುದರಾ

ಮುಂದೆ ನಬೀಸಾಬರು ಗಂಗಾಬಾಯಿ ಗಂಡನಿಗೆ ಜೀವದಾನ ಮಾಡುವರು. ಇಲ್ಲಿನ ನಬಿಸಾಹೇಬರು ಭಕ್ತರಿಗೆ ಕಷ್ಟಬಂದಾಗ ನೆರವಿಗೆ ಬರುವ ಶಿವನ ಕೆಲಸವನ್ನು ಮಾಡುವುದು ಗಮನಾರ್ಹ. ಇಲ್ಲಿ ಚಾರಿತ್ರಿಕ ಪುರುಷರಾದ ನಬೀಸಾಹೇಬರು (ಪೈಗಂಬರರು) ಭಾರತದ ದೈವಿಕ ಪುರಾಣ ದೇವತೆಯಾದ ಶಿವನ ರೂಪಾಂತರ ಪಡೆಯುವಂತೆ ತೋರುತ್ತದೆ.

ಈ ಹಾಡಿನಲ್ಲಿ ಕೂಡ ಸೋಮರಾಯ ಭೀಮರಾಯನ ಕತೆಯಲ್ಲಿ ಆದಂತೆ, ಹೆಣ್ಣಿನ ಪಾವಿತ್ರ್ಯವು ಉಳಿಯುವುದು ಗಮನಾರ್ಹವಾಗಿದೆ. ಮೊಹರಂ ಹಾಡುಗಳನ್ನು ಸಾಮಾನ್ಯವಾಗಿ ಹಾಡುವವರು ಗಂಡಸರು. ಹೀಗಾಗಿ ಸಹಜವಾಗಿ ಗಂಡಸರಿಗೆ ಪ್ರಿಯವಾದ ಪಾತಿವ್ರತ್ಯ ಮುಂತಾದ ಸಂಗತಿಗಳನ್ನು ಈ ಹಾಡುಗಳು ಒಳಗೊಂಡಿವೆ. ಇವನ್ನು ಸ್ತ್ರೀವಾದದ ದೃಷ್ಟಿಯಿಂದ ಅಧ್ಯಯನ ಮಾಡುವ ಸಾಧ್ಯತೆಗಳು ಇನ್ನೂ ಆರಂಭವಾಗಬೇಕಿದೆ.

ಕಾಶಿಬಾಯಿಯ ಹಾಡಿನಲ್ಲಿ ಇದೇ ತರಹ ಪ್ರಸಂಗವಿದೆ. ಗಂಡನ ಮನೆಗೆ ಹೊರಟಂಥ ಕಾಶಿಬಾಯಿಗೆ ರೈಲ್ವೆ ಟಿಕೀಟ್ ಮಾಸ್ತರನು ಕಾಡುತ್ತಾನೆ. ಆಗ ಆಕೆ ತನ್ನ ಮಗನನ್ನು ಕಳಕೊಂಡರೂ ತನ್ನ ಶೀಲ ಮತ್ತು ಪಾತಿವ್ರತ್ಯವನ್ನು ಉಳಿಸಿಕೊಳ್ಳುವಳು. ಇನ್ನೊಂದು ಹಾಡಿನಲ್ಲಿ ಮಕ್ಕಳಿಲ್ಲದ ಸಾಹುಕಾರನು ಒಬ್ಬ ಬಡವಿಯನ್ನು ಮದುವೆ ಮಾಡಿಕೊಂಡು, ಆಕೆ ಗಂಡು ಮಗುವನ್ನು ಹೆತ್ತಾಗ ಹಡೆಯಲಾರದ ಬಂಜೆ ಸವತಿಯು ಆ ಮಗುವಿಗೆ ಸುಡುಸುಡುವ ಔಡಲಎಣ್ಣೆಯನ್ನು ಹಾಕಿ ಕೊಲ್ಲುವ ಪ್ರಸಂಗವಿದೆ. ಮೊಹರಂ ಕವಿಗಳು ತಮ್ಮ ಸುತ್ತ ಮುತ್ತಲಿನ ಬದುಕಿನಲ್ಲಿ ನಡೆದ ಪ್ರಸಂಗಗಳನ್ನು ವಸ್ತುವಾಗಿ ಆರಿಸಿಕೊಂಡು ಆಡುಮಾತನ್ನೇ ಕಾಸಿ ಬಡಿದು ಕಾವ್ಯ ಕಟ್ಟುವರು. ಅವರ ಕವಿತಾ ಚಾತುರ್ಯ ಅಪೂರ್ವವಾದುದು. ಮಧುರ ದಾಂಪತ್ಯದ ಕಲ್ಪನೆ, ಸ್ತ್ರೀಧರ್ಮದ ಮಹಿಮೆ, ಆಧುನಿಕತೆಗೆ ಸ್ಪಂದಿಸುವ ಉಪದೇಶಾಮೃತ, ಸಾವಿನಲ್ಲೂ ದೇವರನ್ನು ಕಾಣುವ ಭಕ್ತನ ಅಚಲ ನಂಬಿಕೆ, ಪರಬದುಕಿನ ಬಗೆಗಿರುವ ವಿಶ್ವಾಸ, ತಾಯಿಯ ಅಮರ ಪ್ರೇಮ, ಗುರು ಹಿರಿಯರಲ್ಲಿ ಭಕ್ತಿ ಸೌಹಾರ್ದಭಾವ ಮೊದಲಾದವು ಮೊಹರಂ ಹಾಡುಗಳಲ್ಲಿರುವ ಸಾಮಾಜಿಕ ಗೀತೆಗಳ ವಸ್ತುಗಳಾಗಿವೆ.

ಯಾದಗಿರಿ ಭಾಗದ ಮೊಹರಂ ಹಾಡುಗಳಲ್ಲಿ ಮಹಿಳೆಯರು ಮತ್ತೆಮತ್ತೆ ಬರುತ್ತಾರೆ. ಧೈರ್ಯ ತೋರುವ ಮಹಿಳೆಯರು ಬರುತ್ತಾರೆ. ಆಧುನಿಕತೆ ಆಕರ್ಷಕವಾಗಿ ಕೆಟ್ಟುಹೋದ ಮಹಿಳೆಯರು ಬರುತ್ತಾರೆ. ಕಾಮದ ಒತ್ತಡಕ್ಕೆ ಸಿಲುಕಿ ಅನ್ಯೆತಿಕವಾಗುವ ಮಹಿಳೆಯರು ಬರುತ್ತಾರೆ. ಇದರಲ್ಲಿ ಅಣ್ಣತಂಗಿಯರ ಹಾಡು ವಿಶಿಷ್ಟವಾಗಿದೆ.

ಸಭಾ ನೋಡಿ ಖುಷಿಯಾಯಿತು ನನಗೆ ಇದೆ ಕ್ಷಣ
ಬರದಾರ ಬಂದಿನಿ ನಾ ನಿಮ್ಮ ಮಗನ ।
ಇರಲಿ ನಿಮ್ಮ ಕರುಣಾ ।
ನೀವೇ ನನ್ನ ತಾಯಿ ತಂದಿ ಉಣಿಸಿರಿ ತನ್ನ
ಹೇಳುವೆ ನಿರಜೀವಿ ಊರ ವರ್ತಮಾನ ।
ಶ್ರೀಮಂತ ಒಬ್ಬ ಇದ್ದ ಬಾರಿ ದೈವಾನಾ ।
ಎರಡು ಸಂತಾನ ಹೆಸರಿತ್ತು ಸೋಮಣ್ಣ ತಂಗಿ ಸುವರ್ಣ
ಪ್ರಾಯಕ್ಕೆ ಬಂದಾಳು ತಂಗಿ ಸುವರ್ಣ ಮನೆಯೊಳಗ ।
ಇರಬಾರದು ಮೈ ನೆರದ ಹೆಣ್ಣ ಎದೆ ಮ್ಯಾಲಿನ ಹುಣ್ಣ ।
ಗುಣವಿಲ್ಲದ ಹೆಣ್ಣು ಚೆಲುವಿದ್ದರೇನು ।
ಅಣ್ಣನೆಂಬುವದು ಜರ ಇಡಲಿಲ್ಲೊ ಖೂನ ।
ಎಂಬ ಬಹುಮಾನ ।
ಕಾಸ ಅಣ್ಣನ ಮೇಲೆ ಇಟ್ಟ್ಯಾಳೋ ಕಣ್ಣಾ ।
ಮಲಿಗ್ಯಾನ ತನ್ನ ಖೋಲಿ ಒಳಗ ಸೋಮಣ್ಣ ।

ನಮ್ಮ ಸಮಾಜದ ಸಂಪ್ರದಾಯದ ಪ್ರಕಾರ ಅಣ್ಣ–ತಂಗಿಯರ ನಡುವೆ ಆಪ್ತ ಸಂಬಂಧವು ಇದೆ. ಆದರೆ ಅದು ದೈಹಿಕ ಆಕರ್ಷಣೆಯೂ ಆಗಬಹುದು ಎಂಬುದನ್ನು ಇದು ಸೂಚಿಸುತ್ತದೆ. ಆದರೆ ಯಾವುದೇ ಇಂತಹ ಸಂಪ್ರದಾಯಕ್ಕೆ ವಿರುದ್ಧವಾದ ವರ್ತನೆಯು ಹೆಣ್ಣಿನ ಕಡೆಯಿಂದಲೇ ಆರಂಭವಾಗುತ್ತದೆ ಎಂಬುದುಈ ಹಾಡಿನ ಆಶಯವಾಗಿದೆ. ತಂದೆಯು ತನ್ನ ಮಗನ ಮೇಲೆ ಕೋಪ ಮಾಡಿಕೊಂಡು ಅವನನ್ನು ಕೊಲ್ಲಲು ನಿರ್ಧರಿಸುತ್ತಾನೆ. ಕೊಲ್ಲುವುದಕ್ಕೆ ಕತ್ತಿ ತರಲು ಹೋದ ತಂಗಿಗೆ ಹಾವು ಕಚ್ಚುತ್ತದೆ. ಆಕೆ ಸತ್ಯ ಹೇಳಿ ತನ್ನ ಅಣ್ಣ ನಿರಪರಾಧಿ ಎಂದು ಸತ್ಯ ಹೇಳಿ ಪ್ರಾಣ ಬಿಡುತ್ತಾಳೆ. ಇದೇ ರೀತಿ ಶೃಂಗಾರದ ಆಸೆ ವಿಪರೀತವಾಗಿ ಆಪತ್ತು ತಂದುಕೊಂಡ ಹೆಣ್ಣಿನ ಹಾಡಿದೆ. ಗಂಡ ತಂದುಕೊಟ್ಟ ಹೊಸ ಪೋಲಕ(ಕುಪ್ಪಸ)ವನ್ನು ಕುತೂಹಲದಿಂದ ಧರಿಸಿ, ಸೀರೆಯೇ ಇಲ್ಲದೆ ಬೀದಿಯಲ್ಲಿ ಹೋಗುವ ಮಹಿಳೆಯನ್ನು ಈ ಹಾಡು ವಿಡಂಬಿಸುತ್ತದೆ. ಮೊಹರಂ ಹಾಡುಗಳಲ್ಲಿ ಅತಿಯಾದ ವ್ಯಾಮೋಹ ಆಸೆಗಳನ್ನು ಮಾಡುವವರು ಸಾಮಾನ್ಯವಾಗಿ ಮೊಹರಂ ಹಾಡುಗಳಲ್ಲಿ ಮಹಿಳೆಯರೇ ಆಗಿದ್ದಾರೆ. ಇದು ಯಾದಗಿರಿ ಭಾಗದ ಮಹಿಳೆಯರ ಮನೋಭಾವವನ್ನು ಸೂಚಿಸುತ್ತದೆಯೊ, ಮಹಿಳೆಯರನ್ನು ಕುರಿತ ಪುರುಷರ ಸಾಂಪ್ರದಾಯಕ ಮನೋಭಾವನ್ನು

ಸೂಚಿಸುತ್ತದೆಯೊ ತಿಳಿಯುವುದಿಲ್ಲ. ದುಡ್ಡಿಗಾಗಿ ಅಣ್ಣನನ್ನ ಕೊಲ್ಲಲು ಯತ್ನಿಸುವ ತಂಗಿಯನ್ನು ಕುರಿತ ಹಾಡನ್ನು ಇಲ್ಲಿ ನೋಡಬಹುದು. ಪೌಡರ್, ಹಚ್ಚಿಕೊಂಡು ಕೈಯಲ್ಲಿ ಕೆಂಪುವಸ್ತ್ರ (ದಸ್ತಿ) ಹಿಡಿದುಕೊಂಡು ಒಯ್ಯಾರ ಮಾಡುತ್ತಾ ಗಂಡನಿಗೆ ಕೈಕೊಡುವ ಹೆಣ್ಣಿನ ಹಾಡಲ್ಲೂ ಇದೇ ಧೋರಣೆ ನೋಡಬಹುದು. ತಾಯ್ತಂದೆಗಳಿಗೆ ಕೆಟ್ಟು ಹೆಸರು ತರುವ ಹೆಣ್ಣುಗಳ ಹಲವಾರು ಕತೆಗಳು ಇಲ್ಲಿ ಬರುತ್ತವೆ.

ಆದರೆ ತಮ್ಮ ಹೆಣ್ಣುಮಕ್ಕಳಿಗಾಗಿ ಕಷ್ಟಪಡುವ ತಂದೆಯರಿರುವಂತೆಯೇ, ತಮ್ಮ ತಂದೆತಾಯಿಗಳ ಸಣ್ಣತಪ್ಪಿನಿಂದ ಕೊಲೆಯಾಗುವ ಹೆಣ್ಣುಮಕ್ಕಳ ಹಾಡುಗಳೂ ಇವೆ. 'ಸಾವಿರಸುಳ್ಳು ಹೇಳಿ ಒಂದು ಮದುವೆ ಮಾಡು' ಎನ್ನುವ ಗಾದೆ ಮಾತಿನಂತೆ ಒಂದು ಹಾಡಿನಲ್ಲಿ ಒಬ್ಬ ತಂದೆ ತನ್ನ ಮಗಳಿಗೆ ಮದುವೆ ಮಾಡುತ್ತಾನೆ. ವರದಕ್ಷಿಣೆಯನ್ನು ಕೊಡುವುದಾಗಿ ಹೇಳಿ ಮದುವೆ ಮಾಡಿ, ಮದುವೆ ನಂತರ ಕೊಡಲಾಗದೇ ಅಸಹಾಯಕನಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಗಂಡನ ಮನೆಯವರು ಆಕೆಗೆ ವರದಕ್ಷಿಣೆಯನ್ನು ತರಲು ಹೇಳಿ ಅವಳು ತರದೇ ಇರುವಾಗ ಅವಳನ್ನು ಕೊಲ್ಲುತ್ತಾರೆ. ನಂತರ ಸರಕಾರವು ಅವರಿಗೆ ಶಿಕ್ಷೆ ನೀಡುತ್ತದೆ. ಗಾಯಕ ಹಾಡನ್ನು ಹೀಗೆ ಆರಂಭಿಸುತ್ತಾನೆ:

ಕೇಳಾರಿದ್ಯೆವ ಇದು ಒಂದು ಕವನಾ ।
ಹೌದು ಅಲ್ಲಾ ಮಾಡ್ರಿ ನೀವು ಕಲ್ಪನಾ ।
ಕೊಡುವುದ್ಯೆತಿ ಒಂದು ಹೆಣ್ಣಾ ।
ಅಂದರೆ ಕೇಳಾರಿ ಜನಾ ।
ಎಷ್ಟು ಕೊಡುತೀರಿ ಹಣ ।
ಎಂದು ಬೀಗರು ಬರುತಾರಣ್ಣ।
ವರದಕ್ಷಿಣೆಯ ಹುಚ್ಚು ಹೆಚ್ಚಾತು ಕೇಳಿರಣ್ಣ ।

ಇಲ್ಲಿರುವ ಕಲ್ಪನೆಯಲ್ಲ ಎಂಬ ಮಾತು, ನಡೆದ ಘಟನೆಯನ್ನು ಆಧರಿಸಿ ಕವಿಯು ಪದ ರಚಿಸಿರುವುದನ್ನು ಸೂಚಿಸುತ್ತದೆ. ಮೊಹರಂ ಕವಿಗಳು ಕೇವಲ ಚರಿತ್ರೆ ಮತ್ತು ಪುರಾಣಕ್ಕೆ ಸಂಬಂಧಪಟ್ಟ ವಸ್ತುಗಳನ್ನು ಹಾಡುವುದಿಲ್ಲ. ಅವರು ತಮ್ಮ ಸುತ್ತಮುತ್ತ ನಡೆಯುವ ಘಟನೆಗಳಿಗೆ ಕಣ್ಣುಕಿವಿಮನಸ್ಸು ತೆರೆದು ಅಲ್ಲಿನ ವಾಸ್ತವಿಕತೆ ಆಧರಿಸಿ ಹಾಡು ಕಟ್ಟುವವರು. ಇದು ಮೊಹರಂ ಕವಿಗಳ ಸಮಕಾಲೀನ ಪ್ರಜ್ಞೆಯನ್ನು ಸೂಚಿಸುತ್ತದೆ. ಹೀಗಾಗಿ ಮೊಹರಂ ಒಂದು ಬಗೆಯಲ್ಲಿ ಸಾಮಾಜಿಕ ಎಚ್ಚರವನ್ನು ಪಡೆಯುವ ಆಚರಣೆಯೂ ಆಗಿದೆ.

ಮೊಹರಂ ಹಾಡುಗಳು ಒಂದು ಬಗೆಯಲ್ಲಿ ಬಡವರ ಹಾಡುಗಳು. ದುರ್ಬಲ ಅಸಹಾಯಕ ವ್ಯಕ್ತಿಗಳ ನೋವು ನಲಿವುಗಳೇ ಈ ಹಾಡುಗಳ ಆಶಯವಾಗಿದೆ. ಬಡತನದಲ್ಲಿ ಇರುವ ವ್ಯಕ್ತಿಯ ಹೋರಾಟ, ಅವನಿಗೆ ದೈವ ಒಲಿಯುವುದು, ಅವನು ಶ್ರೀಮಂತನಾಗುವುದು ಈ ಆಶಯವುಳ್ಳ ಹಾಡುಗಳು ಈ ಭಾಗದ ಜನರ ಮನಸ್ಸಿನ ಪ್ರತಿಬಿಂಬವಾಗಿವೆ. ವರದಕ್ಷಿಣೆಯ ಹಾಡಿನಲ್ಲಿ ಬಡವನ ಕಷ್ಟವನ್ನು ಕವಿ ಮನಮರುಗುವಂತೆ ಚಿತ್ರಿಸುವುದನ್ನು ಗಮನಿಸಬಹುದು.

ಒಂದು ಊರಾಗ ಇದ್ರೋ ಸತಿಪತಿನಾ ।
ಮೂರು ಹೆಣ್ಣಮಕ್ಕಳು ಹುಟ್ಯಾವಣ್ಣ
ಮುತ್ತಿನಂಥ ಮೂರು ಹೆಣ್ಣು ಪ್ರಾಯಕ್ಕೆ ಬಂದಾವಣ್ಣಾ ।
ಎರಡು ಮಕ್ಕಳ ಲಗ್ನ ಹ್ಯಾಂಗೋ ಮಾಡ್ಯಾರಣ್ಣಾ ।
ಮುತ್ತಿನಂಥ ಇನ್ನೊಂದು ಮಗಳು । ಮನಿಯಾಗೈತಿ ಕೇಳ್ರಾಜನಾ
ಅಷ್ಟರೊಳಗೋ ತಾಯಿ ಬಿಟ್ಟಾಳೋ ಪ್ರಾಣ.
ಹಣ ಯಾಕೆ ತರಲಿಲ್ಲವೆಂದ ಗಂಡ ಹಲುಕಡಿದಾನ ।
ಎದಿಗೆ ಹಾರಿವದಾನ ।
ಕೈಕಾಲು ಕಟ್ಯಾನ । ಎಣ್ಣೆ ಹಾಕಿ ಹಚ್ಚಿ ಬೆಂಕಿ ಬಾಗಿಲು ಮುಚ್ಚ್ಯಾನಾ ।
ಬಡವರ ಹೆಣ್ಣಿನ ಬಾಳು ಹಿಂಗ ಐತಿ ನೋಡಿರಣ್ಣಾ ।
ಮುತ್ತಿನಂಥಾ ಮುತ್ತೈದು ಮಗಳಿನ್ನಾ । ತಡಪಿ ತಡಪಿ ಬಿಟ್ಟಾಳೋ ಪ್ರಾಣಾ ।

ಈ ಸಾಮಾಜಿಕ ಪ್ರಜ್ಞೆಯ ಪದಗಳು ಲಾವಣಿಯ ಧಾಟಿಯಲ್ಲಿ ರಚಿತವಾಗಿವೆ. ಮೊಹರಂ ಹಬ್ಬದಲ್ಲಿ ಹಾಡುವುದರಿಂದ ಇವುಗಳನ್ನು ಮೊಹರಂ ಪದಗಳೆಂದು ಕರೆಯಲಾಗುತ್ತಿದೆ. ಆದರೆ ಮೊಹರಂಗೆ ಸಂಬಂಧಿಸಿದ ಯಾವ ಅಂಶಗಳೂ ಈ ಪದಗಳಲ್ಲಿ ದೊರೆಯುವುದಿಲ್ಲ. ಹೆಚ್ಚೆಂದರೆ ಇಸ್ಲಾಂ, ಮತದ ಒಂದೆರಡು ಹೆಸರು, ಶಬ್ದಗಳು ಬಳಕೆಯಾಗಿರುತ್ತವೆ. ಯಾದಗಿರಿ ತಾಲ್ಲೂಕಿನ ರಿವಾಯಿತ ಪದಗಳೆಂದರೆ, ಲಾವಣಿ ಧಾಟಿಯ ಸಾಮಾಜಿಕ ಪದಗಳನ್ನೆ ಹಾಡುವರು. ಕೆಲವೊಂದು ಪದಗಳಲ್ಲಿ ಪವಾಡ ಘಟನೆಗಳು ಆಕ್ರಮಿಸಿಕೊಂಡಿರುವುದುಂಟು. ವಿಭಾಗದ ಸಮಾಜದಲ್ಲಿಯ ಅನುಭವಗಳನ್ನು ಕಂಡುಂಡ ಜನಪದ ಕವಿ ತನಗೆ ಆತ್ಮೀಯವಾಗುವ ರೀತಿಯಲ್ಲಿ ಶಬ್ದಗಳನ್ನು ಬಳಸಿ ಹೇಳುವನು. ಇವು ಕೇಳುಗರ ಮನ ಪ್ರವೇಶಿಸುತ್ತವೆ. ಕೇಳುವ ಜನರು ಇವನ್ನು ಮೊಹರಂಗೆ ಹೊರತಾದ ಹಾಡುಗಳೆಂದು ಭಾವಿಸುವುದಿಲ್ಲ. ಹಾಡುಗಾರರು ಕೂಡ ಇವು ಹಬ್ಬಕ್ಕೆ ಪರಕೀಯ ಎಂದು ಭಾವಿಸುವುದಿಲ್ಲ. ಇದೇ ತರಹ ಸಾಮಾಜಿಕ ಪದಗಳಲ್ಲಿ ಅತ್ತೆ–ಸೊಸೆ ಪದ, ಮುಂಗ್ಲಿಮರಿ

ಪದ, ಪೋಲಕಾರ ಪದ, ಚಹದಂಗಡಿ ಪದ, ಕಲಿಯುಗದಾಟ ಮುಂತಾದವುಗಳನ್ನು ಸೇರಿಸುತ್ತಾ ಹೋಗಬಹುದು. ಇವುಗಳಲ್ಲಿ ಸತಿಪತಿಯ ಪದಗಳು ಬಹಳ ಸ್ವಾರಸ್ಯಕರವಾಗಿವೆ.

ಒಂದು ಊರಲ್ಲಿ ಸತಿ–ಪತಿಗಳಿದ್ದರು. ಮಕ್ಕಳಿಲ್ಲದೆ ಕೊರಗುತ್ತಿದ್ದರು. ಹೆಣ್ಣು ಜೀವ ದಿನವೂ ಬಂಜೆಯ ಬಿರುದು ಹೊತ್ತು ದುಃಖಿಸುತ್ತಿತ್ತು. ಇದನ್ನು ಕಂಡು ಗಂಡ ಬ್ಯಾಡರ ಸಿದ್ದಣ್ಣನಿಂದ ಮುಂಗಸಿ ಮರಿಯನ್ನು ಮೂರು ರೂಪಾಯಿ ಕೊಟ್ಟು ಕೊಂಡುತರುತ್ತಾನೆ. ಹೊಟ್ಟೆಯಲ್ಲಿ ಹುಟ್ಟಿದ ಮಗನಂತೆ ನೋಡಿಕೊಳ್ಳಲು ಹೇಳಿದ ಹೆಂಡತಿಗೆ ಆಗ–

ಮುಂಗ್ಲಿಯ ಕಾಲ್ಗುಣ ಇತ್ತೊ ಸುಭಲಕ್ಷಣಾ
ಅವರಿಗೆ ಸಂತಾನ ಕೊಟ್ಟಾನೊ ಭಗವಾನಾ
ಹುಟ್ಟಿತೋ ಒಂದು ರಚನಾ/ಮುಂಗ್ಲಿ ಕೂಸಿಗೆ ಒಂದೇಸವನಾ
ಮಾಡ್ಯಾದೋ ಜೋಪಾನ। ತಿಳಕೋರಿ ನೀವು ಇದರ ವರ್ತಮಾನ
ಅಣ್ಣತಮ್ಮರು ಇಬ್ಬರು ಕೂಡಿ ಆಡ್ತಾರೋ ಸಂಜಿನಾ
ಮುಂಗ್ಲಿ ಕೂಸಿಗೆ ನೋಡಿ ಇನ್ನು ಕುಸಿ ಆಗ್ಯಾಳೋತಾನಾ
ಹೋಯಿತಾಕೀಗಿ ಈಬ ಬಂಜಿತಾನಾ
ಉಗುರುಕಣ್ಣಾಗಾ ರೇಗಿ ಉಲ್ಲಾಸ ಆಗ್ಯಾದಣ್ಣಾ,

ಹೀಗಿದ್ದಾಗ ಒಂದುದಿನ ಗಂಡ ಯಾವುದೋ ಕೆಲಸಕ್ಕೆಂದು ಹೊರಗೆ ಹೋಗಿದ್ದಾಗ ಕೂಸಿನ ತಾಯಿ ನೀರಿಗೆಂದು ಹೊರಟಳು. ಹೋಗುವಾಗ ಮುಂಗ್ಲಿಮರಿಗೆ– ತಮ್ಮ ತೊಟ್ಟಿಲಿದಲ್ಲಿ ಮಲಗಿರುವನು ನೋಡುತ್ತಿರು ಎಂದು ಹೇಳುವಳು. ತೊಟ್ಟಿಲ ಮ್ಯಾಲಿನ ಸರ್ಪ ಹಗ್ಗ ಹಿಡಿದು ಕೆಳಗಿಳಿದು ಬರುತ್ತಿರುವುದನ್ನು ಕಂಡು, ಮುಂಗ್ಲಿಮರಿ, ಇದಕ್ಕೆ ಏನು ಮಾಡಲೇನೆಂದು ಚಿಂತಿಸಿ–

ನೆಟಕ್ಕೆ ಏರಿಯನ್ನು ಹಾರಿತೋ ಹೌಸಾಣಾ
ಸರ್ಪನ ಹಿಡಿದು ಓಗ್ಗಿ ಜೋಲಿ ಹೊಡೆದು ಬಿದ್ದಿತೋ ಕುಸ್ತಿನಾ
ತುಣಕ ತುಣಕ ಮಾಡಿತೋ ಸರ್ಪನಾ
ಬಾಯಿಯಲ್ಲಿ ರಕ್ತರವ ಮಾಡಲಾಗ್ಯಾದಣ್ಣಾ
ಐತೋ ಗುಲಾಬಿ ಬಣ್ಣಾ.

ಇಷ್ಟೆಲ್ಲಾ ಆಗುವುದರಲ್ಲಿ ಕೂಸಿನ ತಾಯಿ ನೀರು ತುಂಬಿಕೊಂಡು ಬಂದಳು. ಮುಂಗ್ಲಿಮರಿಯ ಬಾಯಿ ಕೆಂಪಾಗಿದ್ದನ್ನು ಕಂಡು ಕೂಸಿನ್ನ ಕೊಂದು ಘಾತಮಾಡಿತೆಂದು ಬಗೆದು ತುಂಬಿದ ಕೊಡವನ್ನು

ಮುಂಗ್ಲಿಯ ಮೇಲೆ ಒಗೆಯುವಳು. ಮುಂಗ್ಲಿ ಮರಿ ಅಸುನೀಗುತ್ತದೆ. ಆಕೆ ಅಳುತ್ತಾ ಚೀರುತ್ತಾ ತೊಟ್ಟಿಲ ಬಳಿ ಹೋಗಿ ನೋಡಲು ಕಾಲು ಬಡಿದು ಕೂಸು ಆಡುತ್ತಿರುತ್ತದೆ. ಪಕ್ಕದಲ್ಲಿ ಸರ್ಪಸತ್ತು ಬಿದ್ದಿರುತ್ತದೆ. ತನ್ನ ತಪ್ಪಿನ ಅರಿವಾದ ಆಕೆ ಪರಿತಾಪ ಪಡುತ್ತಾಳೆ. ಕಷ್ಟದಲ್ಲಿ ಅಸಹಾಯಕರಿದ್ದಾಗ, ದೇವರು ಬಂದು ಕಾಪಾಡುವಂತೆ, ಮುಂಗ್ಲಿಮರಿ ಕೂಡ ಇಲ್ಲಿ ದೇವರ ಸ್ವಭಾವವನ್ನು ಪಡೆದುಕೊಂಡಿದೆ. ಇದು ಜನಪದ ಕವಿತೆಯ ಚಾಣಾಕ್ಷತೆಯನ್ನು ಹಾಗೂ ಮನೋಧರ್ಮವನ್ನು ಪ್ರತಿಬಿಂಬಿಸುತ್ತದೆ. ಇಲ್ಲಿ ಕೂಡ ಮುಂಗ್ಲಿಮರಿ ಮನೆಯ ಮಗುವಿನಂತೆ ಕರೆಸಿಕೊಳ್ಳುತ್ತದೆ.

ಹಾಯ್ ಹಾಯ್ ಮಗನೆ ಕೊಲ್ಲೀದೆ ನಿನ್ನನಾ
ನಾವೆಂತೆ ಬೇಮಾನಾ ಮುಂಗಲೀಗೆ ತೊಡಿಮ್ಯಾಲ ಹೈಕೋಣಾ
ದುಃಖ ಮಾಡಿ ಅಳತಾಳೋ ಒಂದೇ ಸವನಾ
ಎಲ್ಲಿ ದೊರತೀದೋ ಮಗನಾ
ನಿನ್ನ ಗುಣ ನಾನ ಎಲ್ಲಿ ತೊಳಕಲ್ಲೊ ಮಗನಾ
ನಿನ ಗೂಡ ನನ್ನಿಟ್ರ ಮಣ್ಣ ತಪ್ಪದಿಲ್ಲೊ ನಿನ್ನರುಣಾ
ರಿಣಗೇಡಿ ಆದೇನೋ ಕಡಿತನಾ
ತಪ್ಪ ಮಾಡದಕೀಗ ತಕ್ಕ ಸಿಗ್ಸೆಯೇನಾ।
ಆದರೂ ಈಗಾರು ಮಾಡಿದ್ರು ಬಂತೇನಾ।

ಈ ರೀತಿ ದುರಂತವಾಗಿ ಮುಂಗ್ಲಿಮರಿ ಪದ ಮುಕ್ತಾಯಗೊಳ್ಳುತ್ತದೆ. ಈ ಪದದಲ್ಲಿ ಮುಂಗ್ಲಿಮರಿಯನ್ನು ಮಗನಾಗಿ ಸಾಕುವುದು, ತಮ್ಮನನ್ನು ನೀನು ನೋಡಿಕೋ ಎಂದು ಹೇಳುವುದು, ತೊಡೆ ಮೇಲೆ ಹಾಕಿಕೊಂಡು ಕೂಸಿನ ತಾಯಿ ರೋದಿಸುವುದು – ಇವೆಲ್ಲ ಜಾನಪದ ಸಾಹಿತ್ಯದಲ್ಲಿ ಸಾಮಾನ್ಯವಾಗಿ ಕಾಣುವ ಆಶಯಗಳು. ಹದಿನೇಳು ನುಡಿಯ ಮುಂಗ್ಲಿ ಮರಿ ಪದವು ಯಾದಗಿರಿ ತಾಲ್ಲೂಕಿನ ಎಲ್ಲ ಕಡೆ ಕಂಡುಬರುವುದಿಲ್ಲ. ೧೫ ಸಾಲಿನ ಹೆಜ್ಜೆ ಪದದಲ್ಲಿ ಮುಂಗಲಿ ದೇವರ ಸೇವಾ ಮಾಡುತ್ತಿತ್ತೆಂದೂ, ಮುಂಗಲಿ ಭಾವಕ್ಕೆ ಭಗವಾನ ಅದರ ಸಾಕುತಂದೆ ತಾಯಿಗಳಿಗೆ ಸಂತಾನ ಕೊಟ್ಟನೆಂದೂ ಹೇಳಲಾಗಿದೆ. ಆದರೆ ಮೂಲ ಗದ್ಯಕಥೆಯಲ್ಲಿ ಈ ಆಶಯವಿಲ್ಲ. ಈ ಪದವು ಪ್ರಾಣಿಗಳು ಸಹ ಮನುಷ್ಯನ ಸಹಾಯಕ್ಕೆ ಬರುವಂತೆ ಮತ್ತು ಮನುಷ್ಯನಂತೆ ಅವು ಸಹ ಬಾಳುವಂತೆ ಚಿತ್ರಣವನ್ನು ಒಳಗೊಂಡಿದೆ. ಈ ಹಾಡಿನಲ್ಲಿ ಮಗುವನ್ನು ಕಳೆದುಕೊಂಡು ಅಳುವ ತಾಯಿಯ ಪ್ರಸಂಗವು ಮೊಹರಂ ಯುದ್ಧದಲ್ಲಿ ಮಡಿದ ವೀರರಿಗೆ ಅವರ ಸಂಬಂಧಿಕರು ನೆನೆಸಿಕೊಂಡು ಅಳುವುದನ್ನು ನೆನಪಿಸುತ್ತದೆ.

ಅಧ್ಯಾಯ : ಆರು

ಯಾದಗಿರಿ ಪರಿಸರದ ಮೊಹರಂ ಪದಗಳಲ್ಲಿ ಐತಿಹಾಸಿಕ ಪ್ರಜ್ಞೆ

ಅಧ್ಯಾಯ : ಆರು

ಯಾದಗಿರಿ ಪರಿಸರದ ಮೊಹರಂ ಪದಗಳಲ್ಲಿ ಐತಿಹಾಸಿಕ ಪ್ರಜ್ಞೆ

ದೇಶಕ್ಕಾಗಿ, ಸಮಾಜ ಸುಧಾರಣೆಗಾಗಿ, ತಮ್ಮನ್ನು ಸವೆಸಿಕೊಂಡ ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆಗಳ ಸುತ್ತ ಹೆಣೆದ ಹಾಡುಗಳನ್ನು ಮೊಹರಂ ಹಬ್ಬದ ಸಂದರ್ಭದಲ್ಲಿ ಹಾಡಲಾಗುವುದು. ಅವನ್ನು ರಿವಾಯತ ಪದಗಳೆಂದು ಕರೆಯುವರು. ಇವು ಸಾಮಾನ್ಯವಾಗಿ ಚಾರಿತ್ರಿಕ ವ್ಯಕ್ತಿಗಳನ್ನು ಕುರಿತವಾಗಿರುತ್ತವೆ. ಈ ಪದಗಳಲ್ಲಿ ಸಿಂಧೂರ ಲಕ್ಷ್ಮಣ, ಸಂಗೊಳ್ಳಿ ರಾಯಣ್ಣ, ಟಿಪ್ಪುಸುಲ್ತಾನ, ಬೆಳವಡಿ ಮಲ್ಲಮ್ಮ, ಕಿತ್ತೂರು ಚೆನ್ನಮ್ಮ, ನರಗುಂದ ಬಾಬಾಸಾಹೇಬ, ಜವಾಹರಲಾಲ ನೆಹರು, ಲಾಲ್ ಬಹದ್ದೂರ್ ಶಾಸ್ತ್ರಿ, ಮಹಾತ್ಮ ಗಾಂಧಿ, ಜಿನ್ನಾ ಸಾಹೇಬ, ಅಂಬೇಡ್ಕರ್ ಮುಂತಾದವರನ್ನು ಕುರಿತ ಪದಗಳು ಪ್ರಮುಖವಾಗಿವೆ. ಇವು ಒಂದು ಬಗೆಯಲ್ಲಿ ಜನಪದರು ಕಟ್ಟಿಕೊಂಡ ಮೌಖಿಕ ಇತಿಹಾಸವೆನ್ನಬಹುದು. ಇತಿಹಾಸದಲ್ಲಿ ಅಲೌಕಿಕ ಸಂಗತಿಗಳನ್ನು ಸೇರಿಸಿ, ಧಾರ್ಮಿಕ ಪುರಾಣದ ರೂಪಕೊಡುವುದು, ಜನಪದ ಕವಿಗಳ ಒಂದು ಲಕ್ಷಣವಾಗಿದೆ. ಇದನ್ನು ಚರಿತ್ರೆಯ ಪೌರಾಣೀಕರಣ ಎಂದು ಕರೆಯಬಹುದು. ದೊಡ್ಡದೊಂದು ಶಕ್ತಿಯ ವಿರುದ್ಧ ಹೋರಾಡಿ ಹುತಾತ್ಮರಾಗಿರುವ ಚರಿತ್ರೆಯ ನಾಯಕರನ್ನು ಕಂಡರೆ, ಮೊಹರಂ ಗಾಯಕರಿಗೆ ಬಹಳ ಇಷ್ಟ. ಉದಾಹರಣೆಗೆ ಟಿಪ್ಪುಸುಲ್ತಾನ, ಗಾಂಧಿ, ಸಿಂಧೂರ ಲಕ್ಷ್ಮಣ, ಸುರಪುರದ ವೆಂಕಟಪ್ಪ ನಾಯಕ, ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ ಮುಂತಾದವರು ಶತ್ರುವಿನ ಕೈಗೆ ಸಿಕ್ಕು ಹುತಾತ್ಮರಾದವರು. ಎದುರಾಳಿಯ ಮೋಸದಿಂದ ದುರಂತ ಸಾವನ್ನು ಕಂಡವರು. ಟಿಪ್ಪುವನ್ನು ಕುರಿತ ಒಂದು ಹಾಡು ಹೀಗೆ ಶುರುವಾಗುತ್ತದೆ.

ಸೃಷ್ಟಿವೊಳಗ ನರ ಸುಳಾತ
ಯುದ್ಧದೊಳಗ ರಣಶೂರಯೀತ
ಟಿಪ್ಪು ಸುಲ್ತಾನ ಮಾತ ! ಇಡಿರಿ ಖ್ಯಾಲಾ

ಇಡೀ ಹಾಡು ಟಿಪ್ಪು ಸುಲ್ತಾನನ ಬಾಲ್ಯದ ಲೀಲೆಗಳನ್ನು ಹೇಳುತ್ತಾ ಹೋಗುತ್ತದೆ. ಒಮ್ಮೆ ಟಿಪ್ಪು ವಯಸ್ಸಿಗೆ ಬಂದಾಗ ಕುದುರೆ ಹತ್ತಿ ಫೇರಿ ತಿರುವುತ್ತ ಹೊರಟನು. ಇವನ ರೂಪಕ್ಕೆ ಮರುಳಾದ ಪೂರ್ಣಯ್ಯನ ಮಗಳು ಆತನನ್ನೇ ಮದುವೆಯಾಗುವುದಾಗಿ ಹಠ ಹಿಡಿಯುವ ಮಗಳ ಮಾತಿಗೆ ಕಟ್ಟು ಬಿದ್ದು ಬ್ರಾಹ್ಮಣ ಪೂರ್ಣಯ್ಯ ಟಿಪ್ಪುವಿನಲ್ಲಿಗೆ ಹೋಗಿ ಮದುವೆಯ

ಪ್ರಸ್ತಾಪವಿಡುತ್ತಾನೆ. ಆದರೆ ಟಿಪ್ಪು ನಿರಾಕರಿಸುತ್ತಾನೆ. ನಂತರ ಪೂರ್ಣಯ್ಯನು ಅಪಮಾನಗೊಂಡು ಟಿಪ್ಪುವಿನ ಮೇಲೆ ಸೇಡುತೀರಿಸಿಕೊಳ್ಳುವ ಪ್ರತಿಜ್ಞೆ ಮಾಡುತ್ತಾನೆ. ಅದರಂತೆ ಬ್ರಿಟಿಶರು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದಾಗ ಮೋಸದಿಂದ ಟಿಪ್ಪುವಿನ ಪ್ರಾಣ ಅಪಹರಿಸಿದನು ಆ ಪದವು ಹೇಳುತ್ತದೆ.

ಸಾಮಾನ್ಯವಾಗಿ ಈ ಚರಿತ್ರೆಯ ಹಾಡುಗಳು ದುರಂತದಲ್ಲಿ ಮುಗಿಯುತ್ತವೆ. ಮೊಹರಂ ಯುದ್ಧದ ನಾಯಕರು ಸಹ ದುರಂತನಾಯಕರೇ ಆಗಿರುವರು. ಎರಡೂ ಕಡೆ ಯುದ್ಧದ ಪ್ರಸಂಗಗಳಿವೆ. ಹಸೇನ್ ಹುಸೇನರೇ ಭೂಮಿಯ ಮತ್ತೊಂದು ಜನ್ಮ ತಾಳಿ ಟಿಪ್ಪುಸುಲ್ತಾನನಾಗಿ ಹುಟ್ಟಿರಬೇಕೆಂಬುದು ಈ ಗಾಯಕರ ಅಭಿಪ್ರಾಯವಿದ್ದಂತಿದೆ. ಇಲ್ಲಿ ಟಿಪ್ಪು ಬ್ರಿಟಿಷರ ವಿರುದ್ಧ ಮಾಡುವ ಯುದ್ಧವು ಕರ್ಬಲಾ ಯುದ್ಧಕ್ಕೆ ಸಮೀಕರಣಗೊಳ್ಳುತ್ತದೆ. ಇದೇ ರೀತಿಯಲ್ಲಿ ಸಂಗೊಳ್ಳಿರಾಯಣ್ಣ, ಅಭಿಮನ್ಯು ಕುರಿತ ಹಾಡುಗಳು ಕೂಡ ಯುದ್ಧಭೂಮಿಗೆ ಸಂಬಂಧಪಟ್ಟವು.

ಚಾರಿತ್ರಿಕ ವೀರರನ್ನು ಕುರಿತ ಈ ಹಾಡುಗಳು ಮೊಹರಂ ಪರಂಪರೆಗೆ ಪೂರಕವಾಗಿಯೇ ಸೃಷ್ಟಿಯಾಗಿವೆ. ಇವುಗಳಲ್ಲಿ ಒಂದು ರಾಜಕೀಯ ಉದ್ದೇಶವೂ ಇರಬಹುದು. ಧಾರ್ಮಿಕ ಭಾವನೆಯಿಂದ ಬಹಳದೊಡ್ಡ ಸಂಖ್ಯೆಯ ಜನರು ಸೇರುವ ಮೊಹರಮ್ಮಿನಲ್ಲಿ ಈ ಹಾಡುಗಳನ್ನು ಹಾಡುವ ಉದ್ದೇಶವು ಬ್ರಿಟೀಶರ ವಿರೋಧದ ಹೋರಾಟದ ಒಂದು ಭಾಗವಾಗಿರಬಹುದು. ಪರಕೀಯರ ಆಕ್ರಮಣವನ್ನು ತಡೆಯುವುದಕ್ಕಾಗಿ ತಮ್ಮ ನಾಡನ್ನು ದಾಸ್ಯದಿಂದ ಬಿಡುಗಡೆ ಮಾಡುವುದಕ್ಕಾಗಿ ತಮ್ಮ ಪ್ರಾಣವನ್ನೇ ಅರ್ಪಿಸಿಕೊಂಡ ಐತಿಹಾಸಿಕ ವ್ಯಕ್ತಿಗಳು ಇವರು. ಇವರ ಸುತ್ತ ಹೆಣೆದ ಪದಗಳಿಗೆ ಕೇವಲ ಧಾರ್ಮಿಕ ಕಾರಣವಿತ್ತೆಂದು ಭಾವಿಸುವುದು ಕಷ್ಟ.

ತಮ್ಮ ಧೈರ್ಯ ಸಾಹಸಗಳಿಂದ ಜನಪದ ಕವಿಗಳ ಎದೆಯನ್ನು ತಟ್ಟಿದ ಅನೇಕ ವೀರಪುರುಷರ ಪದಗಳು ಕನ್ನಡದಲ್ಲಿ ದೊರೆಯುತ್ತವೆ. ಈ ವೀರಪುರುಷರು ಜನಸಾಮಾನ್ಯರ ಚರಿತ್ರೆಯ ಕಲ್ಪನೆಯಿಂದ ಎದ್ದು ಬಂದವರು. ಇವರಲ್ಲಿ ಸುರಪುರದ ವೆಂಕಟಪ್ಪ ನಾಯಕನೂ ಒಬ್ಬನು. ಅವನನ್ನು ಕುರಿತ ಹಾಡನ್ನು ಸುರಪುರಕ್ಕೆ ಸಮೀಪವಿರುವ ಯಾದಗಿರಿ ಭಾಗದ ಮೊಹರಂ ಆಚರಣೆಯ ಸಂದರ್ಭದಲ್ಲಿ ಹಾಡಲಾಗುತ್ತದೆ. ವೆಂಕಟಪ್ಪನ ರೂಪ ಮತ್ತು ಸಾಹಸದ ವರ್ಣನೆ ಮಾಡುತ್ತ ಪದವು ಮುಂದುವರಿಯುತ್ತವೆ. ಅನಂತರ ವೆಂಕಟಪ್ಪನ ಕುಲ, ಸೌಂದರ್ಯ, ಶಕ್ತಿ, ಶೌರ್ಯ ಇತ್ಯಾದಿಗಳನ್ನು ಎಳೆ ಎಳೆಯಾಗಿ ಬಿಚ್ಚಿ ಹೇಳುತ್ತಾ ಪದ ಮುಂದುವರಿಯುತ್ತದೆ. ಮುಂದೆ ಗೌಡ, ಧನಿ ಮತ್ತು ವೆಂಕಟಪ್ಪರ ಮಧ್ಯೆ ವೈಮನಸ್ಸುಂಟಾಗಿ ಅವರಿಂದ ವೆಂಕಟಪ್ಪನು ಸಿಡಿದು ನಿಂತು ದರೋಡೆ ಮಾಡಲಾರಂಭಿಸುತ್ತಾನೆ. ಇಲ್ಲಿಂದ ಅವನ ವೀರ ಜೀವನ ಪ್ರಾರಂಭವಾಗುತ್ತದೆ. ಬ್ರಿಟೀಷ್ ಸರಕಾರ, ವಾರೆಂಟು ಹೊರಡಿಸಿ ಅವನನ್ನು ಹಿಡಿದು ಜೈಲಿಗೆ ಹಾಕುತ್ತದೆ.

ಪೋಲೀಸ ಸಾಹೇಬರಾ ಮನಿ ಸುತ್ತ ಹಾಕಿ ಗೇರಾ

ಮಾಡ್ಯಾರೋ ಗೋಲಿಯಾ ಬಾರಾ ಜನರೆಲ್ಲಾ

ಬಸ್ಯಾ ಎಂಬುವ ಶೂರಾ ಪೋಲೀಸರ ಮ್ಯಾಲೆ ಪೈರಾ

ಮಾಡ್ಯಾನೋ ಎರಡು ಬಾರಾ ಬಡಿಲಿಲ್ಲಾ

ಶೂರಮನ್ನಾ ಸಾಹೇಬ ಬಸ್ಯಾಗ ಇಟ್ವಾನೋ ನೆದರಾ

ಮಾಡ್ಯಾನೋ ಒಬ್ಬಗ ಪೈರಾ

ಸುತ್ತಾನೆಲ್ಲಾ ಪೋಲೀಸ ಜನರಾ ಗೋಲಿಯ ಬಾರಾ

ಅಳತಿ ಇದ್ದಿದಿಲ್ಲಾ

ಪೋಲೀಸರಿಂದ ತಪ್ಪಿಸಿಕೊಂಡು ವೆಂಕಟಪ್ಪ ಮತ್ತು ಜೊತೆಗಾರರು ಓಡಿಹೋಗುವರು. ಬ್ರಿಟಿಷ್ ಪೋಲೀಸರಿಂದ ತಪ್ಪಿಸಿಕೊಂಡು ಹೋಗುವಾಗ ವೆಂಕಟಪ್ಪನ ಶೌರ್ಯ ಸಾಹಸವನ್ನು ಜನಪದ ಕವಿ ಮನುದುಂಬಿ ವರ್ಣಿಸುತ್ತಾನೆ. ಇಂಗ್ರೇಜಿ ಸರಕಾರ ಕೈಯಾರ ಯಾರು ಪಾರಾಗುವುದಿಲ್ಲ ಎನ್ನುವ ಮಾತು ಅಂದಿನ ಜನಸಾಮಾನ್ಯರ ಅಭಿಪ್ರಾಯವನ್ನು ಪ್ರತಿಬಿಂಬಿಸುವಂತಿದೆ.

ಐತಿಹಾಸಿಕ ಹಾಡುಗಳಲ್ಲಿ ಸ್ಥಳೀಯತೆಯು ಮುಖ್ಯವಾಗಿ ಬರುತ್ತದೆ. ಯುದ್ಧಕ್ಕೆ ಸ್ಥಳೀಯ ಕಾರಣಗಳನ್ನು ಹಾಡು ಕೊಡುತ್ತದೆ. ಈ ಐತಿಹಾಸಿಕ ಹಾಡುಗಳಲ್ಲಿ ಬಹುಭಾಷೆಯ ಬಳಕೆಯನ್ನು ಕವಿಗಳು ಮಾಡುತ್ತಾರೆ. ಪೋಲಿಸ್, ಇಂಗ್ಲಿಷ್ ಮುಂತಾದ ಇಂಗ್ಲಿಷ್ ಪದಗಳು, ಪೈರಾ, ಗೇರ ಮುಂತಾದ ಉರ್ದು ಪದಗಳು ಕನ್ನಡ ಭಾಷೆಯ ಹಾಡುಗಳಲ್ಲಿ ಸಹಜವಾಗಿ ಬೆರೆತುಹೋಗಿವೆ. ಮೊಹರಂ ಗಾಯಕರು ತಮ್ಮ ಸುತ್ತಮುತ್ತ ನಡೆಯುವ ಘಟನೆಗಳನ್ನು ವಸ್ತುವನ್ನಾಗಿಟ್ಟುಕೊಂಡು ಹಾಡುಗಳನ್ನು ರಚಿಸುತ್ತಾರೆ. ತಮ್ಮ ಪರಿಸರದ ಐತಿಹಾಸಿಕ ಘಟನೆಯನ್ನು ವಸ್ತುವಾಗಿಸಿಕೊಂಡು ಪದ ರಚನೆ ಮಾಡುವ ಯತ್ನ ಇಲ್ಲಿ ಕಾಣಬಹುದಾಗಿದೆ.

ಮೊಹರಮ್ ಆಚರಣೆಗಳಲ್ಲಿ ಮೊಹರಂ ನಾಯಕರು ಕೊಲೆಯಾಗುವ ದಿನವನ್ನು ಖತಲ್ ರಾತ್ರಿ ಎಂದು ಕರೆಯುತ್ತಾರೆ. ಇದು ಒಂಬತ್ತನೆಯ ದಿನ ಬರುತ್ತದೆ. ಖತಲ್ ಎಂದರೆ ಕೊಲೆ ಎಂದರ್ಥ. ಈ ಚಾರಿತ್ರಿಕ ಹಾಡುಗಳು ಕೂಡ ಖತಲ್ ಆದವರ ಕತೆಗಳೇ ಆಗಿವೆ. ಯಾದಗಿರಿಗೆ ಸಮೀಪವಾಗಿ ಸುರಪುರವಿದೆ. ಹೀಗಾಗಿ ಸುರುಪುರದ ಇತಿಹಾಸವು ಮೊಹರಂ ಹಾಡುಗಳಲ್ಲಿ ಬಂದಿದೆ. ಸುರಪುರದ ವೆಂಕಟ್ಟಪ್ಪ ನಾಯಕನದೂ ಕೂಡ ದುರಂತ ಕಥೆಯೇ. ಅವನೂ ಮೊಹರಂ ನಾಯಕರ ಹಾಗೆ ಬಲಾಢ್ಯ ವೈರಿಯ ಎದುರು ಸೆಣಸಾಡಿದವನು. ತನ್ನ ಆತ್ಮಗೌರವ ಉಳಿಸಿಕೊಳ್ಳಲು

ಸಾವನ್ನು ಪಡೆದವನು.

ಮೊಹರಂ ಹಾಡುಗಳು ವಿಶೇಷತೆಯೆಂದರೆ ಯುದ್ಧದ ವೀರಗುಣವನ್ನು ಹಾಗೂ ಯುದ್ಧಾನಂತರದ ಶೋಕಾಚರಣೆಯನ್ನೂ ಒಟ್ಟಿಗೆ ಒಳಗೊಂಡಿರುವುದು. ಕರ್ಬಲಾ ಯುದ್ಧವು ಮಹಾಭಾರತದ ಯುದ್ಧದ ಹಾಗೆ. ಒಳ್ಳೆಯ ಪಾಂಡವರು ಮತ್ತು ಕೆಟ್ಟಕೌರವರು ಮುಖಾಮುಖಿಯಾಗುವ ಜಾಗ. ಕರ್ಬಲಾಯುದ್ಧವು ಬ್ರಿಟಿಷರ ವಿರುದ್ಧ ನಡೆದ ಸ್ವಾತಂತ್ರ್ಯ ಸಂಗ್ರಾಮದ ಹಾಗೆ. ಇಲ್ಲಿ ಆಕ್ರಮಣಕಾರಿ ಆಂಗ್ಲರು ಯಜೀದನಂತೆ. ತಮ್ಮ ನಾಡನ್ನು ಉಳಿಸಿಕೊಳ್ಳುವುದಕ್ಕಾಗಿ ತಮ್ಮ ರಾಜಕೀಯ ಹಕ್ಕನ್ನು ಮಂಡಿಸುವುದಕ್ಕಾಗಿ ಯತ್ನಿಸುವ ಸ್ಥಳೀಯ ವೀರರು, ಹುಸೇನರಂತೆ.

ಧರಮಕ ಸತ್ತವರಾ ಕೋಟಿಗೊಬ್ಬ ಜನರಾ
ಮುಸಲ್ಮಾನ ಮಂದ್ಯಾಗ ದೊರೀತಾರ ಹುಸೇನ ಸಾಹೇಬರಾ

ಏಜೀದನವತಾರಾ ನಡಸಿತೋ ಅಧಿಕಾರ ಭರಪೂರಾ
ನೋಡಲಾಗದ ಎದುರಾಗಿ ನಿಂತಾರೋ ಹಜರತ ಹುಸೇನರಾ
ಲಡಾಯಿ ತಯ್ಯಾರಾ ಅದಾರ ಒಂಟೆ ಮ್ಯಾಲೆ ಸ್ವಾರ
ಹೊಂಟ ನಿಂತಾರೋ ಕರ್ಬಲಾ ಭೂಮಿಗೆ ಬಂಧುಬಳಗ ಪೂರಾ
ಶರಣು ಹೋಗದವರಾ ಸ್ವರ್ಗಕ್ಕೆ ಹೋದಾರಾ ಹಜರತರಾ.

ಇಲ್ಲಿ ಕರ್ಬಲಾ ಯುದ್ಧವನ್ನು ಧರ್ಮಯುದ್ಧ ಎಂದು ಕರೆಯುವುದು ಗಮನಾರ್ಹ. ಪಾಂಡವರು ಕೌರವರು ಮಾಡಿದ ಯುದ್ಧವನ್ನೂ ಧರ್ಮಯುದ್ಧವೆಂದು ಗೀತೆಯು ಹೇಳುತ್ತದೆ. ನ್ಯಾಯಕ್ಕಾಗಿ ಹಕ್ಕಿಗಾಗಿ ದುರ್ಬಲರು ನಡೆಸುವ ಕದನದ ಬಗ್ಗೆ ಜನರಿಗೆ ಬಹಳ ಆದರವಿದೆ. ಆದ್ದರಿಂದ ಇಲ್ಲಿನ ಯುದ್ಧವು ಹಿಂಸೆಯ ವೈಭವೀಕರಣವಲ್ಲ. ಇದೊಂದು ವರ್ಗಹೋರಾಟ. ಈ ಹಾಡಿನಲ್ಲಿ, ಯಜೀದನದು ನಿರಂಕುಶ ಅಧಿಕಾರ ಎಂದು ಹೇಳಲಾಗಿದೆ. ಯಜೀದನ ಈ ಸರ್ವಾಧಿಕಾರಿ ಆಡಳಿತದ ವಿರುದ್ಧ ಹೋರಾಡುವ ಹುಸೇನರು ಒಂದು ಬಗೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರನಂತೆ ಕವಿಗೆ ಕಂಡಿರುವರು. ಬ್ರಿಟಿಶರ ವಿರುದ್ಧವೂ ಹೈದರಾಬಾದು ನಿಜಾಮರ ವಿರುದ್ಧವೂ ಜನ ಹೋರಾಟಗಳು ನಡೆಯುತ್ತಿದ್ದಾಗ ಈ ಬಗೆಯ ಮೊಹರಂ ಹಾಡುಗಳು, ಸಮಕಾಲೀನ ಆಶಯದಿಂದ ಕೂಡಿದ್ದವು ಮತ್ತು ಕೇಳುಗರಲ್ಲಿ ಒಂದು ಹೋರಾಟದ ಕಿಚ್ಚನ್ನು ಹಚ್ಚಿದವು ಎಂದು ಊಹಿಸಬಹುದು.

ಧೀನ್ ಧೀನಂತೆ ಹೊಂಟಾನಾ ಮೌಲಾ
ಚಾರಣರ ಧೂಲಾ, ಹರಸಿದ್ದಾರಲ್ಲಾ

ರಕ್ತದ ಕಾವಲಾ

ಎನ್ನುವ ಸಾಲಿನೊಂದಿಗೆ ಕರ್ಬಲಾ ಪದಗಳು ಆರಂಭಗೊಳ್ಳುವುವು. 'ಜಗಳವೆಂದರೆ ಹೋಳಿಗೆ ತುಪ್ಪವಲ್ಲ' ಎಂಬ ಗಾದೆಮಾತನ್ನು ಮೊಹರಂ ಕವಿ ಉಲ್ಲೇಖಿಸುವನು. ಮೊಹರಂ ಹಾಡುಗಳಲ್ಲಿ ಮೂರು ದುರಂತ ಪ್ರಸಂಗಗಳಿವೆ. ಅವೆಂದರೆ ಹುಸೇನರ ಸಾವು. ಕಾಶಿಮಸಾಬನ ಸಾವು ಮತ್ತು ಮಗು ಅಸಘರನ ಸಾವು. ಈ ಮೂರು ಪ್ರಕರಣಗಳು ಜನಪದ ಕವಿಗಳನ್ನು ಮತ್ತೆಮತ್ತೆ ಕಾಡಿವೆ. ಹೀಗಾಗಿ ಇವುಗಳ ಮೇಲೆ ಹಲವಾರು ಹಾಡುಗಳು ಹುಟ್ಟಿಕೊಂಡಿವೆ.

ಮೊದಲನೆಯದಾಗಿ ಇಮಾಮ ಹುಸೇನರ ಕೊಲೆಯ ಪ್ರಕರಣ. ಹುಸೇನರು ಏಜಿದನ ಸೈನ್ಯದ ಜತೆ ಹೋರಾಡುತ್ತಿರುವಾಗ ರಕ್ತದ ಕಾಲುವೆ ಹರಿಯುವುದನ್ನು ಕವಿ ಬಣ್ಣಿಸುವನು.

ಹೂಡಿತೋ ರಣಗಂಬ ಜಗಳ ಆರಂಭ ಲಡಾಯಿ ಆಯಿತೋ ಧುಮಸಾನಾ

ಒದರಿ ಹುಸೇನಾ ಕುದರಿ ಹೊಡೆಯಿತೋ ಕೆದರಿ ಅಲಾಗ ಯಜೀದನಾ
ಬೆದರಿ ಬ್ರಹ್ಮಾಂಡ ಆದುರಿ ಆಕಾಶ, ಉದುರಿ ಬಿದ್ದಾವ ತಾರಕಿನಾ
ಸ್ವರ್ಗದಾಗ ಜನ ನದರ ಹಚ್ಚಿ ನೋಡ್ಯಾರೋ ಲಡಾಯಿ ಕೇಳನ್ನ

ಈ ಯುದ್ಧವು ಕೇವಲ ನೆಲದ ಮೇಲಿನವರದಲ್ಲ. ಇದಕ್ಕೆ ಸ್ವರ್ಗದ ಜನರೂ ಸಾಕ್ಷಿಯಾಗಿದ್ದಾರೆ. ಯಾಕೆಂದರೆ ಇದು ನ್ಯಾಯಕ್ಕಾಗಿ ನಡೆಯುತ್ತಿರುವ ಧರ್ಮಯುದ್ಧವಾಗಿದೆ. ಆದರೆ ಕೊನೆಗೆ ರಣರಂಗದಲ್ಲಿ ಜಯಗಳಿಸಿದವನು ಯಜೀದನು. ಅಸುರೀಶಕ್ತಿಯ ಸಂಕೇತವೆಂದು ಗಾಯಕರು ಭಾವಿಸಿರುವ ಯಜೀದನಲ್ಲಿ ದಂಡು ಹೆಚ್ಚಿತ್ತು. ಜತೆಗೆ ಅವನು ಮೋಸ ಕುತಂತ್ರದಿಂದ ಕೊಲ್ಲುವ ಯೋಚನೆ ಮಾಡಿದನು. ಇದರಿಂದ ಅವನಿಗೆ ಜಯವಾಯಿತು ಎಂದು ಕವಿಯ ನಂಬಿಕೆ. ಯಜೀದ್ ರಣರಂಗಕ್ಕೆ ಬಂದವನೆ ಹಸ್ಸನ್ ಹುಸೇನರ ಜನಗಳಿಗೆ ನೀರು, ಅನ್ನ, ಆಶ್ರಯ ಸಿಗದಂತೆ ಮಾಡುತ್ತಾನೆ. ಕೆರೆ, ಬಾವಿ, ಹಳ್ಳ, ಹೊಳೆ, ಬತ್ತಿಸುತ್ತಾನೆ.

ಮೊಹರಂ ಹಾಡುಗಳಲ್ಲಿ ಎರಡನೆಯ ದುರಂತ ಪ್ರಕರಣವೆಂದರೆ ಹುಸೇನ ಸಾಹೇಬರ ಎಳೆಮಗು ಅಸಗರನ ಸಾವಿನದು. ಮಗು ನೀರಿಲ್ಲದೆ ಬಾಯಿಬತ್ತಿ ಗೋಳ್ಗರೆಯುತ್ತಿರುವಾಗ ಯಜೀದನು ನೀರು ಕೊಡುವುದಿಲ್ಲ.

ಕರುಣಾ ಬರಲಿಲ್ಲೊ ಏಜೀದಾಗ
ಹುಕುಮ ಕೊಟ್ಟಾನೋ ತನ ದಂಡಿಗಾ

ವೈರಿ ಬಂದು ನಿಂತಾ ಎದರಿಗಾ

ನೀರ ಕೊಡಬ್ಯಾಡ ಅಂತನೋ ಇವಗಾ

ಇಂಥ ಶಬ್ದ ಕೇಳಿ ಆ ಸ್ವಾಮಿಗಾ

ಗುಂಡು ಬಿಡದಂಗಾಯಿತ್ರಿ ಅವನ ಎದಿಯಾಗಾ

ಮುಂದೆ ವೈರಿಗಳ ಬಾಣದ ಹೊಡೆತಕ್ಕೆ ಕೂಸು ಸತ್ತು ಹೋಗುತ್ತದೆ. ಸತ್ತ ಕೂಸಿನ ತಾಯಿ ಶಹರಬಾನು ಅಳುವ ಶೋಕ ಗೀತೆಗಳು ಮೊಹರಂ ಹಾಡುಗಳಲ್ಲಿಯೇ ಕರುಣರಸದಿಂದ ಕುಡಿವೆ. ಕೂಸನ್ನು ನೋಡಿ ತಾಯಿ

ಬಾಳ ಪರಿಲಿಂದ ಸಲವಿದ ಪುತುರ

ತೊಟ್ಟಿಲಾಗ ಹಾಕಿ ನಾನು ತೂಗಿಲ್ಹಾರ

ಸುಮ್ಮನ ಮನಗ್ಯಾನ ಬಿಟ್ಟಿಸಿ ನನ್ ಖಬುರ

ಮಾರಿ ತರಿವಲ್ಲಾ ಮೊಲಿ ಕುಡಿವಲ್ಲ ಏನ ಜೀವಕೆ ಬಂತೂ ಪೂರಾ

ಷಡಕ್ಷರ ಕವಿಯ 'ರಾಜಶೇಖರ ವಿಳಾಸ'ದಲ್ಲಿ ಕುದುರೆಯ ಖುರಪುಟಕ್ಕೆ ಸಿಕ್ಕಿ ತನ್ನ ಮಗ ಶಂಕರನು ಸತ್ತಾಗ ತಿರುಕುಳ ವಿನಾಚಿಯು ಮಾಡುವ ರೋದನವು ಇಲ್ಲಿ ನೆನಪಿಗೆ ಬರುವುದು; ಇನ್ನೊಂದು ಹಾಡಿನಲ್ಲಿ ಕೂಡ ಎಳೆಗೂಸು ಸಾಯುವ ಪ್ರಸಂಗವು ಪರಿಣಾಮಕಾರಿಯಾಗಿ ಬಂದಿದೆ.

ಹುಸೇನಾ ಸಾಹೇಬನ ಮಗ ಅಸಗರ

ನೀರಲ್ದೆ ಬಂದು ಬಾಗಿ ಬಿದ್ದನ ಜೇಕ

ತಾಯಿ ಅಳತಾಳ । ಕಣ್ತುಂಬ ತಂದು ನೀರ

ಎಲ್ಲಿ ಹುಡುಕಾಲಿ । ಹೋಗಿ ನಾನು ಕಾಂತಾರ

ಈ ಹಾಡುಗಳು ತಾಯಿ ಮಕ್ಕಳ ಗಾಢಪ್ರೀತಿಯನ್ನು ಪ್ರಕಟಿಸುವಂತಹವು. ಈ ಮೊಹರಂ ಯುದ್ಧದ ಹಾಡುಗಳ ವಿಶೇಷತೆ ಎಂದರೆ, ಇಲ್ಲಿರುವ ನಾಟಕೀಯತೆ.

ಮೊಹರಂ ಹಾಡುಗಳಲ್ಲಿ ಮೂರನೆಯ ದುರಂತ ಪ್ರಸಂಗವೆಂದರೆ– ಕಾಸಿಮಸಾಬನ ಸಾವಿನದು. ಅಲಿ ಅಸಗರನಷ್ಟು ಕರುಣಾಜನಕ ಹಾಡಲ್ಲದಿದ್ದರೂ ಕಾಸೀಮ ಸಾಬನ ಪದವು ಸಹ ದುಃಖವನ್ನುಂಟು ಮಾಡುವ ಹಾಡಾಗಿದೆ. ಒಬ್ಬೊಬ್ಬ ವೀರನು ಯುದ್ಧದಲ್ಲಿ ಮಡಿಯುತ್ತ ಬಂದಾಗ ಹುಸೇನನ ಮಗ ಕಾಸೀಮಸಾಬ ಬಾಲಕನಾದಾರೂ ಯುದ್ಧಕ್ಕೆ ಸಿದ್ಧನಾಗುವನು. ಮದುವೆಯಿಲ್ಲದೆ ಯುದ್ಧದಲ್ಲಿ ಮಡಿದರೆ ಮೋಕ್ಷವಿಲ್ಲ. ಅದಕ್ಕಾಗಿ ರಣರಂಗದದಲ್ಲಿಯೇ ಬಿಡಾರ ಬಿಟ್ಟು ಡೇರೆಯಲ್ಲಿಯೇ ಖಡ್ಗ, ಭಲ್ಲೆ,

ಬಿಲ್ಲು, ಡಾಲು, ಭರ್ಚಿ, ಚೂರಿ, ತಲವಾರುಗಳ ಮಧ್ಯಯೇ ಅವನ ಮದುವೆ ಕಾರ್ಯ ನಡೆದು ಹೋಗುವುದು. ಎಲ್ಲೆಲ್ಲೂ ಹೆಣ್ಣು ಸಿಗದಾದಾಗ ಕಾಕಾ ಹುಸೇನ್ ಸಾಹೇಬನೇ ತನ್ನ ಮಗಳನ್ನು ಕೊಟ್ಟು ಲಗ್ನ ಮಾಡುವನು. ಆ ಚಿಕ್ಕ ಗಂಡ ಹೆಂಡತಿಯ ನಡುವೆ ನಡೆದ ಮಾತು ಕಥೆಗಳು ಅತೀ ಮಧುರ ಹಾಗೂ ದುಃಖದಾಯಕವಾಗಿದೆ.

ಮೊದಲು ಕಾಸೀಮನ ತಾಯಿ ಯುದ್ಧಕ್ಕೆ ಬೇಡ ಎಂದಾಗ ಕಾಸೀಮನಾಡುವ ಮಾತುಗಳಿವು:

ಬಂದದ್ದು ಬರಲಿ ಗುರುವಿನ ದಯ ಇರಲಿ
ಯಾಕ ಮಾಡಲಿ ತಾಯಿ ಅನುಮಾನಾ
ಸಾವಿರೊರಸಿದ್ದರೂ ಸಾವೊಂದಿನಾ
ಎಂದೀಗಿ ತಪ್ಪಲ್ಲ ತಾಯಿ ಬಂದ ಮರಣಾ

ಅದೇತಾನೇ ಲಗ್ನವಾಗಿ ಕುಳಿತಿದ್ದ ಹೆಂಡತಿಯು ಮಹಾಭಾರತದ ಅಭಿಮನ್ಯುವಿನ ಹೆಂಡತಿ ಉತ್ತರೆಯನ್ನು ನೆನಪಿಸುವಳು. ಆಗ ಆಕೆ–

ಕಾಸೀಮನ ಮಡದಿ ಕೈ ಮುಗಿದು ಹೇಳತಾಳಾ
ಪೋಗಬ್ಯಾಡ್ರಿ ಕೇಳಿರಿ ಎನ್ನ ವಚನಾ
ನಿಮನಗಲಿ ಹ್ಯಾಂಗ ಇರು ನಾನಾ
ನಿಮ್ಮ ಸಂಗಟ ಬರತಿನಿ ನಾನಾ

ಎನ್ನುವಳು ಮುಂದೆ ಘನಘೋರವಾದ ಯುದ್ಧ ನಡೆಯುತ್ತದೆ.

ಕಾಸೀಮನ ನೋಡಿ ಕಚ್ಚಿಕೊಂಡ ದವಡಿ
ಓಡಿ ಬಂದ ಒಬ್ಬ ಪೈಲವಾನಾ
ಹಿಂದ ಬಂದು ಹೊಡುತಾ ಮಾಡ್ಯಾರಪ್ಪ
ಕಡಕೊಂಡು ಬಿದ್ದಾನ ಕಾಸೀಮ ಸೆರಣಾ

ಹೊಸ ಮದುಮಗಳಿಗೆ ಕೆಲವೇ ಹೊತ್ತಲ್ಲಿ ರಣದಲ್ಲಿ ಗಂಡ ಸತ್ತ ಸುದ್ದಿ ಬರುತ್ತದೆ. ಆಗ ಆಕೆ ನೆಲಮುಗಿಲು ಒಂದಾಗುವಂತೆ ಅಳುವಳು. ಈ ಪದದಲ್ಲಿ ವೀರಕಾಸಿಮನ ಪ್ರಕರಣವು ಮಹಾಭಾರತದ ಕರ್ಣನ ಸಾಹಸ ಮತ್ತು ಅವನ ವೀರತನವನ್ನು ಹೋಲುವುದು. ಇಲ್ಲಿ ಕುಂತಿ ಅಳುವ ಪ್ರಸಂಗ ಮತ್ತು 'ಹರಿಶ್ಚಂದ್ರ ಕಾವ್ಯ'ದಲ್ಲಿ ಚಂದ್ರಮತಿ ತನ್ನ ಮಗನಾದ ಲೋಹಿತಾಶ್ವನು ಹಾವುಕಡಿದು

ಸತ್ತಾಗ ಅಳುವ ಪ್ರಸಂಗವನ್ನು ಹೋಲುವುದು. ಆದರೆ ಕಾಶೀಮನ ಯುದ್ಧ ಮಾಡುವಾಗ ಅವನ ಸಂಬಂಧಪಟ್ಟವರು ಅಳುವ ಪ್ರಸಂಗಗಳು, ಕೇಳುವವರು ಕರುಳು ಮಿಡಿಯುವಂತೆ ಇವೆ.

ಕಾಸೀಮನ ಮಡದಿ ದುಕ್ಕಾ ಮಾಡದು ನೋಡಿ
ಅಳತಾರೋ ಕರ್ಬಲಾದೊಳಗಿನ ಜನಾ
ರೋನೇಲಗಿ ಜಮೀನ ಆಸಮಾನ
ಇದಿಮಾಯಿ ಬೆನ್ಹತ್ತಿತೇಸೂ ದಿನಾ

ಮೇಲಿನ ಪದದಲ್ಲಿನ ಮೂರನೆಯ ಉರ್ದುವಿನಲ್ಲಿರುವುದು ಗಮನಾರ್ಹ. ಯಾದಗಿರಿ ಭಾಗದಲ್ಲಿ ಪ್ರಚಲಿತವಿರುವ ಇನ್ನೊಂದು ಕಾಸಿಮನ ಹಾಡು ಕೂಡ ಇಷ್ಟೇ ಪರಿಣಾಮಕಾರಿಯಾಗಿದೆ. ಹಜರತ ಹುಸೇನರ ಅಣ್ಣನ ಮಗನಾದ ವೀರಬಾಲಕ ಕಾಸೀಮನನ್ನು ಜನಪದ ಕವಿಗಳು 'ಅರೇಬಿಯದ ಅಭಿಮನ್ಯು' ಎಂದು ಕರೆದಿರುವರು. ಕಾಸಿಮನಿಗೆ ಸಕೀನಾಳ ಜೊತೆಗೆ ಮದುವೆ ನಿಶ್ಚಯವಾಗಿರುತ್ತದೆ. ಕೊಟ್ಟ ಮಾತನ್ನು ಪೂರೈಸಲು ಅದೇ ರಣರಂಗದಲ್ಲಿಯೇ ಮದುವೆಯ ಕಾರ್ಯಕ್ರಮ ನೆರವೇರಿಸಲಾಗುವುದು.

ರಣವೇ ಹಂದರ ಭಲ್ಲೆಯೇ ಕಠಾರಿ
ರಣಗರ್ಜನೆಯೇ ವಾದ್ಯ ಘೋಷಭೇರಿ

ತಲೆಯ ಮೇಲಿನ ಬಾಸಿಂಗ ಇಳಿಸಿದ ಗಂಡ ಯುದ್ಧಕ್ಕೆ ಹೊರಟು ನಿಂತಾಗ ಗಂಡ ಹೆಂಡತಿ ನಡುವೆ ನಡೆವ ಮಾತುಕಥೆ ಕೇಳುಗರ ಕರುಳನ್ನೇ ಕಿವುಚುವಂತಿವೆ.

ನಮ ಬಿಟ್ಟು ಹೋಗತಿರಿ ಲಡಾಯಿಕ ।
ನೀವು ಬರುವುದು ಎಷ್ಟು ದಿನಕ
ಹೇಳಿರಿ ಈ ಕ್ಷಣಕ
ಅದಕ್ಕೆ ಕಾಸಿಮ ಉತ್ತರ ಹೀಗಿದೆ:
ಕಾಮಿನಿ ಯಾಕ ನೀ ಚಿಂತಿ ಮಾಡತಿ ಸಂತೋಷದಿಂದ ಇರಬೇಕ
ಅಲ್ಲಿ ನಮ್ಮ ಪಂಥ ಮುಗಿದ ಮ್ಯಾಕ । ಬರ್ತೀವಿ ಮರ್ತ್ಯಾಕ

ಈ ಮಾತುಕತೆಯು 'ಸಂಗ್ಯಾಬಾಳ್ಯಾ' ನಾಟಕದಲ್ಲಿ ಗಂಗಿಗೂ ವ್ಯಾಪಾರಕ್ಕೆಂದು ಹೊರಟ ಅವಳ ಗಂಡನಿಗೂ ನಡೆಯುವ ಮಾತುಕತೆಯಂತಿದೆ. ಏನು ಹೇಳಿದರೂ ಅವಳಿಗೆ ಸಮಾಧಾನವಾಗುವುದಿಲ್ಲ. ಆಗ–

ಕಾಸೀಮ ಸಾಹೇಬ ಹೇಳಿದ ಸೀಮಾ

ನಾಳೆ ಸ್ವರ್ಗದಾಗ ಬಾರೆ ನೀನಾ

ಅಂಗಿ ತೋಳೀಂದು ಹಿಡಿಯಕೂನಾ

ಎಂದು ಹೇಳವನು. ವೀರ ಅಭಿಮನ್ಯುವಿನಂತೆ ವೈರಿಗಳ ರುಂಡ ಮುಂಡಾಡುತ್ತ ಮರಳಿ ಬರಲೇ ಇಲ್ಲ. ಈ ಸಮಾಚಾರ ಸಿಕ್ಕಾಗಿ ಸಕೀನಾಳ ಪ್ರತಿಕ್ರಿಯೆ ಭಾರತದ ಗೃಹಿಣಿಯಂತಿದೆ. "ಕಟ್ಟಿದ್ದ ಕರಿಮಣಿ ಚಟ್ಟನೆ ಹರದಾಳ ಇಟ್ಟುಕೊಳ್ಳೊದೆದಕ". ಇಲ್ಲಿ ಬರುವ ಸಕೀನಾ ಮತ್ತು ಕಾಸಿಮರ ಪ್ರೇಮದ ಸಂಬಂಧವು ದುರಂತದಲ್ಲಿ ಮುಗಿಯುವುದು. ಇದೊಂದು ಬಗೆಯಲ್ಲಿ ಯುದ್ಧವಿರೋಧಿ ಚಿಂತನೆಯನ್ನು ಕೂಡ ಒಳಗೊಂಡಿರುವ ಪ್ರಸಂಗವಾಗಿದೆ. ಎಲ್ಲ ಬಗೆಯ ರಾಜಕೀಯ ಕದನಗಳೂ ಕುಟುಂಬದಲ್ಲಿರುವ ಮಾನವೀಯ ಸಂಬಂಧಗಳನ್ನು ಭಗ್ನಗೊಳಿಸುತ್ತವೆ ಎಂದು ಈ ಹಾಡುಗಳು ಸೂಚಿಸುತ್ತಿವೆ.

ಈ ಮೊಹರಂ ಹಾಡುಗಳಲ್ಲಿ ಐತಿಹಾಸಿಕ ವಿಷಯಗಳು ತಿಳಿಯುವುದರ ಜೊತೆಗೆ ಐತಿಹಾಸಿಕ ವ್ಯಕ್ತಿಗಳು ತಿಳಿದುಬರುತ್ತಾರೆ. ಇಬ್ರಾಹಿಂ ಮಕ್ಕಾ ಸ್ಥಾಪನೆ ಮಾಡಿರುವುದು. ಸ್ವತಃ ಮಗನಾದ ಇಸ್ಮಾಯಿಲ್‌ನನ್ನು ಬಲಿಕೊಡಲಿಕ್ಕೆ ತಯಾರಾಗುವುದು. ಇವೆಲ್ಲವೂ ಸಾರ್ವಜನಿಕರ ಸಲುವಾಗಿ ಮಾಡುವ ತ್ಯಾಗ ಮನೋಭಾವನೆಯನ್ನು ತೋರಿಸುತ್ತದೆ. ಈ ಬಲಿಪ್ರಸಂಗವು, ಕನ್ನಡದಲ್ಲಿ ಇರುವ ಭಕ್ತಸಿರಿಯಾಳನ ಕಥೆಯನ್ನು ನೆನಪಿಸುತ್ತದೆ. ಸ್ವತಃ ಮಕ್ಕಳನ್ನು ಲೋಕಕಲ್ಯಾಣಕ್ಕೆ ಬಲಿ ಕೊಡಲಿಕ್ಕೆ ಸಿದ್ಧರಾಗಿದ್ದು ಅವರ ಮಾನಸಿಕ ಸಾಮರ್ಥ್ಯವನ್ನು ತಿಳಿಸುತ್ತದೆ. ಹಾಗೆಯೇ ಆ ಕಾಲದಲ್ಲಿ ಇದ್ದ ನರಬಲಿ ಪದ್ಧತಿಯನ್ನೂ ಸೂಚಿಸುತ್ತದೆ.

ದರ್ಪ, ಅನ್ಯಾಯ, ಅತ್ಯಾಚಾರಗಳ ಮೂಲಕ ಧರ್ಮ ಸಾಮ್ರಾಜ್ಯದ ಮಂದಿರಕ್ಕೆ ಹೆಗ್ಗಣದಂತೆ ಮೂಲವಾದ ಯಜೀದನ ಪ್ರಭುತ್ವವನ್ನು ಜನತೆಯ ಕರೆಯ ಮೇರೆಗೆ ಹಸನ ಹುಸೇನರು ವಿರೋಧಿಸಲು ಬಂದುದೇ ಈ ಕರ್ಬಲಾ ಕಾಳಗ. ರಾಕ್ಷಸ ಸ್ವರೂಪಿಯಾದ ಏಜೀದನ ಜನರು ಇಮಾಮ ಹಸನ ಹುಸೇನರ ಅನುಯಾಯಿಗಳನ್ನೆಲ್ಲ ಹೆದರಿಸಿ ಓಡಿಸಿ ಅನ್ನರಿಗೆ ನೀರು ಸಿಗದಂತೆ ಮಾಡಿ ಮೋಸದಿಂದ ಕೊಂದು ಎಲ್ಲ ಕುಟುಂಬದವರು ಕಣ್ಣೀರು ಕಡಲಾಗಿ ಹರಿಸುವಂತಾಯಿತು. ಆದರೂ ತಮ್ಮ ಹೋರಾಟ ನಿಲ್ಲಿಸದೆ ಅವರು ಹುತಾತ್ಮರಾದರು. ಹುಸೇನರಂಥ ನ್ಯಾಯನಿಷ್ಠುರ ಶರಣರು ಇತಿಹಾಸದ ಪುಟಗಳಲ್ಲಿ ಬಹಳ ಕಡಿಮೆ ದೊರೆಯುವರು ಎಂದು ಕವಿ ಹೇಳುತ್ತಾನೆ. ಹಸನ ಹುಸೇನ ಮತ್ತವರ ವೀರಾಧಿವೀರರಾದ ಅಬ್ಬಾಸಲಿ, ಕಾಸೀಮ್‌ಸಾಬ, ಅಲಿ ಅಸಗರರನ್ನು ವೈರಿಗಳು ಮೋಸದಿಂದಲೇ

ಕೊಂದು ಗೆದ್ದ ಏಜೀದ ಕೆಲವು ದಿವಸ ರಾಜ್ಯವಾಳಿದನು. ನಂತರ ಇತಿಹಾಸದಲ್ಲಿ ಅಡಗಿ ಹೋದನು. ಸೋತ ಹಸನ ಹುಸೇನರು ಸೋತು ಕೊಲೆಯಾದರು. ಆದರೆ ಇವತ್ತಿಗೂ ಜಗತ್ತಿನ ಜನರ ಎದೆಯ ಸಾಮ್ರಾಜ್ಯವನ್ನು ತಮ್ಮ ಬಲಿದಾನದ ಗುಣದಿಂದ ಆಳುತ್ತಿರುವರು.

ಅಧ್ಯಾಯ : ಏಳು

ಯಾದಗಿರಿ ಪರಿಸರದ ಮೊಹರಂ ಪದಗಳಲ್ಲಿ ಸಮುದಾಯ ವಿಶಿಷ್ಟ ಪ್ರಜ್ಞೆ

ಅಧ್ಯಾಯ : ಏಳು

ಯಾದಗಿರಿ ಪರಿಸರದ ಮೊಹರಂ ಪದಗಳಲ್ಲಿ ಸಮುದಾಯ ವಿಶಿಷ್ಟ ಪ್ರಜ್ಞೆ

ಸಮುದಾಯ ಎಂದರೆ ಜಾತಿ, ಭಾಷೆ, ಧರ್ಮ ಇಲ್ಲವೇ ಸಂಸ್ಕೃತಿಯ ವಿಶಿಷ್ಟತೆಯ ಕಾರಣದಿಂದಲೇ ಒಟ್ಟಾಗುವ ಸಾಮಾಜಿಕ ಗುಂಪು. ಅಂದರೆ ಭಾರತದಲ್ಲಿ ಜಾತಿ ಸಮುದಾಯಗಳಿವೆ. ಧಾರ್ಮಿಕ ಸಮುದಾಯಗಳಿವೆ. ಭಾಷಿಕ ಸಮುದಾಯಗಳಿವೆ. ಸಾಂಸ್ಕೃತಿಕ ಸಮುದಾಯಗಳಿವೆ. ಈ ಭಾಷೆ, ಸಂಸ್ಕೃತಿ, ಧರ್ಮ, ಜಾತಿಯ ಅಂಶಗಳೂ ಒಮ್ಮೊಮ್ಮೆ ಒಂದೇ ಸಮುದಾಯದಲ್ಲಿ ಕಲಸಿಕೊಳ್ಳುವುದೂ ಉಂಟು. ಮುಸ್ಲಿಮರನ್ನು ಧಾರ್ಮಿಕ, ಭಾಷಿಕ, ಸಾಂಸ್ಕೃತಿಕ ನೆಲೆಗಳಿಂದ ವಿಶಿಷ್ಟ ಸಮುದಾಯ ಎಂದು ನೋಡಬಹುದು. ಉದಾಹರಣೆಗೆ, ಲಂಬಾಣಿಯವರು ಭಾಷಿಕ ಸಮುದಾಯವೂ ಹೌದು. ವಿಶಿಷ್ಟ ಸಂಸ್ಕೃತಿ ಸಮುದಾಯವೂ ಹೌದು. ಕುರುಬರು ಒಂದು ಭಾಷಿಕ ಸಮುದಾಯವೂ ಹೌದು. ವಿಶಿಷ್ಟ ಸಂಸ್ಕೃತಿ ಸಮುದಾಯವೂ ಹೌದು.

ಭಾರತದ ವಿಶೇಷತೆಯೆಂದರೆ, ಈ ಭಾಷಿಕ, ಧಾರ್ಮಿಕ, ಜಾತಿಯ ಸಮುದಾಯಗಳು ತಮ್ಮದಲ್ಲದ ಭಾಷೆಯನ್ನು ಆಡುವುದು, ತಮ್ಮದಲ್ಲದ ಆಚರಣೆಗಳನ್ನು ಸಹ ಆಚರಿಸುವುದು ಮತ್ತು ತಮ್ಮದಲ್ಲದ ಸಂಸ್ಕೃತಿಯನ್ನು ಹೊಂದಿರುವುದು. ಮೊಹರಂ ವಿಷಯದಲ್ಲಿ ಇದನ್ನು ನೋಡಬಹುದು. ಕರ್ನಾಟಕದ ಸಮುದಾಯಗಳಿಗೆ ಮೊಹರಂ ಕೇವಲ ಮುಸ್ಲಿಮರ ಹಬ್ಬವಾಗಿಲ್ಲ. ಎಂತಲೇ ಅದನ್ನು ಕರ್ನಾಟಕದ ಬೇರೆಬೇರೆ ಧಾರ್ಮಿಕ ಭಾಷಿಕ ಜಾತಿಯ ಸಮುದಾಯಗಳು ಕೂಡ ಆಚರಿಸುತ್ತವೆ. ಹಾಗೆ ಆಚರಿಸುವಾಗ ಅವು ತಮ್ಮ ಭಾಷೆ, ಸಂಸ್ಕೃತಿ, ಧರ್ಮದ ಅಂಶಗಳನ್ನು ಸೇರಿಸಿಬಿಡುತ್ತವೆ. ತಮ್ಮ ಬದುಕಿನ ಅನುಭವಗಳನ್ನು ಕೂಡಿಸಿಬಿಡುತ್ತವೆ. ಯಾದಗಿರಿ ಭಾಗದಲ್ಲಿ ಅನೇಕ ಜಾತಿ ಮತ್ತು ಭಾಷಿಕ ಸಮುದಾಯಗಳಿವೆ. ಮುಖ್ಯವಾಗಿ ಮುಸ್ಲಿಂ, ಲಂಬಾಣಿ, ಕುರುಬರು, ಲಿಂಗಾಯಿತರು ಹಾಗೂ ದಲಿತರ ಸಮುದಾಯಗಳಿವೆ. ಈ ಪ್ರದೇಶದಲ್ಲಿ ಬ್ರಾಹ್ಮಣರು, ಲಿಂಗಾಯಿತ ಜನ ಸಮುದಾಯಗಳು ಮೊಹರಂ ಹಬ್ಬದಲ್ಲಿ ಭಾಗವಹಿಸುವುದು ಕಂಡುಬರುತ್ತದೆ. ಆದರೆ ಲಂಬಾಣಿಗಳಷ್ಟು ದೊಡ್ಡ ಪ್ರಮಾಣದಲ್ಲಿ ಇವು ಭಾಗವಹಿಸುವುದಿಲ್ಲ. ಯಾದಗಿರಿ ಪ್ರದೇಶದ ದಲಿತರು, ಹಿಂದುಳಿದಜಾತಿವರು, ದೈಹಿಕ ದುಡಿಮೆಯ ಜನರು ವಿಶೇಷವಾಗಿ ಮೊಹರಂ ಆಚರಣೆ

ಮಾಡುವುದನ್ನು ಕಾಣಬಹುದು. ಒಂದೊಂದು ಸಮುದಾಯವೂ ತನ್ನದೇ ಆದ ಜಾತಿವಿಶಿಷ್ಟವಾದ ಸಂಸ್ಕೃತಿಯನ್ನು ಪಡೆದಿವೆ. ಪ್ರತಿ ಸಮುದಾಯವೂ ಮೊಹರಂ ಬಂದೊಡನೆ ತಮ್ಮದನ್ನು ಬಿಟ್ಟುಕೊಡದೆ, ಮೊಹರಂ ಆಚರಣೆಗಳಲ್ಲಿ ಭಾಗವಹಿಸುತ್ತದೆ. ಈ ಭಾಗವಹಿಸುವಿಕೆಯು ಪ್ರತಿಯೊಂದು ಸಮುದಾಯಕ್ಕೂ ಭಿನ್ನತೆಯನ್ನು ಪಡೆದಿರುತ್ತದೆ.

ಎಲ್ಲ ಮುಸ್ಲಿಮರು ಕೂಡ ಮೊಹರಂ ಆಚರಣೆಯನ್ನು ಒಂದೇ ತರಹ ಆಚರಿಸುವುದಿಲ್ಲ. ಯಾದಗಿರಿ ಭಾಗದ ಸುನ್ನಿ ಪಂಗಡದವರು ಈ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುವರು. ಯಾದಗಿರಿ ಭಾಗದಲ್ಲಿ 'ಶಿಯಾ' ಪಂಗಡದವರ ಸಂಖ್ಯೆ ಕಡಿಮೆಯಿದೆ. ಈ ಪಂಗಡದವರು ಸಾರ್ವಜನಿಕವಾಗಿ ಹಿಂದುಗಳಜತೆ ಸೇರಿ ಮಾಡುವ ಮೊಹರಮ್ಮಿನಲ್ಲಿ ಭಾಗವಹಿಸುವುದು ವಿರಳ. ಇದಕ್ಕೆ ಕಾರಣ ಶಿಯಾ ಪಂಗಡದವರು ಶ್ರೀಮಂತರು ಸಹ ಆಗಿರುವುದು ಒಂದು ಕಾರಣವಾಗಿದೆ. ಶಿಯಾಗಳ ಮೊಹರಂ ಆಚರಣೆಯು ವಿಶಿಷ್ಟವಾಗಿರುವುದು ಇದಕ್ಕೆ ಕಾರಣವಾಗಿದೆ. ಆದರೆ ಸುನ್ನಿ ಪಂಗಡದವರು ಎಲ್ಲಾ ಜಾತಿಧರ್ಮಗಳವರ ಪಂಗಡದವರ ಜೊತೆ ಸೇರಿಕೊಂಡು ಮೊಹರಂ ಹಬ್ಬವನ್ನು ಆಚರಿಸುವುದನ್ನು ಕಾಣುತ್ತೇವೆ.

ಯಾದಗಿರಿ ಭಾಗದ ಲಂಬಾಣಿ ಜನಾಂಗದವರು ತಮ್ಮ ಸಂಸ್ಕೃತಿಯನ್ನು ಇಟ್ಟುಕೊಂಡೇ ಮೊಹರಂ ಆಚರಣೆ ಮಾಡುತ್ತಾರೆ. ಪ್ರತಿಯೊಂದು ಸಮುದಾಯವು ತಮ್ಮದೇ ಆದ ರೀತಿಯ ಹಾಡುಗಳನ್ನೂ ರಚಿಸಿಕೊಂಡು 'ಅಲಾವಿ' ಕುಣಿತದ ಸಂದರ್ಭದಲ್ಲಿ ಮೊಹರಂ ಹಾಡುಗಳನ್ನು ಹಾಡುವುದುಂಟು. ಈ ಭಾಗದಲ್ಲಿ ಹೆಚ್ಚಿನ ಮೊಹರಂ ಹಾಡುಗಳನ್ನು ಹಾಡುವ ಗಾಯಕರು ದಲಿತ ಸಮುದಾಯದವರು. ಹಿಂದುಳಿದ ಜಾತಿಯವರು. ದುಡಿಯುವ ವರ್ಗದವರು. ಇವರು ತಮ್ಮ ಬದುಕಿನ ನೋವು-ನಲಿವುಗಳನ್ನು ಈ ಮೊಹರಂ ಹಬ್ಬದ ಸಂದರ್ಭದಲ್ಲಿ ಅಭಿವ್ಯಕ್ತಿಗೊಳಿಸುವಂತೆ ಈ ಹಾಡುಗಳನ್ನು ಹಾಡುತ್ತಾರೆ. ಈ ಪ್ರದೇಶವು ದುಡಿಮೆದಾರರು ಹೆಚ್ಚಾಗಿರುವ ಪ್ರದೇಶವಾಗಿದೆ. ಮೊಹರಂ ಹಬ್ಬದ ಸಮಯದಲ್ಲಿ ಜನ ತಮ್ಮ ಜೀವನದ ಅನುಭವಗಳನ್ನು ಸಾಹಸವನ್ನು ಸೃಜನಶೀಲತೆಯನ್ನು ಹಂಚಿಕೊಂಡು ಹಗುರವಾಗುವಂತೆ ಹಾಡುತ್ತಾರೆ. ಈ ಸನ್ನಿವೇಶದಲ್ಲಿ ಇತರೆ ಸಮುದಾಯದ ಜನರ ಜತೆ ಒಂದು ಸಮುದಾಯವು ಬೆರೆತು ಹಬ್ಬದ ಆಚರಣೆ ಮಾಡುವುದು ಮಹತ್ವ ಸಂಗತಿಯಾಗಿದೆ. ಆದರೂ ಯಾದಗಿರಿ ಭಾಗದ ಲಂಬಾಣಿ ಜನರು ಆಚರಿಸುವ ಮೊಹರಂ ಹಬ್ಬಕ್ಕೂ, ಈ ಭಾಗದ ಇತರೆ ಜಾತಿ ಸಮುದಾಯದವರು ಮಾಡುವ ಮೊಹರಮ್ಮಿಗೂ ಕೆಲವು ವ್ಯತ್ಯಾಸಗಳಿವೆ. ಅವನ್ನು ಇಲ್ಲಿ ವಿವರಿಸಲು ಯತ್ನಿಸಲಾಗುವುದು.

ಲಂಬಾಣಿಗರ ಮೂಲಸ್ಥಾನ ರಾಜಸ್ಥಾನ. ಇದಕ್ಕೆ ಆಧಾರ ಅವರ ಕುಲಗೋತ್ರ ಸಂಸ್ಕೃತಿ, ಭಾಷೆ ಮತ್ತು ಸಾಹಿತ್ಯಗಳಲ್ಲಿ ಲಭ್ಯವಾಗುತ್ತವೆ. ಈಗಲೂ ರಾಜಾಸ್ಥಾನದ ರಜಪೂತ, ಮರವಾಡಿ, ಗುಜ್ಜರ ಮೊದಲಾದ ಜನರಲ್ಲಿ ಇರುವ ಕುಲ–ಗೋತ್ರ, ಆಚಾರ–ವಿಚಾರ, ಹಬ್ಬ–ಹರಿದಿನ ಸಂಸ್ಕಾರಗಳು ಲಂಬಾಣಿಗಳಲ್ಲಿ ಕಂಡುಬರುತ್ತದೆ. ಹೀಗಾಗಿ ಈ ಸಮಾಜಗಳು ಒಂದೇ ಮೂಲದಿಂದ, ಒಂದೇ ಗೋತ್ರದಿಂದ ಉಗಮವಾಗಿ ತದನಂತರದಲ್ಲಿ ಬೇರೆ ಬೇರೆಯಾಗಿರುವಂತೆ ತೋರುತ್ತದೆ. ರಜಪೂತರೊಂದಿಗೆ ಲಂಬಾಣಿಗರ ಸಂಬಂಧವಿದೆ. ತಮ್ಮ ವರ್ಣರಂಜಿತವಾದ ವೇಷ–ಭೂಷಣಗಳಿಂದ ಎದ್ದು ಕಾಣುವ ಇವರನ್ನು ಬಂಜಾರ, ಲಂಬಾಣಿ, ಲಂಬಾಡಿ, ಸುಕಾಲಿ, ಲಮಾಣಿ ಮುಂತಾದ ಹೆಸರುಗಳಿಂದ ಕರೆಯುವರು. ಕರಾವಳಿ ಮತ್ತು ದಕ್ಷಿಣ ಕರ್ನಾಟಕದಲ್ಲಿ ಕಡಿಮೆ ಇರುವ ಲಂಬಾಣಿಗಳು, ಉತ್ತರ ಕರ್ನಾಟಕದಲ್ಲಿ ಅದರಲ್ಲೂ ಹೈದರಾಬಾದು ಕರ್ನಾಟಕದಲ್ಲಿ ದೊಡ್ಡ ಸಂಖ್ಯೆಯಲ್ಲಿ ಇದ್ದಾರೆ. ಇವರು ವಿಶೇಷವಾದ ಬುಡಕಟ್ಟಿಗೆ ಸೇರಿದವರು. ಈಗೀಗ ಹಳ್ಳಿಗಳಿಗೆ ಹತ್ತಿಕೊಂಡಂತೆ ಇರುವ ತಾಂಡಾಗಳಲ್ಲಿ ನೆಲೆಸಿರುವ ಈ ಜನರು ಒಂದು ಕಾಲಕ್ಕೆ ಅಲೆಮಾರಿಗಳಾಗಿದ್ದವರು. ಆಧುನಿಕ ವಾಹನ ಮುಂತಾದ ಸೌಕರ್ಯವಿಲ್ಲದ ಕಾಲದಲ್ಲಿ ಇವರು ತಮ್ಮ ದನಕರುಗಳ ಮೇಲೆ ಖಾದ್ಯ ಪದಾರ್ಥಗಳನ್ನು ಹೇರಿಕೊಂಡು ಬಂದು ವ್ಯಾಪಾರ ಮಾಡುತ್ತಿದ್ದವರು. ಭಾರತದ ಮೂಲೆಮೂಲೆಗಳಲ್ಲಿ ಸಂಚರಿಸಿದವರು. ಬಂಜಾರ ಶಬ್ದವು ವಣಿಕ ಶಬ್ದದಿಂದ ಬಂದಿದ್ದು ಇವರ ವೃತ್ತಿ ಮೂಲವನ್ನು ಸೂಚಿಸುತ್ತದೆ. ಇವರಲ್ಲಿ ಅನೇಕ ಜನ ವೀರರು ಬ್ರಿಟಿಶರ ವಿರುದ್ಧವಾಗಿ ಹೋರಾಡಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿರುತ್ತಾರೆ. ಆದರೆ ಬ್ರಿಟಿಷ್ ಸರ್ಕಾರ ಈ ಸಮುದಾಯವನ್ನು 'ಅಪರಾಧಿ ಬುಡಕಟ್ಟಿನವರು' ಎಂದು ಪರಿಗಣಿಸಿತ್ತು. ಅಲೆಮಾರಿಗಳಾದ ಕಾರಣದಿಂದಲೇ ಈ ಜನರ ಸಾಮಾಜಿಕ, ಶೈಕ್ಷಣಿಕ ಅಭಿವೃದ್ಧಿ ಕುಂಠಿತವಾಯಿತು. ಈ ಜನರು ಆಡುವ ಬಂಜಾರ ಭಾಷೆಗೆ ಲಿಪಿಯಾಗಲಿ, ಲಿಖಿತ ಸಾಹಿತ್ಯವಾಗಲಿ ಉಪಲಬ್ದವಿಲ್ಲ. ಈ ಜನರಲ್ಲಿ ಮೌಖಿಕ ರೂಪದಲ್ಲಿರುವ ಜನಪದ ಸಾಹಿತ್ಯವಿದೆ. ಲಂಬಾಣಿಗರ ಜನಪದ ಜೀವನ, ಜನಪದ ಸಂಸ್ಕೃತಿಯ ಬಗ್ಗೆ ಈಗಲೂ ಸಮಗ್ರವಾದ ಅಧ್ಯಯನ ನಡೆದಿಲ್ಲ.

ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಮೊಗಲ್ ದೊರೆ ಶಹಜಾನನ ಕಾಲದಲ್ಲಿ ಅವನ ವಜೀರ ಅಸಫ್‌ಖಾನನ ನೇತೃತ್ವದಲ್ಲಿ ಬಿಜಾಪುರದ ಆದಿಶಾಹಿ ರಾಜ್ಯಕ್ಕೆ ದೆಹಲಿಯಿಂದ ಸೈನದೊಂದಿಗೆ (ಕ್ರಿ.ಶ. ೧೬೩೦ರ ಸುಮಾರು) ಲಂಬಾಣಿಗರು ದಕ್ಷಿಣಕ್ಕೆ ಬಂದರು. ದೂರದೂರದ ಪ್ರದೇಶಗಳಲ್ಲಿ ಹೋರಾಡುತ್ತಿದ್ದ ಸೈನ್ಯಕ್ಕೆ ಇವರು ಆಹಾರವನ್ನು ಸರಬರಾಜು ಮಾಡುತ್ತಿದ್ದರು. ಅಸಫಖಾನನ ಜೊತೆಗೆ ಬಂದ ಲಂಬಾಣಿಗಳ ನಾಯಕ ಜಂಗಿಯ ಬಳಿಯಲ್ಲಿ ೧,೮೦,೦೦೦ ಜಾನುವಾರುಗಳು ಹಾಗೂ ಭಂಗಿಯ ಬಳಿಯಲ್ಲಿ ೫೬,೦೦೦ ಜಾನುವಾರುಗಳಿದ್ದವೆಂದು

ತಿಳಿದುಬರುತ್ತದೆ. ಸಂಚಾರದ ಸಮಯದಲ್ಲಿ ಜಂಗಿ-ಭಂಗಿ ನಾಯಕರ ದನಕರುಗಳಿಗೆ ಮೇವು ಹಾಗೂ ನೀರಿನ ಕೊರತೆ ಬಂದಾಗ ಅಸಫ್‌ಖಾನನ ಬಳಿಗೆ ಹೋಗಿ ಅವರು ಕೆಲವು ಸೌಲಭ್ಯಗಳನ್ನು ಕೇಳಿದರು. ಜಂಗಿ-ಭಂಗಿಗಳ ಸೇವೆಯಿಂದ ಸಾಕಷ್ಟು ಸಂತೃಪ್ತನಾಗಿರುವ ಅಸಫ್‌ಖಾನನ್ನು ಅವರಿಗೆ ಸುವರ್ಣಾಕ್ಷರಗಳಿಂದ ಮುದ್ರಿತವಾದ ತಾಮ್ರಪಟದ ಮೇಲೆ ಅಧಿಕಾರವನ್ನು ನೀಡಿದನು. ಸೈನ್ಯಕ್ಕೆ ಆಹಾರ ಸಾಮಾಗ್ರಿಗಳ ಸರಬರಾಜು ಮಾಡುತ್ತಿರುವ ಜತೆಯಲ್ಲಿಯೇ ಲಂಬಾಣಿಗರು ತಮ್ಮ ಮೂಲ ಉದ್ಯೋಗವಾದ ವ್ಯಾಪಾರವನ್ನು ಸಂಪೂರ್ಣವಾಗಿ ಬಿಟ್ಟಿರಲಿಲ್ಲ. ಅವರ ಉದ್ಯೋಗವು ಹಾಗೆಯೇ ಮುಂದುವರೆದಿತ್ತು. ಮುಂದೆ ಈ ಲಂಬಾಣಿಗರು ಇಲ್ಲಿಯೇ ನೆಲೆನಿಂತರು. ಸ್ವತಂತ್ರವಾಗಿ ತಮ್ಮ ತಾಂಡಾಗಳಲ್ಲಿ ನೆಲೆಸಿರುವ ಲಂಬಾಣಿಗಳ ಜನಸಂಖ್ಯೆ ಎಷ್ಟೆಂಬುದು ಖಚಿತವಾಗಿ ಸಿಗುವುದಿಲ್ಲ. ಯಾದಗಿರಿ ಭಾಗದ ಅನೇಕ ತಾಂಡಗಳಿಂದ ಕೂಡಿದ್ದು, ಅಲ್ಲಿ ದೊಡ್ಡ ಪ್ರಮಾಣದಲ್ಲಿ ಲಂಬಾಣಿಗರು ಇದ್ದಾರೆ.

ಈ ಜನರ ಆಚಾರ, ವಿಚಾರ, ಪರಂಪರೆ ಸಂಪ್ರದಾಯ ಮದುವೆ-ಮುಂಜಿ ಹಾಗೂ ರೀತಿ-ನೀತಿಗಳು ವಿಶಿಷ್ಟವಾದುವುಗಳಾಗಿವೆ. ತಮ್ಮದೇ ಆದ ವಿಶಿಷ್ಟ ಸಂಸ್ಕೃತಿ ಪರಂಪರೆಯನ್ನು ಹೊಂದಿದವರು. ಇದಕ್ಕೆ ಒಂದು ಕಾರಣ, ನಗರಗಳಿಂದ ದೂರವಾಗಿ, ಹೆಚ್ಚಾಗಿ ಗುಡ್ಡಗಾಡು ಪ್ರದೇಶಗಳಲ್ಲಿ ತಮ್ಮದೇ ಆದ ಪ್ರತ್ಯೇಕವಾದ ತಾಂಡಗಳನ್ನು ನಿರ್ಮಿಸಿಕೊಂಡು ಇವರು ವಾಸಿಸುವುದು. ಲಂಬಾಣಿಗರಿಗೆ ಮನೆ ದೇವರು, ಕುಲದೇವರು ಊರದೇವರು, ಪೂರ್ವಜರು, ಪಿತೃದೇವತೆಗಳು, ನಾಡ ದೇವತೆಗಳು, ಕಾಡುದೇವತೆಗಳು ಇದ್ದಾರೆ. ಒಂದೊಂದು ರೋಗಕ್ಕೆ, ಒಂದೊಂದು ಸುಖ ಸಮೃದ್ಧಿಗೆ ಒಬ್ಬೊಬ್ಬ ವಿಶಿಷ್ಟ ದೇವತೆ ಅವರಿಗಿದ್ದಾರೆ. ಅಲೆಮಾರಿಗಳಾದ ಲಂಬಾಣಿಗಳು ತಮ್ಮ ವ್ಯಾಪಾರಕ್ಕಾಗಿ ಸಂಚರಿಸುತ್ತಿದುದ್ದರಿಂದ ಅವರಿಗೆ ನಿಶ್ಚಿತವಾದ ಸ್ಥಾನಗಳಿರಲಿಲ್ಲ. ಹೀಗಾಗಿ ಈ ಮೊಹರಂ ಹಬ್ಬವನ್ನು ಆಚರಿಸುವ ಸಂದರ್ಭದಲ್ಲಿ ಅವರ ಎಲ್ಲ ಗುಂಪುಗಳು ಒಂದೆಡೆ ಸೇರಿ ತಮ್ಮ ಸಂತೋಷವನ್ನು ವ್ಯಕ್ತಪಡಿಸುವರು. ತಮ್ಮ ಮಕ್ಕಳ ಮದುವೆ ಮುಂಜಿಗಳನ್ನು ಇದೇ ಸಂದರ್ಭದಲ್ಲಿ ನೇರವೇರಿಸುತ್ತಿದ್ದರು. ಇದೇ ತರಹ ವರ್ಷಕ್ಕೊಮ್ಮೆ ಪರಸ್ಪರ ಸೇರುವ ಇವರು ಮೊಹರಂ ಹಬ್ಬವನ್ನು ಅತೀ ವೈಭವಪೂರ್ಣವಾಗಿ ಆಚರಿಸುತ್ತಾರೆ. ಲಂಬಾಣಿಗರು ಸಾಮಾನ್ಯವಾಗಿ ಶಕ್ತಿ ದೇವತೆಗಳ ಉಪಾಸಕರು. ಮರಿಯಮ್ಮ, ಕರಿಯಮ್ಮ, ದುರ್ಗಮ್ಮ, ಕಂಕಾಳಿ ಮುಂತಾದ ಶಕ್ತಿ ದೇವತೆಗಳನ್ನೂ ಸೇವಾಭಾಯಿ, ಬಾಲಾಜಿ ಮುಂತಾದ ಪುರುಷ ದೇವರುಗಳನ್ನೂ ಅವರು ಪೂಜಿಸುತ್ತಾರೆ.

ಭಾರತದ ಬುಡಕಟ್ಟುಗಳ ಪರಿಸ್ಥಿತಿ ಕಾಲದಿಂದ ಕಾಲಕ್ಕೆ ನಿರಂತರವಾಗಿ ಬದಲಾವಣೆ ಹೊಂದುತ್ತಲೇ ಬಂದಿದೆ. ಬದಲಾವಣೆ ಅನಿವಾರ್ಯವಾದುದು. ಈ ಹಿನ್ನೆಲೆಯಲ್ಲಿ ಯಾದಗಿರಿ

ಭಾಗದ ಲಂಬಾಣಿಗರಲ್ಲಿ ಕೂಡ ಅನೇಕ ಸಾಂಸ್ಕೃತಿಕ ಪರಿವರ್ತನೆ ಆಗಿದೆ. ಲಂಬಾಣಿಗರು ತಾವು ಬದುಕುವ ಪ್ರದೇಶದಲ್ಲಿರುವ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿರುವರು. ಲಂಬಾಣಿಗಳಲ್ಲಿ 'ಹಿಂದೂ' ಎನ್ನಲಾಗುವ ಅನೇಕ ಸಂಪ್ರದಾಯಗಳು ಇರುವುದನ್ನು ಕಾಣಬಹುದು. ಅವರ ಬದುಕಿನ ರೀತಿ ರಿವಾಜುಗಳ ಹೇಲೆ ವೇಷ ಭೂಷಣ ಹಾಗೂ ಭಾಷೆಯ ಮೇಲೆ ಅಲ್ಲಲ್ಲಿಯ ಪ್ರಾದೇಶಿಕವಾದ ಪ್ರಭಾವವನ್ನು ಕಾಣುತ್ತೇವೆ. ಇತರೆ ಸಮುದಾಯಗಳ ಹಬ್ಬಗಳನ್ನು ಅವರು ಉಳಿಸಿಕೊಂಡು ಬಂದಿರುವರು. ಅವುಗಳಲ್ಲಿ ಮುಖ್ಯವಾಗಿ ಲಂಬಾಣಿಗಳು ಪ್ರಮುಖವಾಗಿ ದೀಪಾವಳಿ, ಹೋಳಿ ಹಬ್ಬ, ಗೌರಿಹಬ್ಬ, ದಸರಾ ಹಬ್ಬ ಸೇರಿವೆ. ಹೀಗೆ ಬಹುದೇವತಾರಾಧಕರಾದ ಅವರಿಗೆ, ಮೊಹರಂ ದೇವರುಗಳು ತಮ್ಮ ದೇವರಾಗಿರುವುದು ಸೋಜಿಗವಲ್ಲ.

ಯಾದಗಿರಿ ಭಾಗದ ಲಂಬಾಣಿಗರು ಈ ಹಬ್ಬವನ್ನು ತಮ್ಮ ತಮ್ಮ ಮನೆಯ ದೇವರ ಮೇಲೆ ಆಣೆಮಾಡಿಕೊಂಡು ಆಚರಣೆ ಮಾಡುತ್ತಾರೆ. ಪ್ರತಿ ಊರಿನಲ್ಲಿ ಬೇರೆ ಬೇರೆ ಮೊಹರಂ ಮಸೀದಿಗಳಿವೆ. ಬೇರೆ ಬೇರೆ ಮೊಹರಂ ದೇವರ ಹೆಸರುಗಳಿವೆ. ಉದಾ: ಯಾದಗಿರಿ ತಾಲೂಕಿನ ಗುರುಮಠಕಲ್‌ನಲ್ಲಿ ನಬೀಸಾಹೇಬರ ಮಸೀದಿ ಇದೆ. ಇದು ಈ ಊರಿನ ಲಂಬಾಣಿಗರ ಮನೆ ದೇವರಾಗಿದೆ. ಲಂಬಾಣಿಗರು ದೇವರು ಹಾಗೂ ಧರ್ಮದ ವಿಷಯದಲ್ಲಿ ಭಾವುಕರು. ಇವರಿಗೆ ತಮ್ಮದೇ ಅದ ಯಾವ ದೇವರ ವಿಶಿಷ್ಟ ಮೂರ್ತಿಯೂ ಇರುವುದಿಲ್ಲ. ಇವರು ದೇವರ ಮೂರ್ತಿಗಳಿಗಿಂತ ಅದರೊಳಗೆ ಕಂಡುಕೊಳ್ಳುವ ದೈವತ್ವಕ್ಕೆ ಹೆಚ್ಚಿನ ಮಹತ್ವ ಕೊಡುತ್ತಾರೆ.

ಈ ಭಾಗದ ಜನರು ಹೆಚ್ಚು ಅರಣ್ಯದಲ್ಲಿ ವಾಸವಾಗಿರುವರು. ಇವರಲ್ಲಿ ಹೆಚ್ಚು ಜನರು ಕೃಷಿಯನ್ನೇ ಅವಲಂಬಿಸಿದ್ದಾರೆ. ಈಪ್ರದೇಶವು ಒಳ್ಳೆಯ ಮಳೆ ಬೀಳದ ಪ್ರದೇಶ. ನೀರಾವರಿ ಸೌಲಭ್ಯವಿಲ್ಲ. ಆದ್ದರಿಂದ ಕೃಷಿಯ ಮೇಲೆಯೇ ಪೂರ್ಣ ಅವಲಂಬನೆ ಸಾಧ್ಯವಿಲ್ಲ. ಇದರಿಂದ ಸಣ್ಣಪುಟ್ಟ ವ್ಯಾಪಾರ ಮಾಡಿಕೊಂಡು, ಕೃಷಿಕೂಲಿಕೆಲಸವನ್ನು ಮಾಡಿಕೊಂಡು ಅವರು ಜೀವನ ಸಾಗಿಸುತ್ತಿದ್ದಾರೆ. ಆದಿಲಶಾಹಿ ಕಾಲದಿಂದಲೂ ಇವರು ವ್ಯಾಪಾರದಲ್ಲಿ ಇದ್ದವರಾದ ಕಾರಣ, ಮುಸ್ಲಿಂ ವ್ಯಕ್ತಿಗಳೊಂದಿಗೆ ಹೆಚ್ಚಿನ ವ್ಯಾಪಾರ ಸಂಬಂಧಗಳಿವೆ. ಇದು ಅವರನ್ನು ಈ ಇಸ್ಲಾಂ ಧರ್ಮದ ಆಚರಣೆಗಳಿಗೆ ಹೆಚ್ಚು ಸಮೀಪಗೊಳಿಸಿದೆ. ಕೆಲವರು ಇಸ್ಲಾಮಿಗೆ ಮತಾಂತರ ಕೂಡ ಆಗಿರುವರು. ಈ ಜನರು ಪ್ರಾಚೀನ ಕಾಲದಿಂದಲೂ ಕೂಡ ಇಸ್ಲಾಂ ಸಂಸ್ಕೃತಿಯ ನಿಯಮಗಳು ಪಾಲಿಸಿಕೊಂಡು ಬಂದಿದ್ದಾರೆ. ಇವೆಲ್ಲವೂ ಅವರು ಮೊಹರಂ ಆಚರಣೆಯನ್ನು ಸಹಜವಾಗಿ ಆಚರಿಸಿಕೊಂಡು ಬರಲು ಕಾರಣವಾಗಿವೆ.

ಯಾದಗಿರಿ ಪರಿಸರವು ಆಂಧ್ರದ ಗಡಿಯಲ್ಲಿದೆ. ಹೀಗಾಗಿ ಲಂಬಾಣಿಗರು ಸಹಜವಾಗಿಯೇ ತಮ್ಮ ತಾಯಿನುಡಿ ಲಂಬಾಣಿ ಭಾಷೆಯ ಜತೆ, ಸ್ಥಳೀಯವಾದ ಕನ್ನಡವನ್ನು ಆಡುವರು. ಜತೆಗೆ ತೆಲುಗು, ಹಿಂದಿ, ಮತ್ತು ಉರ್ದುಗಳನ್ನು ಆಡುವರು. ಅದರಲ್ಲೂ ಆಂಧ್ರಪ್ರದೇಶದ ಗಡಿಭಾಗದಲ್ಲಿರುವ ಲಂಬಾಣಿಗರಿಗೆ ಸರಿಯಾಗಿ ಕನ್ನಡ ಭಾಷೆ ಬರುವುದಿಲ್ಲ. ಅವರು ತೆಲುಗು ಭಾಷೆಯ ಹಾಡುಗಳನ್ನು ಹಾಡುವರು. ಉರ್ದು ಭಾಷೆಯ ಹಾಡುಗಳನ್ನು ಹೆಚ್ಚಾಗಿ ಹಾಡುವರು. ಆದರೆ ಆಂಧ್ರ ಗಡಿಯಿಂದ ಈಚೆಗೆ ಇರುವ ತಾಂಡಗಳಲ್ಲಿ ಕನ್ನಡದಲ್ಲಿ ಮೊಹರಂ ಹಾಡುಗಳು ಕೇಳಿಬರುತ್ತವೆ. ಉದಾಹರಣೆಗೆ ಆಂಧ್ರಗಡಿಭಾಗದ ಲಂಬಾಣಿಗರು ಹಾಡುವ ಈ ಕೆಳಗಿನ ಗಮನಿಸಬಹುದು:

ಯನಾಗುಂದಿ ಕೈಲಾಮಿನಾ

ಕ್ಯಾಕಾ ಗೋಡೆರಾ ಕಾಶೀಮ

ಕ್ಯಾರಾ ಗೋಟಿನಾ ತಾಸಿಪೊದುಕು

ಮಾಯಾ ಮಾಯಣ ಕಾಶೀಮ

ಲಂಬಾಣಿಗರು ಮುಸ್ಲಿಮರ ಹಾಗೆ ಮೊಹರಂ ಆಚರಿಸುವುದಿಲ್ಲ. ತಮ್ಮ ಸಂಸ್ಕೃತಿ ಭಾಷೆ ಆಚಾರ ವಿಚಾರಗಳಿಗೆ ತಕ್ಕನಾಗಿ ಹಾಡುಗಳ ರಚನೆ ಮಾಡಿಕೊಂಡು ಮೊಹರಂ ಆಚರಿಸುವರು. ಅವರು ಅಲಾವಿ ಕುಣಿತವನ್ನು ಕುಣಿಯುತ್ತಾರೆ. ಕುಣಿತಕ್ಕೆ ತಕ್ಕಂತೆ ಹಾಡುವುದನ್ನು ರಚನೆ ಮಾಡಿಕೊಂಡಿದ್ದಾರೆ. ಕನ್ನಡ ಉರ್ದು ತೆಲುಗು ಭಾಷೆಯಲ್ಲಿರುವ ಮೊಹರಂ ಹಾಡುಗಳನ್ನು ಲಂಬಾಣಿ ಭಾಷೆಯಲ್ಲಿ ಮರುರಚನೆ ಮಾಡಿಕೊಂಡು ಹಾಡುವರು. ಅವರು ದೇವರನ್ನು ಸ್ಮರಿಸುವ ಸಂದರ್ಭದಲ್ಲಿ ಈ ಕೆಳಗಿನ ಹಾಡು ಹಾಡುತ್ತಾರೆ.

ರಮ ಅವರೇ ರಮ ಅವರೇ

ನಬೀ ಸಾಹೇಬರ ನಮಲೇನ

ಮೊಹರಂ ಮೇಮ ರಮ ಅವರೇ

ನಬೀಸಾಹೇಬರ ಪೂಜಾಕರ ಅವರೇ

ಇದರ ಅರ್ಥ ಮೊಹರಂ ಹಬ್ಬದಲ್ಲಿ ನಮ್ಮ ಮನೆ ದೇವರು ಎಂದು ಪ್ರಸಿದ್ಧಿ ಪಡೆದಿರುವರು ನಬಿಸಾಹೇಬರು. ಅವರನ್ನು ಭಕ್ತಿ ಪೂರ್ವಕವಾಗಿ ನೆನೆಯುತ್ತ ಮೊಹರಂ ಹಬ್ಬದಲ್ಲಿ ಕುಣಿಯೋಣ ಬನ್ನಿ ಎಂಬುದಾಗಿದೆ. ಯಾದಗಿರಿ ಪರಿಸರದಲ್ಲಿ ಅನೇಕ ಲಂಬಾಣಿ ತಾಂಡಗಳಿವೆ. ಆದರೆ ಎಲ್ಲ ತಾಂಡಗಳಲ್ಲೂ ಅದರದೇ ಆದ ಮೊಹರಂ ಮಸೀದಿ ಇಲ್ಲ. ಅಂತಹ ಸನ್ನಿವೇಶದಲ್ಲಿ ಅವರು ತಮ್ಮ ಪಕ್ಕದ ಊರಿಗೆ ಹೋಗಿ ಮೊಹರಂ ಹಾಡನ್ನು ಹಾಡುವುದು ಮತ್ತು ಮೊಹರಂ ಕುಣಿತದಲ್ಲಿ

ಭಾಗವಹಿಸುವುದು ಕಂಡುಬರುತ್ತದೆ. ತಾಂಡದಲ್ಲಿ ಜನಸಂಖ್ಯಾ ಪ್ರಮಾಣವು ಕಡಿಮೆ ಪ್ರಮಾಣದಲ್ಲಿರುವುದರಿಂದ ಅವರು ಜನರು ಹೆಚ್ಚಿರುವ ಕಡೆ ಹೋಗಿ ಅಲ್ಲಿದ್ದ ಜನರೊಂದಿಗೆ ಬೆರೆತು ಮೊಹರಂ ಹಬ್ಬವನ್ನು ಆಚರಿಸುವುದು, ಕಂಡುಬರುತ್ತದೆ.

ಯಾದಗಿರಿಯಲ್ಲಿ ಮೊಹರಮನ್ನು ತಮ್ಮದೇ ಆದ ಜಾತಿವಿಶಿಷ್ಟ ನೆಲೆಯಲ್ಲಿ ಆಚರಿಸುವ ಇನ್ನೊಂದು ಸಮುದಾಯವೆಂದರೆ ಕುರುಬರದು. ಇವರು ಸಹ ತಮ್ಮ ಆರಾಧ್ಯ ದೈವಗಳ ಜತೆಗೆ ಈ ಮೊಹರಂ ಹಬ್ಬವನ್ನು ಆಚರಿಸುತ್ತಾರೆ. ಬೀರಪ್ಪ ಕುರುಬರ ದೇವರು. ಬೀರಪ್ಪ ದೇವರ ಹೆಸರಿನಲ್ಲಿ ಕುರುಬರು ಮೊಹರಂ ಹಬ್ಬದ ಹಾಡುಗಳನ್ನು ಹಾಡುವುದು ಕಂಡುಬರುತ್ತದೆ. ಬೀರಪ್ಪನಿಗೆ ನಬಿಸಾಹೇಬರ ಹೆಸರಿನಿಂದ ಕರೆದುಕೊಳ್ಳುವುದು ಕಂಡು ಬರುತ್ತದೆ. ಯಾದಗಿರಿ ಭಾಗದ ಕುರುಬರು ಮೊಹರಂ ಹಬ್ಬದಲ್ಲಿ ಬೀರಪ್ಪ ದೇವರ ಚರಿತ್ರೆಯನ್ನು ಹಾಡುತ್ತಾರೆ.

ನಾಗಕ್ಕೆ ನಾಗನಸ್ಯೆರಪ್ಪ ನಾಗೇಂದ್ರರಾಯನು ಮಕ್ಕಳೋ

ದೇವಕ್ಕೆ ದೇವಗನ್ನೇರಪ್ಪ ದೇವೇಂದ್ರಾಯನ ಮಕ್ಕಳೋ

ವಕ್ತ ನಿಲ್ಲದ ಬಾಲೇರಪ್ಪ ಮಲಿಮೂಗಿಲ್ಲ ಸೂಳೇರು

ಹಗಲಿ ಹಂಗನ ಬ್ಯಾಟಿ ಆಡವರು ಇರುಳುಗಿಡಿಗನ ಬ್ಯಾಟೆ ಆಡವರು.

ಸುದೀರ್ಘವಾದ ಈ ಹಾಡು ತುಂಬ ವಿವರಗಳಿಂದ ಕೂಡಿದ್ದು, ಕುರುಬರ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿದೆ. ಮೊಹರಂ ಹಬ್ಬವು ಬೇರೆಧರ್ಮದ್ದು, ಅದರಲ್ಲಿ ನಮ್ಮ ದೈವದ ಹಾಡುಗಳನ್ನು ಬೆರೆಸಬಾರದು ಎಂಬ ಪ್ರತ್ಯೇಕತಾ ಮನೋಭಾವವು ಅವರಲ್ಲಿ ಇಲ್ಲದೆ ಇರುವುದು ಇಲ್ಲಿನ ವಿಶೇಷವಾಗಿದೆ. ಹದಿಹರಿಯದ ತರುಣಿಯರಿಗೆ ಮೊಲೆ ಹಾಲು ಬರುವುದಿಲ್ಲ. ಅಂತಹವರ ಹಾಲು ಕುಡಿದು ಬೀರಪ್ಪ ಬೆಳೆದು ದೊಡ್ಡವನಾದ ಎನ್ನುವುದು ಬೀರಪ್ಪನ ಮಹಿಮೆಯನ್ನು ಸಾರುತ್ತದೆ. ಮೊಹರಂ ಹಾಡುಗಳು ಕರ್ಬಲಾದ ವೀರರನ್ನು ಕುರಿತು ಸ್ತುತಿಸುತ್ತವೆ. ಇಂತಹ ವೀರಪರಂಪರೆಯ ಹಾಡುಗಳಲ್ಲಿ ಕುರುಬರ ಬೀರಪ್ಪನಂತಹ ವೀರನ ಹಾಡು ಹೆಚ್ಚು ಸಮಸ್ಯೆಯಿಲ್ಲದೆ ಬೆರೆತುಹೋಗುತ್ತದೆ.

ಕ್ವಾನಾ ಶೂರನ ಪ್ರಾಣಾ ಹೊಡೆದ, ಜಾನ ದೇವ್ರು ಬೀರಪ್ಪನೋ

ಕ್ವಾಣಗನೂರು ನಿರ್ನಾಮ ಮಾಡಿ ಕಾಣಿಸಿದ ಬೀರಪ್ಪನೋ

ಕರಿಸಿದ್ಧನಾಗಿ ಧರೆಯೊಳು ಮೇಲಾಗಿ

ವೆರೆದಾನೋ ಗುರು ಬೀರಪ್ಪನೋ

ಈ ಮೇಲಿನ ಹಾಡಿನಲ್ಲಿ ಬೀರಪ್ಪನ ಶೌರ್ಯವನ್ನು ಗುರುತಿಸಬಹುದು. ಆತ ಲೋಕ

ಕಂಟಕನಾದ ಕ್ವಾಣಾಶೂರನನ್ನು ಸಂಹಾರ ಮಾಡಿ ಜನತೆಯ ನೆಮ್ಮದಿಗೆ ಕಾರಣನಾಗುತ್ತಾನೆ. ವಿಚಿತ್ರವೆಂದರೆ ಮೊಹರಂ ಹಾಡುಗಳಲ್ಲಿ ನಾಯಕನಾದ ಹುಸೇನರು ಲೋಕಕಂಟಕನೆನಿಸಿದ ಯಜೀದನ ವಿರುದ್ಧದ ಯುದ್ಧದಲ್ಲಿ ಪ್ರಾಣಕಳೆದುಕೊಳ್ಳುವುದು.

ಬೀರ ಮತ್ತು ವೀರ ಎಂಬ ಪದಗಳು ಕುರುಬರು ಹಾಡುವ ಹಾಡುಗಳಲ್ಲಿ 'ಪೀರ' ಶಬ್ದದ ಜತೆಗೆ ಸಮನ್ವಯ ಪಡೆಯುತ್ತವೆ. 'ವೀರನು ತಾನಾದ ಬೀರನು ತಾನಾದ ಪೀರನು ತಾನಾದ' ಎಂಬ ಹಾಡಿನಲ್ಲಿ ಈ ಬಗೆಯ ಶಬ್ದಪಲ್ಲಟವಾಗುತ್ತದೆ. ಬೀರನು ಪೀರನೂ ಆಗಿ ಬದಲಾಗುವುದು ಇಲ್ಲಿನ ವಿಶೇಷತೆಯಾಗಿದೆ. ಕುರುಬ ಸಮುದಾಯದ ಹಾಡುಗಾರರು ತಾವು ತಳವಾರ, ಬಾರಕೇರಿ, ವಿಶ್ವಕರ್ಮ, ಮುಸಲ್ಮಾನ ಭಜಂತ್ರಿಯಂತಹ ಹಲವಾರು ಸಮುದಾಯದ ಹಾಡುಗಾರರಿಂದ ಹಾಡು ಕಲಿತ ಬಗ್ಗೆ ಹೇಳುವರು.

ಯಾದಗಿರಿ ಭಾಗದ ಕುರುಬರು ಹಾಡುವ ಮೊಹರಂ ಹಾಡುಗಳಲ್ಲಿ ಅಪಾರವಾದ ವೈವಿಧ್ಯವಿದೆ. ಪೌರಾಣಿಕ, ಐತಿಹಾಸಿಕ ಹಾಡುಗಳಿವೆ. ತತ್ವಪದಗಳಿವೆ. ಶರೀಫ ಸಾಹೇಬರ ಪದ ನೀತಿ ಪದವಿದೆ. ಪತಿವ್ರತಾ ಶಿರೋಮಣಿಯರ ಪದವಿದೆ. ಜನಸಂಖ್ಯೆ ನಿಯಂತ್ರಣ, ವಿದ್ಯುತ್ ಕಡಿತ, ನ್ಯಾಯ ಬೆಲೆ ಅಂಗಡಿಯ ಅವ್ಯವಹಾರ, ಮುಂತಾದ ಸಮಕಾಲೀನ ಈ ಅಂಶಗಳನ್ನು ಗರ್ಭಿಕರಿಸಿಕೊಂಡಿರುವ ಪದಗಳೂ ಇವೆ. ಈಚಿನ ದಿನಗಳಲ್ಲಿ ಈ ಬಗೆಯ ಜನಪ್ರಿಯ ಹಾಡುಗಳು ಮೊಹರಂ ಹಾಡುಪರಂಪರೆಯಲ್ಲಿ ಹೆಚ್ಚು ಸೇರಿಕೊಳ್ಳುತ್ತಿವೆ.

ಮೊಹರಂ ಹಬ್ಬವು ಇಸ್ಲಾಮಿನ ಧಾರ್ಮಿಕ ಪ್ರಮುಖ ಆಚರಣೆಯಾಗಿರುವುದರಿಂದ ಮುಸ್ಲಿಮರು ಸಹಜವಾಗಿಯೇ ಮೊಹರಂ ಆಚರಣೆಯನ್ನು ಆಚರಿಸುತ್ತಾರೆ. ಆದರೆ ಎಲ್ಲ ಮುಸ್ಲಿಮರು ಮೊಹರಂ ಆಚರಿಸುವುದಿಲ್ಲ. ಮೊಹರಂ ಆಚರಿಸುವ ಮುಸ್ಲಿಮರು ಸಂಪ್ರದಾಯವಾದಿ ಮುಸ್ಲಿಮರಿಗಿಂತ ಬೇರೆಯಾಗಿದ್ದಾರೆ. ಹೀಗೆ ಇವರು ತಮ್ಮ ಧಾರ್ಮಿಕ ಪರಂಪರೆಯ ಜತೆಗೆ ಪರಿಸರದಲ್ಲಿರುವ ಇತರೆ ಸಂಸ್ಕೃತಿಗಳ ಪ್ರಭಾವಕ್ಕೆ ತಮ್ಮನ್ನು ತೆರೆದುಕೊಂಡವರು. ಮುಸ್ಲಿಮರಲ್ಲಿಯೇ ಹಳ್ಳಿಗಾಡಿನವರು, ಬಡವರು ಮತ್ತು ಸಾಮಾಜಿಕವಾಗಿ ಹಿಂದುಳಿದವರು ಹೆಚ್ಚಾಗಿ ಮೊಹರಂ ಹಾಡುಗಳನ್ನು ಆಚರಿಸುವರು.

ಬಹುದೇವತಾರಾಧಕ ಹಿಂದೂಗಳು ಮೊಹರಂ ದೇವರುಗಳನ್ನು ತಮ್ಮವೆಂದು ಒಪ್ಪಿಕೊಳ್ಳುವುದು ಅತ್ಯಂತ ಸಹಜವಾಗಿದೆ. ಆದರೆ ಏಕದೇವತಾರಾಧನೆ ಇರುವ ಮುಸ್ಲಿಮರಲ್ಲಿ ಬಹುದೇವತಾವಾದವು, ವಿಗ್ರಹಪೂಜೆಯು ನಿಷಿದ್ಧವಾಗಿದೆ. ಮೊಹರಂ ಹುತಾತ್ಮರನ್ನು ದೇವರುಗಳಂತೆ ಪ್ರತಿಷ್ಠಾಪಿಸಿ ಆರಾಧಿಸುವಲ್ಲಿ ಒಂದು ಬಗೆಯ ಬಹುದೇವತಾರಾಧನೆಯ ಆಯಾಮವಿದೆ. ಸೂಫಿಸಂತರನ್ನು

ದೇವರೆಂದು ಭಾವಿಸಿ ಅವರ ಗೋರಿಗಳ ದರ್ಶನ ಪಡೆಯುವುದು ಕೂಡ ಏಕದೇವತಾರಾಧನೆಗೆ ಒಪ್ಪಿತವಾದ ಆಚರಣೆಯಲ್ಲ. ಆದರೆ ಯಾದಗಿರಿ ಭಾಗದ ಮುಸ್ಲಿಮರು ಮೊಹರಂ ಮತ್ತು ಸೂಫಿ ಸಂತರ ದರ್ಗಾ ಆಚರಣೆಗಳನ್ನು ತಮ್ಮಧರ್ಮದ ಮೂಲಭೂತವಾದಿಗಳನ್ನು ಲೆಕ್ಕಿಸಿದರೆ ಮಾಡುತ್ತಾರೆ. ಐತಿಹಾಸಿಕ, ಪೌರಾಣಿಕ ರಾಮಾಯಣ, ಮಹಾಭಾರತ, ನೀತಿಪದ ಜಾನಪದದಂತಹ ಎಲ್ಲ ಪ್ರಕಾರಗಳಲ್ಲಿ ಮೊಹರಂ ಹಾಡಗಳಾಗಿರುತ್ತದೆ. ಸರ್ವ ಮತ ಪ್ರೀತಿ ಸರ್ವದೈವ ಭಕ್ತಿ ಈ ಹಾಡುಗಳ ವಿಶಿಷ್ಟ ಗುಣ. ಹಾಡಿನ ವೈವಿಧ್ಯಕ್ಕಾಗಿ ಕಥೆ, ವಚನಗಳು ಬಳಕೆಯಾಗುತ್ತದೆ. ಈ ಕತೆಗಳು ಮತ್ತು ವಚನಗಳು ತತ್ವ, ಹಾಸ್ಯ ವಿಡಂಬನೆ ಎಲ್ಲ ವಿಧದಿಂದಲೂ ಕೂಡಿರುತ್ತದೆ. ಬೇರೆ ದೇವರ ಅಥವಾ ಜಾತಿಯ ನಿಂದನೆಗಳಿಗೆ ಇವೆ. ಎಲ್ಲರೂ ತನ್ನದೇ ಎನ್ನುವ ಆರೋಗ್ಯಕರ ಭಾವನೆ ಇಲ್ಲಿ ಕಂಡುಕೊಳ್ಳಬಹುದು. ಆದರೆ ಹೈದರಾಬಾದಿನಲ್ಲಿರುವ ಶಿಯಾಗಳು ಮಾಡುವ ಮೊಹರಮ್ಮಿಗೂ ಯಾದಗಿರಿ ಭಾಗದ ಮುಸ್ಲಿಮರು ಮಾಡುವ ಮೊಹರಮ್ಮಿಗೂ ತುಂಬ ವ್ಯತ್ಯಾಸವಿದೆ. ಶಿಯಾಗಳು ಮಾಡುವ ಮೊಹರಮ್ಮಿನಲ್ಲಿ ಸ್ಥಳೀಯ ಭಾಷೆಗಳಲ್ಲಿ ಹಾಡುಗಳಿಲ್ಲ. ಆದರೆ ಯಾದಗಿರಿ ಭಾಗದ ಸ್ಥಳೀಯ ಮುಸ್ಲಿಮರು ಮಾಡುವ ಮೊಹರಂ ಆಚರಣೆಗಳಲ್ಲಿ ತೆಲುಗು ಕನ್ನಡ ಉರ್ದು ಈ ಮೂರೂಭಾಷೆಯ ಹಾಡುಗಳಿವೆ.

ಕುತೂಹಲಕರ ಸಂಗತಿಯೆಂದರೆ, ಯಾದಗಿರಿ ಭಾಗದ ಮುಸ್ಲಿಂ ಸಮುದಾಯದ ಜನರು ಮುಸ್ಲಿಮರಲ್ಲದ ಜನರಂತೆ ಅಲಾವಿ ಕುಣಿತದಲ್ಲಿ ಭಾಗವಹಿಸುವುದು ಕಡಿಮೆ. ಅವರು ಹೆಚ್ಚಾಗಿ ಅಲಾವಿ ದೇವರ ಅರ್ಚನೆ ಮಾಡುವವರಾಗಿ ಬದಲಾಗುತ್ತಾರೆ. ಮೊಹರಂ ದೇವರುಗಳನ್ನು ಮಸೀದಿಯಲ್ಲಿ ಕೂಡಿಸುವುದು, ಅವಕ್ಕೆ ಶೃಂಗಾರ ಮಾಡುವುದು, ಇತರೆ ಭಕ್ತರು ತಂದುಕೊಡುವ ಹರಕೆಯನ್ನು ಒಪ್ಪಿಸಿಕೊಳ್ಳುವುದು ಇತ್ಯಾದಿ ಕೆಲಸ ಮಾಡುತ್ತಾರೆ. ದೇವರನ್ನು ಕೂರಿಸುವುದಕ್ಕಿಂತ ಮೊದಲು ಹಿರೇಹೊಳೆಯಲ್ಲಿ ದೇವರಿಗೆ ಸ್ನಾನಮಾಡಿಸುವುದು, ದೇವರನ್ನು ಕೂರಿಸುವುದಕ್ಕಿಂತ ಮೊದಲು ಹಿರೇಹೊಳೆ ಸ್ನಾನ ನಡೆಯುತ್ತದೆ. ವಿಶೇಷವಾಗಿ ಐದು ಮುಸ್ಲಿಂ ಧರ್ಮದ ಜನರು ದೇವರು ಮೈಮೇಲೆ ಬರುವುದು. ಬರಿಗಾಲಲ್ಲಿ ಹೊಳೆಗೆ ನಡೆದುಕೊಂಡು ಹೋಗಿ ಸ್ನಾನ ಮಾಡಿ ಶುದ್ಧವಾದ ನೀರನ್ನು ತಂಬಿಗೆಯಲ್ಲಿ ತೆಗೆದುಕೊಂಡು ಯಾರೊಂದಿಗೂ ಮಾತನಾಡದೆ, ಭಕ್ತಿಭಾವದಿಂದ ಮಸೀದಿಯ ಹತ್ತಿರ ಬರುವರು. ಅನಂತರ ತಂದಂತಹ ನೀರಿನಲ್ಲಿ ಪಂಜಗಳನ್ನು ತೊಳೆದು ಕೂರಿಸುವುದು. ದೇವರನ್ನು ಕೂರಿಸುವುದಕ್ಕಿಂತ ಮೊದಲು ಹಿರೇಹೊಳೆ ಸ್ನಾನ ನಡೆಯುತ್ತದೆ. ವಿಶೇಷವಾಗಿ ಐದು ಮುಸ್ಲಿಮರ ಮೇಲೆ ದೇವರು ಮೈಮೇಲೆ ಬರುತ್ತದೆ. ಬರಿಗಾಲಲ್ಲಿ ಹೊಳೆಗೆ ನಡೆದುಕೊಂಡು ಹೋಗಿ ಸ್ನಾನ ಮಾಡಿ ಶುದ್ಧವಾದ ನೀರನ್ನು ತಂಬಿಗೆಯಲ್ಲಿ ತೆಗೆದುಕೊಂಡು ಯಾರೊಂದಿಗೂ

ಮಾತನಾಡದೆ, ಭಕ್ತಿಭಾವದಿಂದ ಮಸೀದಿಗೆ ಬರಲಾಗುತ್ತದೆ. ಆನಂತರ ತಂದಂತಹ ನೀರಿನಲ್ಲಿ ಪಂಜಗಳನ್ನು ತೊಳೆದು ಕೂರಿಸಲಾಗುವುದು. ಬಂದ ಭಕ್ತಜನರು ಮೊಹರಂ ದೇವರ ಮಸೀದಿಯ ಪ್ರಮುಖ ವ್ಯಕ್ತಿಗೆ ನಮಸ್ಕರಿಸುತ್ತಾರೆ. ಪೂಜಾರಿಯ ಸ್ಥಾನ ಪಡೆದಿರುವ ಮುಲ್ಲಾಗಳು ಹರಸುತ್ತಾರೆ. ಹರಕೆ ಸಲ್ಲಿಸುವ ಸಂದರ್ಭದಲ್ಲಿ ಮುಲ್ಲಾಗಳು ಉರ್ದು ಮತ್ತು ಅರಬ್ಬಿ ಭಾಷೆಯಲ್ಲಿರುವ ಫಾತೆಹಾವನ್ನು ಓದಿ ದೇವರಿಗೆ ಹರಕೆಯನ್ನು ಸಲ್ಲಿಸುವುದಕ್ಕೆ ನೆರವಾಗುತ್ತಾರೆ. ಮುಸ್ಲಿಮರು ಹಾಡುವ ಹಾಡುಗಳಲ್ಲಿ ಕನ್ನಡವೂ ಇದೆಯಾದರೂ, ವಿಶೇಷವಾಗಿ ಉರ್ದು ಹಾಡುಗಳನ್ನು ಅವರು ಹಾಡುವರು.

ಆಗೆ ಬಾಗೇಕಿ ದೂರ್ ಮೆಕ್ರೆಸೀ ಕಿಯಾಮತ್ ಹೋಗಯ
ಕೈಸಿ ಕಿಯಾಮತ್ ಹೋಗಯಿ, ಹಜರತ್ ಪೈಗಂಬರಾ
ಬಚ್ಚೋಂಕಿ ಶಹಾದತ್ ಹೋಗಯಿ
ದೌಡ್ತಾಹುವಾ ಘೋಡ ಖುಶಿಮೆ ಡುಬಾ । ಇಸ್ ಘೋಢೇಕೆ ಸವಾರ್ಕು
ಮೈದೇಕ್ತೇ ರೋಯಿ
ಸರ್ ಪಟಕ್ಕೆ ಜಮಾಕೈಸಿ ತಕ್ಲೀಫ್ ದೇದಿಯ, ಅಲ್ಲಾ

ಅವರು ಹಾಡು ಹಾಡುವಾಗ ನೆರೆದ ಭಕ್ತರು, ಪುರುಷರು, ಮಕ್ಕಳು ಹಸ್ಸೇನ್–ಹುಸ್ಸೇನ್, ಹಸ್ಸೇ–ಹುಸ್ಸೇನ್, ಯಾಲೀಮೋಮ್ ದೀನ್ ಎಂದು ಪ್ರತಿಬಾರಿಯೂ 'ದೀನ್' ಕೂಗುವರು. ಹಸ್ಸೇನ್ ಹುಸೇನ್ ಕಿ ದೋಸ್ತಿರಹೋ ದೀನ್, ದುಲಾ ದುಲಾ ಹಸ್ಸನ್ – ಹುಸ್ಸೇನ್ ದುಲಾ ದುಲಾ ಮುಂತಾಗಿ ಕೂಗುವರು. ಬೆಳಿಗ್ಗೆ ಮಸೀದಿಯ ಮುಲ್ಲ ದೇವರು ಕೂರಿಸುವ ಸ್ಥಳದಲ್ಲಿ ಎಣ್ಣೆ ದೀಪ ಹಚ್ಚಿ ಲೋಬಾನದ ಹೊಗೆ ಹಾಕುವನು. ಮುಲ್ಲಾನು ದೇವರಿಗೆ ನಿತ್ಯದ ಫಾತೆಹಾ ಮಾಡುವನು. ಗಂಧದ ರಾತ್ರಿ ಮತ್ತು ಖತಲ್ ರಾತ್ರಿಯ ದಿನ ಮುಲ್ಲಾನು ಪ್ರಮುಖ ಆಚರಣೆಗಳನ್ನು ಮಾಡುವನು. ಹತ್ತನೆಯ ದಿನ ಮಸ್ಲಿಮರು ಮತ್ತು ಹಿಂದೂಗಳು ಸೇರಿಕೊಂಡು ಮೊಹರಂ ದೇವರನ್ನು ಹೊಳೆಗೆ ವಿಸರ್ಜಿಸುವವರು. ಇದನ್ನು ದೇವರು ಸಾಯುವುದು ಎನ್ನುವರು.

ಕೊನೆಯ ದಿನ ಡೋಲಿಯ ಮೆರವಣಿಗೆ ಮಾಡಲಾಗುತ್ತದೆ. ಬಣ್ಣದ ಕಾಗದದಿಂದ ಅಲಂಕರಿಸಿದ ಗುಂಬಜ್ ಆಕಾರದ ಒಂದು ಆಕೃತಿಯಿದು. ಇದು ಶವಸಂಸ್ಕಾರದ ಅಭಿನಯವಾಗಿದೆ. ಈ ಹೊತ್ತಲ್ಲಿ ಎಲ್ಲರೂ ಸೇರಿ ಶೋಕಗೀತೆಯನ್ನು ಹಾಡುತ್ತಾರೆ.

ಬಾಂದ್ ಕರ್‌ವೊ ಷಹದತ್ ಕಾ ನಹೇರಾ
ಬಾದಷ ಕರ್ಬಾಲಾಕಾ ಬಸೀನಾ

ರಂಗ್ ಮೇ ಕಬ್ಬೀರ್ ಮಲ್ಹಾ ಬನೆಗಾ

ದೀನ್ ಮೋ ಈಮಾನ್ ಪರ್ ॥ ಬಾಂದ್ ॥

ಸರ್ ಕಠಾತೆ ಹುಯೇ ಬೋಲೆ ಅಜ್ಯರ್

ರಂಗ್ ಮೇ ಶಬ್ಬೀರ್ ದುಲ್ಹಾ ಬನೇಗಾ

ದೀನ್‌ಮೋ ಈಮಾನ್ ಪರ್ ॥ ಬಾಂದ್ ॥

ಸರ್ ಕಠತೋ ಹುಯ್ ಬೋಲೆ ಅಜಗರ್,

ಬಗ್‌ಶ್‌ದೋ ಮೇರೆ ಶಾನಾಕಿ, ಉಮ್ಮತ್

ಆಯೇ ಬುಲಾ ಮುಸ್ತಫಾಕೆ ವಾಸ್ತೆ

ತೇರಿ ಖುದ್ರತ್ ಕಾಸರ್ ಖಾಬಸೀಗಾ ॥ ಬಾಂದ್ ॥

ಬಿಳಿ ಬಟ್ಟೆಯಿಂದ ಪಂಜೆಯನ್ನು ಸುತ್ತಿ ಬಂದ ದಾರಿಯಲ್ಲಿ ಮುಲ್ಲಾ ಹೇಳಿಕೊಟ್ಟ ವಿದಾಯ ಗೀತೆ ಹಾಡುತ್ತಾ ಜನರು ಮರಳಿ ಬರುವರು. ಆಗ "ಅಲ್ಬಿದಾಯೊ ಅಲ್ಬಿದಾ, ಕ್ಯಾಹುಸೇನಿ ಅಲ್ಬಿದಾ" ವಿದಾಯಗೀತೆ ಹೇಳುವರು.

ಹೀಗೆ ಯಾದಗಿರಿ ಭಾಗದ ಮೊಹರಮ್ಮಿನಲ್ಲಿ ಅನೇಕ ಸಮುದಾಯಗಳು ಒಟ್ಟಿಗೆ ಸೇರಿ ಮೊಹರಂ ಆಚರಿಸಿದರೂ, ಮೊಹರಂ ಹಾಡುಗಳನ್ನು ಹಾಡಿದರೂ, ಪ್ರತಿ ಸಮುದಾಯವೂ ತನ್ನದೇ ಆದ ಧರ್ಮ ಮತ್ತು ಜಾತಿಯ ಹಿನ್ನೆಲೆಯಿಂದ ಬೇರೆಬೇರೆ ಪಾತ್ರಗಳನ್ನು ವಹಿಸುವುದು ಕಾಣುತ್ತೇವೆ. ಈ ಪಾತ್ರಗಳಲ್ಲಿ ಕೆಲವೊಮ್ಮೆ ಶ್ರೇಣೀಕರಣವು ಹಾಗೆ ಉಳಿದುಬರುತ್ತದೆ. ಉದಾಹರಣೆಗೆ ಎಲ್ಲ ಮೊಹರಂ ಆಚರಣೆಗಳಲ್ಲಿ ದಲಿತರು ದೇವರನ್ನು ಹಿಡಿಯುವ ಕೆಲಸ ಮಾಡುವುದಿಲ್ಲ. ಅವರು ಹಲಗೆಯನ್ನು ಬಾರಿಸುವ ಕೆಲಸಕ್ಕೆ ಸೀಮಿತಗೊಳ್ಳುವರು. ಆದರೆ ಹಾಡುವಾಗ ಈ ಭೇದಭಾವಗಳು ಅಳಿದುಹೋಗುತ್ತವೆ.

ಅಧ್ಯಾಯ : ಎಂಟು

ಸಮಾರೋಪ

ಅಧ್ಯಾಯ : ಎಂಟು

ಸಮಾರೋಪ

ಬ್ರಿಟಿಷರು ಜತೆಗೆ ಬಂದ ಯೂರೋಪಿನ ಆಧುನಿಕತೆಯ ಪ್ರಭಾವದಿಂದ ಭಾರತೀಯ ಸಮಾಜವು ಅನೇಕ ರೀತಿಯಲ್ಲಿ ಬದಲಾವಣೆ ಕಂಡಿತು. ವೈಜ್ಞಾನಿಕ ಮನೋಭಾವ, ವೈಚಾರಿಕತೆ, ಸಾಮೂಹಿಕ ಶಿಕ್ಷಣ, ಕೈಗಾರಿಕಾ ಕ್ರಾಂತಿ ಇವುಗಳಿಂದ ಸಮಾಜದಲ್ಲಿ ಅನೇಕ ಬಗೆಯ ಪರಿವರ್ತನೆಗಳು ಸಂಭವಿಸಿದವು. ಈ ಬದಲಾವಣೆಗಳು ಇಲ್ಲಿನ ಸಂಪ್ರದಾಯ, ಧಾರ್ಮಿಕ ನಂಬಿಕೆ, ಕಲೆ ಆಚರಣೆಗಳ ಮೇಲೆ ಕೂಡ ತಮ್ಮ ಪ್ರಭಾವ ಬೀರಿವೆ. ಈ ಹಿನ್ನೆಲೆಯಲ್ಲಿ ಮೊಹರಂ ಹಾಡುಗಳು ಕೇವಲ ಮೌಖಿಕ ನೆಲೆಯಲ್ಲಿ ಪ್ರಕಟವಾಗುತ್ತಿಲ್ಲ. ಅವು ತಂತ್ರಜ್ಞಾನವನ್ನು ಬಳಸಿಕೊಂಡು, ಕೂಡ ಪ್ರಸಾರವಾಗುತ್ತಿವೆ. ಯಾದಗಿರಿ ಭಾಗದಲ್ಲಿ ಅನೇಕ ಮೊಹರಂ ಮಸೀದಿಗಳಲ್ಲಿ ಜೀವಂತ ಕಲಾವಿದರು ಬಂದು ಹಾಡುವುದಕ್ಕೆ ಬದಲಾಗಿ ಸಿಡಿ ಕ್ಯಾಸೆಟ್ಟುಗಳನ್ನು ಹಾಕುವ ಸಂಪ್ರದಾಯವು ಜಾರಿಯಲ್ಲಿ ಬಂದಿದೆ. ಮೊಹರಂ ಹಾಡುಗಳು ರೇಡಿಯೊ ಟಿವಿ ಮುಂತಾದ ಮಾಧ್ಯಮಗಳ ಮೂಲಕ ಕೂಡ ಪ್ರಸಾರ ಪಡೆಯುತ್ತಿವೆ. ಇದರಿಂದ ಮೊಹರಂ ಹಾಡುಗಳು ಈಗ ಬೇರೆಬಗೆಯಲ್ಲಿ ಪ್ರಸಾರವನ್ನು ಪಡೆದಿವೆ. ಇವುಗಳನ್ನು ಅಧ್ಯಯನಮಾಡಲು ವಿಶ್ವವಿದ್ಯಾಲಯದಿಂದ ವಿದ್ವಾಂಸರು ಬರುವುದು, ಕಲಾವಿದರನ್ನು ಭೇಟಿಮಾಡುವುದು, ಸಂಗ್ರಹ ಮಾಡಿದ ಹಾಡುಗಳನ್ನು ಪ್ರಕಟಿಸುವುದು ಇವೆಲ್ಲವೂ ಮೊಹರಂ ಹಾಡುಗಾರರ ಮೇಲೆ ಬೇರೆಬೇರೆ ಪ್ರಭಾವವನ್ನು ಉಂಟುಮಾಡುತ್ತಿವೆ. ಈಚೆಗೆ ಜನರನ್ನು ಧರ್ಮದ ಆಧಾರದಲ್ಲಿ ವಿಭಜನೆ ಮಾಡುವ ರಾಜಕೀಯ ಪಕ್ಷಗಳು ಕರ್ನಾಟಕದಲ್ಲಿ ದೊಡ್ಡ ಪ್ರಮಾಣದಲ್ಲಿ ಪ್ರವೇಶಮಾಡಿವೆ. ಇವುಗಳಿಂದ ಕೂಡುಬದುಕಿನ ಬುನಾದಿಯ ಮೇಲೆ ಹುಟ್ಟುವ ಮೊಹರಂ ಸಂಪ್ರದಾಯವು ಕೊಂಚ ಹಿನ್ನಡೆ ಕಂಡಿದೆ.

ಇವೆಲ್ಲ ಬೆಳವಣಿಗೆಯ ಪ್ರಭಾವವನ್ನು ಯಾದಗಿರಿ ಭಾಗದಲ್ಲಿ ಕೆಲಮಟ್ಟಿಗೆ ಗಮನಿಸಬಹುದು. ಆದರೂ ಮತೀಯ ರಾಜಕಾರಣದ ಪ್ರಭಾವವು ಹೆಚ್ಚು ಮೊಹರಂ ಹಾಡು ಸಂಪ್ರದಾಯವನ್ನು ಕಲಕಿಲ್ಲ ಎಂದು ಹೇಳಬಹುದು. ಯುವ ಜನರು ಈ ಹಾಡುಗಳನ್ನು ಕಲಿಯುವುದನ್ನು ಈಗಲೂ ನೋಡಬಹುದು. ಮೊಹರಂ ಒಂದು ಧಾರ್ಮಿಕ ಅಭಿವ್ಯಕ್ತಿ ಮಾತ್ರವಾಗಿರದೆ, ಊರನ್ನು ಸೃಜನಶೀಲವಾಗಿ ಎಚ್ಚರಗೊಳಿಸುವ ಒಂದು ಸಾಂಸ್ಕೃತಿಕ ವಿದ್ಯಮಾನವಾಗಿದೆ. ಇದರಿಂದ ಎಲ್ಲ

ಬಗೆಯ ಜನರು ಇದರಲ್ಲಿ ಭಾಗವಹಿಸುವರು. ಅದರಲ್ಲೂ ಕಡಿಮೆ ಮಳೆ ಬೀಳುವ ಕೃಷಿಕಾರ್ಮಿಕರಿರುವ ಯಾದಗಿರಿ ಭಾಗದಿಂದ ಬಹಳಷ್ಟು ಕೆಳವರ್ಗಗಳು ದುಡಿಯುವ ಜನರು ಬೇರೆಬೇರೆ ಊರುಗಳಿಗೆ ಗುಳೆಹೋಗುವರು. ಆದರೆ ಅವರೆಲ್ಲರೂ ಮೊಹರಂ ಹೊತ್ತಿಗೆ ತಂತಮ್ಮ ಊರುಗಳಿಗೆ ಮರಳುವರು. ಆದ್ದರಿಂದ ಮೊಹರಂ ಹಬ್ಬವು ಜನರನ್ನು ಮರಳಿ ಒಂದು ಕೇಂದ್ರಕ್ಕೆ ಕೂಡಿಸುವ ಕೆಲಸವನ್ನು ಸಹ ಮಾಡುತ್ತದೆ. ಯಾದಗಿರಿ ಭಾಗವು ಮೂಲತಃ ಕೃಷಿಪ್ರಧಾನ ಚಟುವಟಿಕೆ ಇರುವ ಪ್ರದೇಶವಾಗಿದೆ. ಕೃಷಿಯ ಬದುಕಿಗೆ ಪರಸ್ಪರ ಸಹಕಾರದ ಮಾನವೀಯ ಸಂಬಂಧಗಳು ಚೆನ್ನಾಗಿರುವ ಒಂದು ಸಮಾಜದ ಅಗತ್ಯವಿದೆ. ಇಂತಹ ಸಮಾಜವು ಮೊಹರಂನಂತಹ ಧರ್ಮ ಜಾತಿ ಮತಗಳನ್ನು ಮೀರಿದ ಹಬ್ಬಗಳು ನಡೆಯುಲು ಒಂದು ನೆಲೆಯನ್ನು ಒದಗಿಸುತ್ತದೆ. ಆದ್ದರಿಂದ ಮೊಹರಂ ಹಾಡುಗಳಿಗೂ ಯಾದಗಿರಿ ಭಾಗದ ಆರ್ಥಿಕ ಚಟುವಟಿಕೆಗೂ ಅಲ್ಲಿನ ಸಾಮಾಜಿಕ ರಚನೆಗೂ ಒಂದು ಒಳಸಂಬಂಧವಿದೆ.

ಯಾದಗಿರಿ ಭಾಗದ ಮೊಹರಂ ಹಾಡುಗಳಲ್ಲಿ ಅನೇಕ ಬಗೆಯ ಆಯಾಮಗಳಿವೆ. ಹೆಚ್ಚಿನ ಹಾಡುಗಳು ದುರಂತ ಕತೆಗಳನ್ನು ಒಳಗೊಂಡಿವೆ. ಕೆಲವು ಹಾಡುಗಳು ತತ್ವಪದಗಳಂತೆ ಇವೆ. ಕೆಲವು ಇಸ್ಲಾಮಿನ ಧರ್ಮದ ತಿಳಿವಳಿಕೆಯನ್ನು ಒಳಗೊಂಡಿವೆ. ಅನೇಕ ಹಾಡುಗಳು ಹಾಸ್ಯ ಮತ್ತು ವಿಡಂಬನೆಯಿಂದ ಕೂಡಿವೆ. ಆಶ್ಚರ್ಯವೆಂದರೆ ಕೆಲವು ಹಾಡುಗಳಲ್ಲಿ ಬೇರೆ ದೇವರ ಅಥವಾ ಜಾತಿಯ ನಿಂದನೆಗಳೂ ಇವೆ. ಮೊಹರಂ ಹಾಡುಗಳು ಈ ಭಾಗದ ಜನರ ಆಲೋಚನಕ್ರಮವನ್ನು ಸೂಚಿಸುವಂತಹವಾಗಿವೆ ಎನ್ನಬಹುದು.

ಈ ಯಾದಗಿರಿ ವಿಭಾಗದ ಮೊಹರಂ ಹಾಡುಗಳಲ್ಲಿ ಅದರದ್ದೇ ಆದ ಒಂದು ಛಂದಸ್ಸಿದೆ. ಹಾಡಿನ ಕೊನೆಯಲ್ಲಿ ಅಂತ್ಯಪ್ರಾಸ ಬರುವುದು. ಹಾಡುಗಳು ಒಂದು ಆರಂಭ ಮತ್ತು ಕೊನೆಯನ್ನು ಒಳಗೊಂಡಿವೆ. ಮುಖ್ಯ ಗಾಯಕ ಹಾಡಿದ ಬಳಿಕ ಉಳಿದ ಸಹಗಾಯಕರು ಹಾಡುವರು. ಹೀಗಾಗಿ ಮೊಹರಂ ಹಾಡುಗಳು ವಾಸ್ತವವಾಗಿ ಪುನರುಕ್ತಿ ಆಗುತ್ತವೆ. ಈ ಪುನರುಕ್ತಿ, ಅಂತ್ಯ ಪ್ರಾಸಗಳು ಹಾಡನ್ನು ನೆನಪಿನಲ್ಲಿ ಇಟ್ಟುಕೊಳ್ಳಲು ನೆರವಾಗುತ್ತವೆ. ಆದ್ದರಿಂದ ಮೊಹರಂ ಹಾಡುಗಳ ವಸ್ತುವಿಗೂ, ಹಾಡುವ ಗಾಯಕರಿಗೂ, ಅದರ ಛಂದಸ್ಸಿಗೂ ಹಾಡುಗಳ ಆಶಯಗಳಿಗೂ ಕೇಳುಗರಿಗೂ ಒಳ ಸಂಬಂಧವಿದೆ. ಈ ಹಾಡುಗಳು ಕೇಳುಗರ ಜತೆ ಗಾಯಕರ ಸಂಬಂಧದಿಂದ ಹುಟ್ಟಿ ಬೆಳೆಯುತ್ತವೆ. ಮೊಹರಂ ಹಬ್ಬದ ಆಚರಣೆ ಇಸ್ಲಾಮಿನ ಪವಿತ್ರ ಧರ್ಮಗ್ರಂಥವಾದ ಕುರಾನಿನಲ್ಲಿ ಉಲ್ಲೇಖವಾಗಿಲ್ಲ. ಕಟ್ಟಾ ಇಸ್ಲಾಂ ಮತಾನುಯಾಯಿಗಳು ಮೊಹರಂ ಹಬ್ಬಗಳನ್ನು ಮಾಡುವುದಿಲ್ಲ. ಮೊಹರಂ ಹಬ್ಬ

ಉಳಿದು ಬಂದಿರುವುದು ಹಿಂದೂಗಳ ಜತೆ ಸಹಬಾಳುವೆಯಲ್ಲಿ ಬದುಕುವ ಮುಸ್ಲಿಮರ ಕಾರಣದಿಂದ. ಆದ್ದರಿಂದ ಈ ಕೂಡುಬದುಕಿನ ಸಮಾಜದ ಪ್ರತಿಫಲವಾಗಿ ಮೊಹರಂ ಹಾಡುಗಳ ಭಾಷೆಯು ಕೂಡು ಭಾಷೆಯಾಗಿದೆ. ಅದು ಕನ್ನಡ ಮತ್ತು ಉರ್ದು ಭಾಷೆಗಳ ಮಿಶ್ರಣವನ್ನು ಒಳಗೊಂಡಿದೆ. ಈ ಭಾಷೆಯ ಮಿಶ್ರಣವು ಧರ್ಮಗಳ ದೇವರುಗಳ ಮಿಶ್ರಣವನ್ನು ಮಾಡಿಸುತ್ತದೆ. ಉದಾಹರಣೆಗೆ–

ಇಡಬೇಕು ದೈವಕರುಣ ಮಾಡುವೇ ನಾನು ಶರಣಾ

ಎಡಬಿಡದೆ ಶಿವನ ದ್ಯಾನ ನುಡಿಯುವೆ ನಾನು ಹಸನಾ

ಈ ಒಂದು ಹಾಡು ಆರಂಭವಾಗುತ್ತದೆ. ಗಾಯಕನು ಕೂಡಿದ ದೈವಕ್ಕೆ ವಂದಿಸಿ ತಾನು ಹೇಳಬೇಕಾದುದ್ದನ್ನು ತಿಳಿಸಿ ಮುಂದೆ ಹಾಡುತ್ತಾನೆ. ಇಲ್ಲಿ ಶಿವನ ಧ್ಯಾನಮಾಡುತ್ತ ಹಸನನನ್ನು ನೆನೆಯಲಾಗುತ್ತಿದೆ. ಶಿವನ ಮತ್ತು ಹಸನ ಎಂಬ ಅನುಪ್ರಾಸವು, ಈ ಧಾರ್ಮಿಕ ಸಾಮರಸ್ಯಕ್ಕೆ ಪೂರಕವಾಗಿದೆ. ಯಾದಗಿರಿ ಭಾಗದ ಬಹುತೇಕ ಮೊಹರಂ ಹಾಡುಗಳನ್ನು ರಚಿಸಿದ ಕವಿಗಳು ಕೂಡ ಧಾರ್ಮಿಕ ಸಾಮರಸ್ಯದ ಜೊತೆಗಾರರೇ ಆಗಿರುವರು. ಹಾಡುಗಳ ಕೊನೆಯಲ್ಲಿ ಹಾಡು ಬರೆದ ಕವಿಯ ಹೆಸರು, ಊರು, ಓಣಿ ಮತ್ತು ಜತೆಗಾರನ ಉಲ್ಲೇಖ ಮುಖ್ಯವಾಗಿರುತ್ತವೆ. ಇವರಲ್ಲಿ ಮುಖ್ಯವಾದ ಮೊಹರಂ ಕವಿ ಹಾಡುಗಾರರ ಜೋಡಿ ಎಂದರೆ, ನಿಡಗುಂದಿಯ ಮುಜಾವರ ಕರೀಂ ಮತ್ತು ಬಸಂತಪ್ಪ ಮಾಸ್ತರರದು.

ಮೊಹರಂ ಪದಗಳು ಜಾನಪದ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಗಳು. ಜನಪದರ ದೈನಂದಿನ ಶೈಲಿಯ ಮಾತುಗಾರಿಕೆ, ವಿಶ್ಲೇಷಣೆ, ರಾಗಬದ್ಧವಾಗಿ ಹಾಡುವಿಕೆ, ಹಾಡಿಗೆ ಪ್ರತಿ ಸವಾಲು ಹಾಕಿ ಹಾಡುವ ರೀತಿ, ಐತಿಹಾಸಿಕ ಕಥನವನ್ನು ನೈಜ ಶೈಲಿಯಲ್ಲಿ ನಿರೂಪಿಸುವಿಕೆ ಮೊಹರಂ ಪದಗಳ ವಿಶಿಷ್ಟತೆಯಾಗಿದೆ.

ಹೆಸರೇ ಸೂಚಿಸುವಂತೆ ಈ ಮೊಹರಂ ಪದಗಳು ಮೊಹರಂ ಹಬ್ಬದ ಸಮಯದಲ್ಲಿ ಹಾಡಲಾಗುವ ಹಾಡುಗಳು. ಮೊಹರಂ ಎನ್ನುವದು ಇಸ್ಲಾಮಿಕ್ ಕಾಲಗಣನೆಯಲ್ಲಿ ವರ್ಷದ ಮೊದಲ ತಿಂಗಳಾಗಿದೆ. ಹಜರತ ಮಹಮ್ಮದ ಪೈಗಂಬರರು ಇದೇ ಮೊಹರಂ ತಿಂಗಳ ಹುತಾತ್ಮರಾದರು. ಶೋಕ ಮೂಲವಾದ ಈ ಹಬ್ಬವು ಕರ್ಬಲಾ ಕಾಳಗದ ವೃತ್ತಾಂತವನ್ನು ಒಳಗೊಂಡಿದೆ. ಆದರೆ ಅದು ಕೇವಲ ಶೋಕಕೇಂದ್ರಿತವಾಗಿಲ್ಲ. ಯಾದಗಿರಿ ಭಾಗದ ಮೊಹರಂ ಹಾಡುಗಳಲ್ಲಿ ಅನೇಕ ಹಾಸ್ಯ, ವಿನೋದ, ಶೌರ್ಯದ ಕಥನಗಳೂ ಕೂಡ ಕೂಡಿವೆ.

ಮೊಹರಂ ಹಬ್ಬದ ಮುಖ್ಯ ಆಕರ್ಷಣೆ ಮತ್ತು ಆಚರಣೆ ಎಂದರೆ ಮೊಹರಂ ಹಾಡುಗಳು. ಆದರೆ ಮೊಹರಂ ಕೇವಲ ಸಾಹಿತ್ಯ ಅಥವಾ ಹಾಡುಕೇಂದ್ರಿತ ವಿದ್ಯಮಾನವಲ್ಲ. ಅದು ಹಾಡಿನ

ಜತೆ ಅನೇಕ ಜನಪದ ಕಲೆಗಳನ್ನೂ ಜತೆಯಲ್ಲಿ ಇಟ್ಟುಕೊಂಡಿದೆ. ಉದಾಹರಣೆಗೆ ಮೊಹರಂ ಕುಣಿತವು ಇದರ ಜತೆ ಸೇರುತ್ತದೆ. ಮೊಹರಂ ಅಲಂಕಾರಗಳು ಇದರ ಭಾಗವಾಗಿ ಬರುತ್ತವೆ. ರಂಗು ರಂಗಿನ ಕಾಗದಗಳಿಂದ ತಾಜಿಯ ತಯಾರಿಕೆ, ಹುಲಿವೇಷ, ಅಚ್ಚಳಿ-ಪಿಚ್ಚಳ್ಳಿ, ಕೋಲಾಟ, ಹಲಿಗೆ, ಹೆಜ್ಜೆಮೇಳಗಳ ಪ್ರದರ್ಶನಗಳು ಮೊಹರಂ ಹಾಡುಗಳ ಭಾಗವಾಗಿವೆ. ಆದ್ದರಿಂದ ಯಾದಗಿರಿ ಮೊಹರಂ ಹಾಡುಗಳು ಕೇವಲ ಹಾಡುಗಳಲ್ಲ. ಅವು ಅನೇಕ ಕಲೆಗಳ ಸಂಗಾತಿಯಾಗಿವೆ.

ಮೊಹರಂ ಪದಗಳು ಕೇವಲ ದು:ಖದ ಆಚರಣೆಯನ್ನು ಒಳಗೊಂಡಿಲ್ಲ. ಅವು ಕೇವಲ ಮನರಂಜನೆಯನ್ನು ಒಳಗೊಂಡಿಲ್ಲ. ಅವುಗಳ ಒಳಗೆ ಧಾರ್ಮಿಕ ತಿಳಿವಳಿಕೆಯನ್ನು ಜನರಿಗೆ ಕೊಡುವ ಉದ್ದೇಶವೂ ಇದೆ. ಇವು ಕನ್ನಡ ಜಾನಪದಕ್ಕೆ ಇಸ್ಲಾಮಿಕ್ ಸಂಸ್ಕೃತಿಯ ದೀಕ್ಷೆಯನ್ನು ನೀಡುವ ಕೆಲಸ ಮಾಡುತ್ತವೆ. ಇಲ್ಲಿ ಅನೇಕ ಹೊಸ ವಿಚಾರಗಳನ್ನು ಆಧುನಿಕ ಸಮಾಜಕ್ಕೆ ಹೊಂದಿಕೆಯಾಗುವ ಅನುಭವ ಧಾರೆಯನ್ನು ಹಂಚುವ ಉದ್ದೇಶವಿದೆ. ಮೊಹರಂ ಹಾಡುಗಳಲ್ಲಿ ಪೈಪೋಟಿ ಬಂದಾಗ, ತಿಳಿವಳಿಕೆಯು ಎಷ್ಟು ಮಹತ್ವದ್ದು ಎಂದು ತಿಳಿದುಬರುತ್ತದೆ. ಎದುರಾಳಿಗಳು ಸವಾಲಿನಿಂದ ಹಾಡುವುದನ್ನು ಒಂದು ಜ್ಞಾನದಕದನ ಎಂದು ಸಹ ಕರೆಯಬಹುದು.

ಈ ಭಾಗದ ಸಾಮಾಜಿಕ ಹಾಡುಗಳಲ್ಲಿ ಸೂಫಿ ಸಂತರ ಪ್ರಭಾವವೂ ಇದೆ. ಕರ್ನಾಟಕದಲ್ಲಿ ಸೂಫಿ ಸಂತರಿದ್ದರೂ ಗುಲಬರ್ಗಾ ಭಾಗದಲ್ಲಿ ಸೂಫಿ ಸಂತರ ಸಂಖ್ಯೆ ಬಹಳ. ಆದ್ದರಿಂದ ಯಾದಗಿರಿ ಭಾಗದ ಮೊಹರಂ ಗಾಯಕರು ತಮ್ಮ ಊರಿನ ಮೊಹರಂ ದೇವರನ್ನು ನೆನೆಯುವುದರ ಜತೆಯಲ್ಲೇ ತಮ್ಮ ಭಾಗದ ಸೂಫಿ ಸಂತರನ್ನು ಸಹ ನೆನೆಯುತ್ತಾರೆ. ಉದಾಹರಣೆ 'ಕಾಸಿಂ ಸಾಹೇಬರ ಪದ'ದಲ್ಲಿ ಖಾಕಿ ಗುರುಸಾಹೇಬರ ಧ್ಯಾನ ಮಾಡ್ತೀವಿ ಎಂಬ ಸಾಲು ಬರುತ್ತದೆ. ಇದು ಮೊಹರಂ ಸಂಪ್ರದಾಯದ ಹಾಡುಗಳಿಗೂ ಗುಲಬರ್ಗಾ ಭಾಗದ ಸೂಫಿಗಳಿಗೂ ಇರುವ ಸಂಬಂಧವನ್ನು ಸೂಚಿಸುತ್ತದೆ.

ಮೊಹರಂ ಹಬ್ಬ ಮೂಲತಃ ಇಸ್ಲಾಂ ಧರ್ಮಕ್ಕೆ ಸಂಬಂಧಪಟ್ಟಿದ್ದರೂ ಇದೊಂದು ಎಲ್ಲ ಜಾತಿ ಧರ್ಮದವರು ಕೂಡಿ ಭಾವೈಕ್ಯತೆಯಿಂದ ಆಚರಿಸುತ್ತಿರುವ ಒಂದು ಆಚರಣೆ. ಸೂಫಿದರ್ಗಾಗಳ ಉರುಸು ಮತ್ತು ಹಿಂದೂ ದೇವತೆಗಳ ಜಾತೆಗಳಲ್ಲಿ ಜನರು ದೊಡ್ಡಸಂಖ್ಯೆಯಲ್ಲಿ ಭಾಗವಹಿಸುವುದಕ್ಕೂ ಮೊಹರಂನಲ್ಲಿ ಭಾಗವಹಿಸುವುದಕ್ಕೂ ಬಹಳ ವ್ಯತ್ಯಾಸವಿಲ್ಲ. ಮೊಹರಂ ಪದಗಳು ಕೇವಲ ಒಂದು ಜಾತಿಗೆ ಸೀಮಿತವಾದ, ಒಂದು ಧರ್ಮಕ್ಕೆ ಸೀಮಿತವಾದ ಹಾಡುಗಳಾಗಿರದೇ ಸರ್ವರಿಗೂ ಸರ್ವ ಧರ್ಮಗಳಿಗೂ ಅನ್ವಯವಾಗುವ ವಿಚಾರಗಳನ್ನು ಒಳಗೊಂಡಿವೆ.

ಮೊಹರಂ ಹಾಡುಗಳು ಕೇವಲ ಧಾರ್ಮಿಕ ಆಚರಣೆಗೆ ಸೀಮಿತವಾಗದೆ ಅನೇಕ ಸಮಕಾಲೀನ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಕೆಲಸವನ್ನು ಕೂಡ ಮಾಡುತ್ತವೆ. ವರದಕ್ಷಿಣೆ, ಬಾಲ್ಯವಿವಾಹದಂತಹ ಸಮಾಜದ ಅನಿಷ್ಟ ಪದ್ಧತಿಗಳನ್ನು ವಿರೋಧಿಸುವ ಹಾಡುಗಳಿವೆ. ನೈತಿಕ ಮೌಲ್ಯಗಳನ್ನು ಸಾರುವ ಹಾಡುಗಳಿವೆ. ಕೆಲವು ಹಾಡುಗಳಲ್ಲಿ ಆಧುನಿಕತೆಯ ಹಾವಳಿಯಿಂದ ಜನರು ಕೆಡುತ್ತಿದ್ದು, ಈ ಬಗ್ಗೆ ಜಾಗೃತರಾಗಿರಲು ಸೂಚಿಸುವ ಉದ್ದೇಶವಿದೆ. ಸಮಾಜದ ಒಳಿತು ಕೆಡುಕು ಮೋಸ, ವಂಚನೆಗಳನ್ನು ಬಯಲಿಗೆಳೆಯುತ್ತ ಎಚ್ಚರದಿಂದ ಬದುಕಲು ಸೂಚಿಸುವ ಹಾಡುಗಳಿವೆ. ಮತೀಯ ಸಾಮರಸ್ಯವನ್ನು ಹೆಚ್ಚಿಸುವ ಹಾಡುಗಳಿವೆ. ಆಧುನಿಕ ಸಮಾಜದಲ್ಲಿ ಮಾನವೀಯ ತ್ಯಾಗ ನಿಸ್ವಾರ್ಥತೆ ಹಾಗೂ ಪರೋಪಕಾರ ಮುಂತಾದ ಆದರ್ಶಗಳನ್ನು ಬಿತ್ತುವ ಹಾಡುಗಳಿವೆ.

ದುರ್ಬಲ ವ್ಯಕ್ತಿಗಳು ಬಲಿಷ್ಠರ ಮೇಲೆ ಹೋರಾಟ ಮಾಡುವುದು, ಬಲಿಷ್ಠರು ದುರ್ಬಲರ ಮೇಲೆ ಆಕ್ರಮಣ ಮಾಡುವುದು ಇಲ್ಲಿನ ಹಾಡುಗಳ ಆಶಯವಾಗಿದೆ. ಈ ಹಾಡುಗಳನ್ನು ವರ್ಗಪ್ರಜ್ಞೆಯ ಹಾಡುಗಳು ಎಂದು ಕೂಡ ಕರೆಯಬಹುದು. ಯಾದಗಿರಿ ಭಾಗದ ಜನರ ಬಡತನ ಮತ್ತು ಸಾಮಾಜಿಕ ಹಿಂದುಳಿಯುವಿಕೆಗೂ ಈ ಹಾಡುಗಳಿಗೂ ನೇರಸಂಬಂಧವಿದೆ.

ಬಹಳಷ್ಟು ಮೊಹರಂ ಹಾಡುಗಳಲ್ಲಿ ಮಹಿಳೆಯರು ಪಾತ್ರಧಾರಿಗಳು. ಶೀಲದ ಮೇಲೆ ಆಗುವ ಆಕ್ರಮಣ, ಅದನ್ನು ಉಳಿಸಿಕೊಳ್ಳಲು ಅವರು ಮಾಡುವ ಹೋರಾಟ ಇಲ್ಲಿನ ಹಾಡುಗಳಲ್ಲಿ ಬರುತ್ತದೆ. ಉದಾಹರಣೆಗೆ ಗಂಗೂಬಾಯಿಯ ಹಾಡು. ಆದರೆ ಕಾಸಿಬಾಯಿಯ ಹಾಡಿನಲ್ಲಿ ಈ ಭಾಗದ ಸ್ತ್ರೀಯರು ಕೇವಲ ಅಂಜುಗುಳಿಗಳಲ್ಲ. ಅವರು ಧೈರ್ಯ ಸಾಹಸ ಉಳ್ಳವರು ಎಂಬ ಸೂಚನೆಯಿದೆ. ಕಾಸಿಬಾಯಿ ಪದಗಳಲ್ಲಿ ಮತ್ತು ಗಂಗೂಬಾಯಿ ಪದಗಳಲ್ಲಿ ಧೈರ್ಯವಂತಿಕೆ ಒಡಮೂಡಲು ಮೊಹರಂ ದೇವರುಗಳಾದ ಹಸನ್-ಹುಸೇನರೇ ಕಾರಣೀಭೂತರಾಗಿದ್ದಾರೆ. ಆದರೂ ಇಲ್ಲಿ ಹಾಡುಗಳು ಪಾತಿವ್ರತ್ಯಕ್ಕೆ ಅತಿಹೆಚ್ಚು ಮಹತ್ವ ಕೊಡುವುದನ್ನು ಕಂಡರೆ, ಇಲ್ಲಿ ಪುರುಷವಾದಿ ನಿಲುವು ಇದೆ ಎಂದೇ ಅನಿಸುತ್ತದೆ. ಅನೇಕ ಹಾಡುಗಳಲ್ಲಿ ಮಹಿಳೆಯರು ತಮ್ಮ ಸಂತಾನ ಪಡೆಯುವುದಕ್ಕೆ ಮಾಡುವ ಹೋರಾಟದ ಚಿತ್ರಣವಿದೆ. ಇನ್ನೂ ಕೆಲವು ಕಡೆ ಒಂದೇ ಕುಟುಂಬದ ಇಬ್ಬರು ಮಹಿಳೆಯರು ಸಂಘರ್ಷ ಮಾಡುವ ಚಿತ್ರಗಳಿವೆ. ಉದಾಹರಣೆಗೆ ಅತ್ತಿಸೊಸೆ ಹಾಡು. ಮಹಿಳೆಯರು ಗಂಡಸರ ಮೇಲೆ ಅವಲಂಬನೆಯಾಗುವ ಕುಟುಂಬದ ಪದ್ಧತಿಯಲ್ಲಿ ಇಂತಹ ಸಂಘರ್ಷವು ಸಹಜವಾಗಿದೆ. ಹೆಚ್ಚಿನ ಹಾಡುಗಳಲ್ಲಿ ಕಾಮಾತುರರಾಗಿ ಶೀಲವನ್ನು ಕಳೆದುಕೊಳ್ಳುವ ಮಹಿಳೆಯರು ಬರುತ್ತಾರೆ. ಈ ಎಲ್ಲ ಹಾಡುಗಳಲ್ಲಿ ಒಂದು ಬಗೆಯಲ್ಲಿ ಮಹಿಳೆಯರ ಮೇಲೆ

ಕಟುವಾದ ಟೀಕೆಗಳಿವೆ. ಮೊಹರಂ ಹಾಡುಗಳನ್ನು ಗಂಡಸರೇ ಹಾಡುತ್ತಾರೆ ಎನ್ನುವುದಕ್ಕೂ ಈ ಹಾಡುಗಳ ಆಶಯಕ್ಕೂ ಸಂಬಂಧವಿದೆ.

ಮೊಹರಂ ಪದಗಳು ಕೇವಲ ಇಸ್ಲಾಂ ಧರ್ಮಕ್ಕೆ ಸಂಬಂಧಿಸಿರುವ ಪದಗಳೆಂದು ಸಾಮಾನ್ಯ ಪರಿಕಲ್ಪನೆ ಜನರಲ್ಲಿದೆ. ಆದರೆ ಮೊಹರಂ ಪದಗಳಲ್ಲಿ ಇಸ್ಲಾಮಿಗೆ ಸಂಬಂಧಪಡದ ಹಾಡುಗಳೇ ಹೆಚ್ಚಾಗಿವೆ. ಇಸ್ಲಾಂಮೇತರ ಧರ್ಮಗಳ ಪ್ರಭಾವವು ಇಸ್ಲಾಂ ಧರ್ಮದ ಮೇಲೆ ಹಾಗೂ ಮೊಹರಂ ಪದಗಳ ಮೇಲೆ ಬೀರಿದೆ. ಮೊಹರಂ ಹಾಡುಗಳು ಕಥಾವಸ್ತು, ತಂತ್ರ, ಶೈಲಿ, ವೀರಶೈವ ಧರ್ಮದ ಪ್ರಭಾವಕ್ಕೆ ಒಳಗಾಗಿದೆ. ವೀರಶೈವ ಪಾರಿಭಾಷಿಕ ಪದಗಳಾದ ಶಿವ, ಶಂಬ, ಶರಣ, ಹರ, ಮಹಾದೇವ ಲಿಂಗ, ಶಂಕರ, ಭವಸಾಗರ, ಹರಿ, ಸದ್ಗುರು, ಶ್ರೀಹರಿ, ಮಹಾದೇವ, ಪರಮೇಶ್ವರ, ನಿರಂಜನ, ಅನುಭಾವ, ಕಾಲಜ್ಞಾನ, ಅಲ್ಲಮ ಪ್ರಭು ಇವೇ ಮುಂತಾದ ಶಬ್ದಗಳು, ದೇವತೆ ಮತ್ತು ಶರಣರ ವ್ಯಕ್ತಿನಾಮಗಳು ಮೊಹರಂ ಪದಗಳಲ್ಲಿ ಬಳಕೆಯಾಗಿರುವುದನ್ನು ಕಾಣುತ್ತೇವೆ. ಆದ್ದರಿಂದ ಮೊಹರಂ ಪದಗಳು ಕೇವಲ ಇಸ್ಲಾಂ ಧರ್ಮಕ್ಕೆ ಸೀಮಿತವಾಗಿಲ್ಲ.

ಮೊಹರಂ ಪದಗಳ ಮುಖ್ಯ ಕೇಂದ್ರವೆನಿಸಿಕೊಂಡಿರುವ ಉತ್ತರ ಕರ್ನಾಟಕದಲ್ಲಿ ಜನರು ಆಡುವ ಭಾಷೆಯ ಮೇಲೆ ಉರ್ದು, ಮರಾಠಿ, ತೆಲುಗು, ಫಾರಸಿ ಮತ್ತು ಇಂಗ್ಲಿಷ್ ಭಾಷೆಗಳ ಪ್ರಭಾವವಿದೆ. ಇದು ಮೊಹರಂ ಹಾಡುಗಳ ಮೇಲೆ ಕೂಡ ಪ್ರಭಾವಿಸಿದೆ. ಆದ್ದರಿಂದ ಮೊಹರಂ ಪದಗಳು ಏಕಭಾಷೆಯಲ್ಲಿಲ್ಲ. ಬಹುಭಾಷೆಯಲ್ಲಿವೆ. ಅನ್ಯಭಾಷಾ ಪದಗಳ ಸ್ವೀಕೃತಿಯೂ ಈ ಮೊಹರಂ ಪದಗಳಲ್ಲಿ ಮೇಳೈಸಿಕೊಂಡಿದೆ. ಇದು ಯಾದಗಿರಿ ಭಾಗದ ಮೊಹರಂ ಹಾಡುಗಳ ಚಲನಶೀಲತೆಗೆ ಸಾಕ್ಷಿ ಎನ್ನಿಸುತ್ತದೆ. ಗುಲಬರ್ಗ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಮೊಹರಂ ಹಾಡುಗಳಲ್ಲಿ ಸ್ವಲ್ಪ ಮರಾಠಿ ಪ್ರಭಾವವಿದೆ. ಆದರೆ ಸುರಪುರ, ಶಹಾಪೂರ ತಾಲ್ಲೂಕಿನ ಮೊಹರಂ ಹಾಡುಗಳಲ್ಲಿ ಹೆಚ್ಚು ಕನ್ನಡ ಪದಗಳಿವೆ. ಇವಕ್ಕೆ ಹೋಲಿಸಿದರೆ, ಯಾದಗಿರಿ ತಾಲ್ಲೂಕಿನ ಮೊಹರಂ ಹಾಡುಗಳಲ್ಲಿ ಸ್ವಲ್ಪ ಉರ್ದು ಮತ್ತು ತೆಲುಗು ಭಾಷೆಯ ಪ್ರಭಾವವಿರುವುದು ಕಂಡುಬರುತ್ತದೆ. ಎಲ್ಲಾ ತಾಲ್ಲೂಕುಗಳ ಮೊಹರಂ ಹಾಡುಗಳಲ್ಲಿ ಇಂಗ್ಲಿಷ್ ಭಾಷೆಯು ಸಾಮಾನ್ಯವಾಗಿ ಬೆರೆಯುತ್ತ ಬಂದಿರುವುದು ಕಂಡುಬರುತ್ತದೆ. ಯಾದಗಿರಿ ಭಾಗದ ಬದುಕಿನಿಂದ ಹುಟ್ಟಿದ ಚಿತ್ರಗಳು, ಅಲಂಕಾರಗಳು ನುಡಿಗಟ್ಟುಗಳು ಗಾದೆ ಮಾತುಗಳು ಬೈಗಳು ಮೊಹರಂ ಪದಗಳಲ್ಲಿ ಸಮೃದ್ಧವಾಗಿ ಬಳಕೆಯಾಗಿವೆ.

ಯಾದಗಿರಿ ಪರಿಸರದ ಮೊಹರಂ ಹಾಡುಗಳಲ್ಲಿ ಅನೇಕ ಬದಲಾವಣೆಗಳು ಸಂಭವಿಸುತ್ತಿವೆ. ಆಧುನಿಕತೆಯು ಸಮಾಜದ ಜೀವನವನ್ನು ಬದಲಿಸುವಂತೆ, ಸಮಾಜದ ಭಾಗವಾಗಿರುವ ಜನಪದ

ಸಾಹಿತ್ಯದ ಸ್ವರೂಪವನ್ನೂ ಸಹ ಬದಲಿಸುತ್ತಿವೆ. ಮೊಹರಂ ಹಾಡುಗಾರರು ಕೆಲವು ಬದಲಾವಣೆಗಳನ್ನು ಮಾಡಿಕೊಂಡು ಹಾಡುವುದು ಕಂಡುಬರುತ್ತದೆ. ಕೆಲವು ಸನ್ನಿವೇಶಗಳಲ್ಲಿ ಹಾಡುಗಾರರು ಕೈಯಲ್ಲಿ ಬರೆದ ಹಾಡುಗಳ ಪುಸ್ತಕ ನೋಡಿಕೊಂಡು ಹಾಡುತ್ತಾರೆ. ಕೆಲವೊಮ್ಮೆ ಕ್ಯಾಸೆಟ್ ಇಲ್ಲವೇ ಸಿಡಿಯನ್ನು ನುಡಿಸಿ ಅಲ್ಲಿಂದ ಕಲಿತು ಹಾಡುವುದು ಕೂಡ ಕಂಡುಬರುತ್ತದೆ. ಇದು ಮೌಖಿಕ ಮತ್ತು ನವಮೌಖಿಕ ಎರಡೂ ಪರಂಪರೆಗಳು ಒಟ್ಟಿಗೆ ಇರುವುದನ್ನು ಸೂಚಿಸುತ್ತದೆ.

ಆದರೂ ಮೊಹರಂ ಮೊದಲಿನಷ್ಟು ದೊಡ್ಡ ಶ್ರದ್ಧೆ ಆಸಕ್ತಿಯಲ್ಲಿ ಈಗ ಆಚರಣೆಯಾಗುತ್ತಿಲ್ಲ. ಹೀಗಾಗಿ ಮೊಹರಂ ಪದಗಳನ್ನು ಹಾಡುವ ಕಾರ್ಯಕ್ರಮಗಳೂ ಕಡಿಮೆಯಾಗುತ್ತ ಬಂದಿವೆ. ಮುಸ್ಲಿಮರಲ್ಲಿಯೂ ಮೂಲಭೂತವಾದಿ ಚಳುವಳಿಗಳು ಈಗೀಗ ಹೆಚ್ಚಾಗಿವೆ. ಹೆಚ್ಚುತ್ತಿರುವ ಕೋಮುಗಲಭೆ, ಮತೀಯ ಭಾವನೆಗಳು, ಮತಾಂಧತೆಯ ಗಲಾಟೆಗಳ ಮಧ್ಯೆ ಮೊಹರಂ ಸಂಪ್ರದಾಯ ಕೊಂಚ ಹಿಂಜರಿಯುತ್ತಿದೆ. ಮುಸ್ಲಿಮರಲ್ಲಿ ಪುರೋಹಿತ ಶಾಹಿ ಪ್ರಾಬಲ್ಯ ಹೆಚ್ಚುತ್ತಿರುವಂತೆ ಭಾಸವಾಗುತ್ತಿದೆ. ಇದು ಎಷ್ಟು ಕಾಲ ಉಳಿಯುತ್ತದೆಯೋ ಎಂಬುದು ಖಚಿತವಲ್ಲ. ಕರ್ನಾಟಕದ ಸಾಮಾಜಿಕ ಆರೋಗ್ಯಕ್ಕಾಗಿ ಈ ಹಾಡುವ ಪರಂಪರೆ ಉಳಿಯುವುದು ಅಗತ್ಯವಿದೆ ಎಂದು ಮಾತ್ರ ಹೇಳಬಹುದು.

ಅನುಬಂಧಗಳು

ಅನುಬಂಧಗಳು

೧. ಆಕರ ಗ್ರಂಥಗಳು

ಅ. ಮೊಹರಂ ಸಾಹಿತ್ಯ

೧. ಚೆನ್ನಣ ವಾಲೀಕಾರ, ಗುಲ್ಬರ್ಗಾ ಜಿಲ್ಲೆಯ ಮೊಹರಂ ಪದಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೩

೨. ತೇಜಸ್ವಿ ಕಟ್ಟಿಮನಿ, ರಿವಾಯತ್ ಪದಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೨

೩. ದಸ್ತಗೀರ ಅಲ್ಲೀಭಾಯಿ, ಕರ್ನಾಟಕದ ಮೊಹರಂ ಪದಗಳು, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು, ೧೯೮೪

೪. ಬೀಳಗಿ ಎಚ್.ಎಂ, ರಿವಾಯತಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೨

ಆ. ಪರಾಮರ್ಶನ ಸಾಹಿತ್ಯ

೧. ಅಲ್ಲಮಪ್ರಭು ಬೆಟ್ಟದೂರು, ಎಚ್.ಎಸ್.ಪಾಟೀಲ, (ಸಂ) ತಿರುಗನ್ನಡ, ಸ್ವಾಗತ ಸಮಿತಿ, ೬೨ ನೆಯ, ಅ.ಭಾ.ಕನ್ನಡ ಸಾಹಿತ್ಯ ಸಮ್ಮೇಳನ, ಕೊಪ್ಪಳ.

೨. ದೇಜಗೌ, ಜಾನಪದ ಅಧ್ಯಯನ, ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೧, ೩ನೇ ಮುದ್ರಣ.

೩. ಹಾ.ಮಾ.ನಾಯಕ ಜಾನಪದ ಸ್ವರೂಪ, ತವೆಂ ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೭೧.

೪. ಮೊಹಮ್ಮದ್ ಅಬ್ಬಾಸ್ ಷೂಸ್ತ್ರಿ, ಇಸ್ಲಾಂ ಸಂಸ್ಕೃತಿ, ಅನುವಾದ. ಬಿ.ಎಂ.ಶ್ರೀ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೪೮.

೫. ರಹಮತ್ ತರೀಕೆರೆ, ಕರ್ನಾಟಕದ ಸೂಫಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮.

೬. ಷಹಸೀನಾ ಬೇಗಂ, ಕರ್ನಾಟಕ ಮುಸ್ಲಿಂ, ಜಾನಪದ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦.

೭. ಸೇತು ಮಾಧವರಾವ್ ಪಗಡಿ, ಸೂಫಿ ಸಂಪ್ರದಾಯ, ಅನುವಾದ : ವಿಠಲ್‌ರಾವ್ ಗಾಯಕ್ವಾಡ್, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೪.

೮. ಹಸನಬಿ ಬೀಳಗಿ, ಜಾನಪದ ಸೃಷ್ಟಿ-ದೃಷ್ಟಿ, ಸಾಯಿ ಪ್ರಕಾಶನ, ಧಾರವಾಡ, ೨೦೦೦.

೨. ವಕ್ತೃವಿವರ

(ಹೆಸರು, ವಯಸ್ಸು, ಶಿಕ್ಷಣ, ಜಾತಿ, ಉದ್ಯೋಗ,ಊರು ಈ ಕ್ರಮದಲ್ಲಿ)

ಕಾಶ್ಯಪ್ಪ	೬೨	ಇಲ್ಲ	ಕಬ್ಬಲಿಗ	ಒಕ್ಕುಲತನ	ಮೊದಗಲ್
ಕಿಷ್ಟಪ್ಪ ಮಾದರ್	೩೮	ಇಲ್ಲ	ಕಲಿಂಗ	ಒಕ್ಕುಲತನ	ಗುರುಮಠಕಲ್
ಗೋಪಾಲ	೩೧	ಇಲ್ಲ	ಕುರುಬ	ಒಕ್ಕುಲುತನ	ಯರಗೋಳ
ಗೋವಿಂದ	೨೮	ಇಲ್ಲ	ಕಂಬಾರ	ಒಕ್ಕಲುತನ	ಕೊಲಕುಂಡಾ
ಚೆನ್ನಯ್ಯ	೩೨	ಇಲ್ಲ	ಗೌಡರು	ಒಕ್ಕುಲುತನ	ತಿಪಡಂಪಲ್ಲಿ
ದೊಡ್ಡಬಲಪ್ಪ ಕಾವಲಿ	೬೫	ಇಲ್ಲ	ದಲಿತ	ಒಕ್ಕುಲತನ	ಇಟ್ಕಾಲ್
ದೇವ್ಯಾನಾಯಕ್	೬೦	ಇಲ್ಲ	ಲಂಬಾಣಿ	ಒಕ್ಕುಲತನ	ಯಾದಗಿರಿ
ನಾರಾಯಣರೆಡ್ಡಿ	೪೨	ಇಲ್ಲ	ರೆಡ್ಡಿ	ಒಕ್ಕುಲತನ	ಹಿಮ್ಲಾಪುರ
ನಾಗರೆಡ್ಡಿ	೩೮	ಟಿ.ಸಿ.ಎಚ್.	ರೆಡ್ಡಿ	ಶಿಕ್ಷಕ	ನಜಾರಪೂರ್
ಬಲಭೀಮ	೩೯	ಇಲ್ಲ	ದಲಿತ	ಒಕ್ಕುಲುತನ	ಯರಗೋಳ
ಬಲವಂತ ರೆಡ್ಡಿ	೬೮	ಇಲ್ಲ	ದಲಿತ	ಒಕ್ಕುಲತನ	ಮೊಟನಹಳ್ಳಿ
ಭೀಮಪ್ಪ	೩೫	ರೆಡ್ಡಿ	ಶಿಕ್ಷಕ	ನಜಾರಪೂರ್	
ಭೀಮೇಶಪ್ಪ	೫೮	ಇಲ್ಲ	ದಲಿತ	ಒಕ್ಕುಲುತನ	ಯಾದಗಿರಿ
ಮೊಗಪ್ಪ	೪೮	ಇಲ್ಲ	ದಲಿತ	ಒಕ್ಕುಲತನ	ಪುಟಪಕ್
ರಾಜಮುರಿ ದಾಸರಿ	೬೬	ಇಲ್ಲ	ದಲಿತ	ಒಕ್ಕುಲತನ	ಗುರುಮಠಕಲ್
ರಾಮಚಂದ್ರ	೨೮	ಪಿ.ಯು.ಸಿ.	ಲಂಬಾಣಿ	ಒಕ್ಕುಲುತನ	ಬೋರಬಂಡಾ.
ಲಿಂಗಪ್ಪ ಕುರುಬಾ	೨೮	ಎಲ್.ಎಲ್.ಬಿ.	ಕುರುಬ	ವಿದ್ಯಾರ್ಥಿ	ಬೋರಬಂಡಾ
ವೆಂಕಟಪ್ಪ	೩೬	ಇಲ್ಲ	ಕುರುಬ	ಒಕ್ಕುಲುತನ	ಅಲ್ಲಪೂರ್
ವೆಂಕಟಪ್ಪ	೪೯	ಇಲ್ಲ	ಕಬ್ಬಲಿಗ	ಒಕ್ಕುಲತನ	ಕಕಾಲರಾವ್
ಸಾಯಿಬಣ್ಣ	೪೮	ಇಲ್ಲ	ಕಬ್ಬಲಿಗ	ಒಕ್ಕುಲತನ	ಕಕಾಲವಾರ್
ಸುರೇಶ್ ಪವಾರ	೩೨	ಬಿ.ಎ.	ಲಂಬಾಣಿ	ಒಕ್ಕುಲತನ	ಬೋರಬಂಡಾ
ಸೇವ್ಯಾನಾಯಕ	೩೮	ಇಲ್ಲ	ದಲಿತ	ಒಕ್ಕುಲತನ	ತಿಪಡಂಪಲ್ಲಿ